ಸಂಪುಟ: 04 ಸಂಚಿಕೆ: 314 ಪುಟಗಳು: 08 ಭಾನುವಾರ 26 ಜನವರಿ 2025
www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833 9448225696 +91 8035841833 ₹5
ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ವಿಜಯೇಂದ್ರ ಫೇಲ್

• ಉದಯವಾಹಿನಿ , ಬೆಂಗಳೂರು

ರಾಜ್ಯ ಬಿಜೆಪಿ ನಾಯಕತ್ವದ ವಿರುದ್ಧ ಬಸನಗೌಡ ಪಾಟೀಲ್ ಯತ್ನಾಳ್ ಟೀಂ, ಮಾಜಿ ಸಚಿವ ಬಿ. ಶ್ರೀರಾಮುಲು ಅವರು ಅಸಮಾಧಾನ ಹೊರಹಾಕಿರುವ ಬೆನ್ನಲ್ಲೇ ಮಾಜಿ ಸಿಎಂ ಡಿವಿ ಸದಾನಂದಗೌಡ ಅವರೂ ವಿಜಯೇಂದ್ರ ವಿರುದ್ಧ ಸಿಡಿದೆದ್ದಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಿಜೆಪಿ ರಾಜ್ಯಾಧ್ಯಕ್ಷರಾಗಿ ವಿಜಯೇಂದ್ರ ಅವರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಣೆ ಮಾಡುತ್ತಿಲ್ಲ. ಅವರು ಪಕ್ಷದಲ್ಲಿನ ಅತೃಪ್ತ ನಾಯಕರನ್ನು ವಿಶ್ವಾಸಕ್ಕೆ ಪಡೆಯುವಲ್ಲಿ ಸಂಪೂರ್ಣವಾಗಿ ವಿಫಲವಾಗಿದ್ದಾರೆ ಎಂದು ತಿಳಿಸಿದರು. ಇನ್ನು ನೂತನ ರಾಜ್ಯಾಧ್ಯಕ್ಷರ ನೇಮಕ ಕುರಿತು ಮಾತನಾಡಿದ ಅವರು, ಸಹಮತ ಇರದಿದ್ದರೆ ಪಕ್ಷದಲ್ಲಿ ಚುನಾವಣೆ ನಡೆಯುತ್ತದೆ. ಎಲ್ಲರನ್ನೂ ವಿಶ್ವಾಸಕ್ಕೆ ಪಡೆದು ಚುನಾವಣೆ ಬೇಡ ಅಂದರೆ ಅವಿರೋಧ ಆಯ್ಕೆ ಆಗುತ್ತದೆ ಎಂದು ಹೇಳಿದ್ದು, ಚುನಾವಣೆ ಮೂಲಕ ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಬಗ್ಗೆ ಪರೋಕ್ಷವಾಗಿ ಅಭಿಪ್ರಾಯಪಟ್ಟರು. ನಮ್ಮ ಪಕ್ಷ ಶಿಸ್ತಿನ ಪಾರ್ಟಿ ಎನ್ನುತ್ತಾರೆ.

ರಾಮುಲು ಬಗ್ಗೆ ಇನ್ನೇಲೆ ಸಾರ್ವಜನಿಕವಾಗಿ ಮಾತನಾಡಲ್ಲ.. ಥಂಡಾ ಹೊಡೆದ್ರಾ ರೆಡ್ಡಿ?

• ಉದಯವಾಹಿನಿ , ಬಳ್ಳಾರಿ

ಮಾಜಿ ಸಚಿವ ಬಿ. ಶ್ರೀರಾಮುಲ ಮತ್ತು ಶಾಸಕ ಗಾಲಿ ಜನಾದರ್ನ ರೆಡ್ಡಿ ನಡುವಿನ ವಾಕ್ಸಮರ ಮುಂದುವರಿದಿದ್ದು, ಟಾಂಗ್ ನೀಡುತ್ತಲೇ ರಾಮುಲು ಬಗ್ಗೆ ಇನ್ಮುಂದೆ ಮಾತನಾಡಲ್ಲ ಎಂದು ರೆಡ್ಡಿ ಹೇಳಿದರು. ರಾಮುಲು ವಿಚಾರವಾಗಿ ಏನೇ ಇದ್ದರೂ ಪಕ್ಷದ ವೇದಿಕೆಯಲ್ಲಿ ಮಾತಾಡುವೆ. ಪಕ್ಷದ ವರಿಷ್ಠರು ಸೂಚನೆ ಕೊಟ್ಟಿದ್ದಾರೆ. ಹೀಗಾಗಿ ಪಕ್ಷದ ಚೌಕಟ್ಟಿನಲ್ಲೇ ಮಾತನಾಡುವೆ ಹೊರತು ಮಾಧ್ಯಮಗಳಲ್ಲಿ ಬಹಿರಂಗ ಹೇಳಿಕೆ ನೀಡಲ್ಲ. ಇನ್ನೇಲೆ ಈ ವಿಚಾರದ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಲ್ಲ ಎಂದು ರಾಮುಲು ಅವರಿಗೆ ಕೌಂಟರ್ ನೀಡಿದರು. ಆಸ್ತಿ ವಿಚಾರಕ್ಕೆ ವೈಮನಸ್ಸು ವಿಚಾರ ಎಂಬ ಮಾಧ್ಯಮದವರ ಪ್ರಶ್ನೆಗೆ, ಯಾವುದೂ ಕೂಡಾ ರಹಸ್ಯವಾಗಿ ಉಳಿಯಲ್ಲ, ನಿಧಾನವಾಗಿ ಕಾಲಕ್ರಮೇಣ ಗೊತ್ತಾಗುತ್ತದೆ. ನಾನು ಬಳ್ಳಾರಿಯಲ್ಲೇ ಇರುತ್ತೇನೆ. ಸಮಯ ಬಂದಾಗ ನಿಜ ಏನು ಅಂತಾ ಎಲ್ಲವೂ ಗೊತ್ತಾಗಲಿದೆ ಎಂದರು.

ಮೈಕ್ರೋ ಫೈನಾನ್ಸ್ ಕಿರುಕುಳದಿಂದ ಹೆಂಡತಿಯರನ್ನೆ ಮಾರುವ ಸ್ಥಿತಿ ಬಂದಿದೆ

• ಉದಯವಾಹಿನಿ , ಹುಬ್ಬಳ್ಳಿ

ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ಬೇಸತ್ತು ಎಷ್ಟು ಜನರು ಊರು ಬಿಡುತ್ತಿದ್ದು, ಇದುವರೆಗೂ ರಾಜ್ಯದಲ್ಲಿ ಈ ಒಂದು ಮೈಕ್ರೋಫೈನಾನ್ಸ್ ಸಿಬ್ಬಂದಿಗಳ ಕಿರುಕುಳದಿಂದ ಐದು ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇನ್ನು ಇದೇ ವಿಚಾರವಾಗಿ ವಿಪಕ್ಷ ಉಪನಾಯಕ ಅರವಿಂದ್ ಬೆಲ್ಲದ ಮೈಕ್ರೋಫೈನಾನ್ಸ್ ಕಿರುಕುಳದಿಂದ ಹೆಂಡತಿಯರನ್ನೇ ಮಾರುವ ಸ್ಥಿತಿ ಬಂದಿದೆ ಎಂದು ತಿಳಿಸಿದರು. ಹುಬ್ಬಳ್ಳಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಕಿರುಕುಳ ಹೆಚ್ಚಾಗಿದೆ. ಮೈಕ್ರೋ ಫೈನಾನ್ಸ್ ಕಿರುಕುಳದಿಂದ ಹೆಂಡತಿಯರನ್ನೇ ಮಾರುವ ಸ್ಥಿತಿ ಬಂದಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ. ಮೈಕ್ರೋ ಫೈನಾನ್ಸ್ ಅವರ ಕಿರುಕುಳದಿಂದ ಜನರು ಊರು ಬಿಡುತ್ತಿದ್ದಾರೆ. ಫೈನಾನ್ಸ್ ಸಿಬ್ಬಂದಿಯ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಮೀಟರ್ ಬಡ್ಡಿ ದಂಧೆ, ಜೂಜು, ಡ್ರಗ್ಸ್ ದಂಧೆ ನಡುವೆ ಲಿಂಕ್ ಇದೆ. ಎಲ್ಲಾ ದಂಧೆಗಳು ಒಂದಕ್ಕೊಂದು ಸಂಬಂಧ ಇರುವಂತಹ ವ್ಯವಹಾರವಾಗಿವೆ. ರಾಜ್ಯದಲ್ಲಿ ದಿನೇ ದಿನೇ ಅಪರಾಧ ಪ್ರಕರಣಗಳು ಹೆಚ್ಚುತ್ತಿವೆ. ರಾಜ್ಯ ಕಾಂಗ್ರೇಸ್ ಸರ್ಕಾರ ಸಂಪೂರ್ಣವಾಗಿ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದ್ ಸರ್ಕಾರದ ವಿರುದ್ಧ ವಿಧಾನಸಭೆಯ ವಿಪಕ್ಷ ಉಪನಾಯಕ ಅರವಿಂದ್ ಬೆಲ್ಲದ ಕಿಡಿಕಾರಿದರು.

ಮೈಕ್ರೋ ಫೈನಾನ್ಸ್ ಕಂಪನಿಗಳಿಗೆ ಸಿಎಂ ಎಚ್ಚರಿಕೆ

• ಉದಯವಾಹಿನಿ , ಬೆಂಗಳೂರು

ರಾಜ್ಯದಲ್ಲಿ ನಡೆಯುತ್ತಿರುವ ಮೈಕ್ರೋ ಫೈನಾನ್ಸ್ ಕಂಪನಿಗಳ ಕಿರುಕುಳ ಜಾಸ್ತಿಯಾಗುತ್ತಿದ್ದ ಹಾಗೇ ಕಂಪನಿಗಳ ಪ್ರತಿನಿಧಿಗಳ ಜತೆ ಸಿಎಂ ಸಿದ್ದರಾಮಯ್ಯ ಅವರು ಸಭೆ ನಡೆಸಿದರು. ಗೃಹ ಕಚೇರಿ ಕೃಷ್ಣದಲ್ಲಿ ಸಭೆಯಲ್ಲಿ ಎಚ್ಚರಿಕೆ ನೀಡಿದ ಸಿಎಂ ಅವರು, ನಿಮ್ಮ ವ್ಯವಹಾರ ಹೆಚ್ಚಿಸಿಕೊಳ್ಳಲು ನಿಯಮ ಮೀರಿ ಒಬ್ಬರೇ ಸಾಲಗಾರರಿಗೆ ಮೇಲಿಂದ ಮೇಲೆ ಸಾಲ ಕೊಡುತ್ತಿದ್ದೀರಿ.

ಸಾಲ ತೀರಿಸಲು ಸಾಧ್ಯವಾಗದಿದ್ದಾಗ ನಿಯಮ ಬಾಹಿರ ಕ್ರಮಕ್ಕೆ ಮುಂದಾಗುತ್ತಿದ್ದೀರಿ. ಇದನ್ನು ಸಹಿಸುವುದಿಲ್ಲ ಎಂದರು. ಮಾಧ್ಯಮಗಳಲ್ಲಿ ಮಹಿಳೆಯರ, ವೃದ್ಧರ ಮೇಲೆ ದಬ್ಬಾಳಿಕೆ ನಡೆಸಿರುವ ಪತ್ರಿಕಾ ವರದಿಗಳೂ ನಿತ್ಯ ಬರುತ್ತಿವೆ. ನಾನು ಇದನ್ನೆಲ್ಲಾ ಸಹಿಸುವುದಿಲ್ಲ. ನನ್ನ ಜನರ ರಕ್ಷಣೆಗೆ ನಾನು ಕಠಿಣ ಕ್ರಮ ಕೈಗೊಳ್ಳುತ್ತೇನೆ ಎಂದು ತಾಕೀತು ಮಾಡಿದರು.

ಒಟ್ಟುಗೂಡಿದರೆ ಪಂಚಪ್ರಾಣ ನವಭಾರತದ ನಿರ್ಮಾಣ

ಜನವರಿ 26ರಂದು ಗಣರಾಜ್ಯೋತ್ಸವದ ಆಚರಣೆ

1 ಗಣರಾಜ್ಯೋತ್ಸವಕ್ಕೆ 76ನೇ ಸಂಭ್ರಮ

2 ಗಣರಾಜ್ಯೋತ್ಸವ: ಬಸವರಾಜ್ ಶರಣಪ್ಪ ಜಿಳ್ಳೆ ಸೇರಿ ರಾಜ್ಯದ 21 ಪೋಲೀಸ್ ಅಧಿಕಾರಿಗಳಿಗೆ ರಾಷ್ಟ್ರಪತಿ ಪದಕ

3 ರಕ್ಷಣಾ, ವ್ಯಾಪಾರ ಸಂಬಂಧ ಗಟ್ಟಿಗೊಳಿಸಲು ಒಪ್ಪಿಗೆ; ಇಂಡೋನೇಷ್ಯಾ ಅಧ್ಯಕ್ಷ ಸುಬಿಯಾಂಟೊ ಜೊತೆ ಮೋದಿ ಮಾತುಕತೆ

4 ವರ್ಷದ ಮೊದಲ ರಾಷ್ಟ್ರೀಯ ಹಬ್ಬದ ಆಚರಣೆ

21 ಪೋಲೀಸ್ ಅಧಿಕಾರಿಗಳಿಗೆ ರಾಷ್ಟ್ರಪತಿ ಪದಕ

2025ರ ಗಣರಾಜ್ಯೋತ್ಸವ ದಿನಾಚರಣೆ ಪ್ರಯುಕ್ತ ರಾಷ್ಟ್ರಪತಿ ಪದಕ ಘೋಷಣೆ ಮಾಡಲಾಗಿದ್ದು, ಕರ್ನಾಟಕದ 21 ಪೊಲೀಸ್ ಅಧಿಕಾರಿಗಳು ರಾಷ್ಟ್ರಪತಿ ಪದಕಕ್ಕೆ ಭಾಜನರಾಗಿದ್ದಾರೆ. ವಿಶಿಷ್ಟ ಸೇವೆಗಾಗಿ KSRP DIGP ಬಸವರಾಜ್ ಶರಣಪ್ಪ ಜಿಳ್ಳೆ, ಮತ್ತು ಕೆಎಸ್ ಆರ್ ಪಿ ತುಮಕೂರಿನ ಕಮಾಂಡೆಂಟ್ ಹಂಜಾ ಹುಸೇನ್ ಅವರಿಗೆ ರಾಷ್ಟ್ರಪತಿ ಪದಕ ಘೋಷಣೆಯಾಗಿದೆ. ಬೆಂಗಳೂರಿನ DCRI DIGP ರೇಣುಕಾ ಕೆ ಸುಕುಮಾರ, ಪೊಲೀಸ್ ಪ್ರಧಾನ ಕಚೇರಿಯ ಎಐಜಿಪಿ ಸಂಜೀವ ಎಂ. ಪಾಟೀಲ್ ಅವರ ಗಮನಾರ್ಹ ಸೇವೆ ಗುರುತಿಸಿ ರಾಷ್ಟ್ರಪತಿ ಪದಕ ಘೋಷಣೆ ಮಾಡಲಾಗಿದೆ. ಕೊಪ್ಪಳದ ಮುನಿರಾಬಾದ್ IRI ಕಮಾಂಡೆಂಟ್ ಬಿ.ಎಂ.ಪ್ರಸಾದ್, ಕೆಎಸ್ ಆರ್ ಪಿ ಹಾಸನ ಡೆಪ್ಯೂಟಿ ಕಮಾಂಡೆಂಟ್ ವೀರೇಂದ್ರ ನಾಯಕ್, ಬೆಂಗಳೂರು ಸಿಸಿಬಿ ಗೋಪಾಲ ಡಿ ಜೋಗಿನ, ಚಿಕ್ಕೋಡಿ ಉಪವಿಭಾಗದ ಡಿವೈಎಸ್ ಪಿ ಗೋಪಾಲಕೃಷ್ಣ ಬಿ ಗೌಡರ್, ಚಿತ್ರದುರ್ಗದ ಲೋಕಾಯುಕ್ತ ಪೊಲೀಸ್ ಇನ್ಸ್ ಪೆಕ್ಟರ್ ಹೆಚ್. ಗುರು ಬಸವರಾಜ , ಬೆಂಗಳೂರಿನ ಪೊಲೀಸ್ ಇನ್ಸ್ ಪೆಕ್ಟರ್ ಹೆಚ್. ಜಯರಾಜ್, ಹಾಸನದ ಸರ್ಕಲ್ ಇನ್ಸ್ ಪೆಕ್ಟರ್ ಪ್ರದೀಪ್, ಬೆಂಗಳೂರು ನಗರ ಸಿಸಿಪಿ ಪೊಲೀಸ್ ಇನ್ಸ್ ಪೆಕ್ಟರ್ ಮೊಹಮ್ಮದ್ ಮುಕರಮ್, ಬ್ಯೂರ್ ಆಫ್ ಇಮಿಗ್ ರೇಷನ್ ಪೊಲೀಸ್ ಇನ್ಸ್ ಪೆಕ್ಟರ್ ಎಂ.ಎ. ವಸಂತ್ ಕುಮಾರ್, ಸಿಐಡಿ ಎಎಸ್ ಐ ಮಂಜುನಾಥ ಅವರು ಶ್ಲಾಘನೀಯ ಸೇವಾ ಪದಕ ಪುರಸ್ಕೃತರಾಗಿದ್ದಾರೆ.

ಅಸ್ಸಾಂನಲ್ಲಿ ಭಾರಿ ಪ್ರಮಾಣದ ಸ್ಫೋಟಕ ಪತ್ತೆ

76ನೇ ಗಣರಾಜ್ಯೋತ್ಸವ ಆಚರಣೆಗೆ ದೇಶಾದ್ಯಂತ ಅಂತಿಮ ಹಂತದ ಸಿದ್ಧತೆಗಳು ನಡೆಯುತ್ತಿರುವಂತೆಯೇ ಅಸ್ಸಾಂನಲ್ಲಿ ಭಾರಿ ಪ್ರಮಾಣದ ಸ್ಫೋಟಕ ಪತ್ತೆಯಾಗಿದೆ. ಸೋನಿತ್‌ಪುರ ಜಿಲ್ಲೆಯಲ್ಲಿ ಕಾಡಿನಲ್ಲಿ ಅಡಗಿಸಿಟ್ಟಿದ್ದ ಸ್ಫೋಟಕಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಶೋಧ ಕಾರ್ಯಾಚರಣೆಯ ಸಮಯದಲ್ಲಿ ಐದು ಗ್ರೆನೇಡ್‌ಗಳು, ಮೂರು ಡಿಟೋನೇಟರ್‌ಗಳು ಸೇರಿದಂತೆ ಪಾಲಿಥಿನ್ ಬ್ಯಾಗ್‌ನಲ್ಲಿ ಸುತ್ತಿಟ್ಟಿದ್ದ ಸ್ಫೋಟಕವನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮತ್ತಷ್ಟು ಬಲಪಡಿಸುವ ಭರವಸೆ

• ಉದಯವಾಹಿನಿ , ನವದೆಹಲಿ

ಪ್ರಧಾನಿ ಮೋದಿ ಅವರು ನವದೆಹಲಿಯ ಹೈದರಾಬಾದ್ ಹೌಸ್‌ನಲ್ಲಿ ಇಂಡೋನೇಷ್ಯಾ ಅಧ್ಯಕ್ಷ ಪ್ರಬೋವೊ ಸುಬಿಯಾಂಟೊ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಪ್ರಧಾನಿ ಮೋದಿ ಹೈದರಾಬಾದ್ ಹೌಸ್‌ನಲ್ಲಿ ಪ್ರಬೋವೊ ಸುಬಿಯಾಂಟೊ ಅವರನ್ನು ಆತ್ಮೀಯವಾಗಿ ಸ್ವಾಗತಿಸಿದರು.

ಈ ವೇಳೆ ವಿದೇಶಾಂಗ ಸಚಿವಾಲಯದ (ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಅವರು ಇಬ್ಬರು ನಾಯಕರ ನಡುವಿನ ಚರ್ಚೆಗಳು ಭಾರತ ಮತ್ತು ಇಂಡೋನೇಷ್ಯಾ ನಡುವಿನ ಸಂಬಂಧವನ್ನು ಮತ್ತಷ್ಟು ಬಲಪಡಿಸುತ್ತವೆ ಎಂದು ಭರವಸೆ ವ್ಯಕ್ತಪಡಿಸಿದ್ದಾರೆ.

ಭಾರತಕ್ಕೆ ತಮ್ಮ ಮೊದಲ ಭೇಟಿಯಲ್ಲಿರುವ ಇಂಡೋನೇಷ್ಯಾ ಅಧ್ಯಕ್ಷ ಪ್ರಬೋವೊ ಸುಬಿಯಾಂಟೊ ಇಂದು ಪ್ರಧಾನಿ ಮೋದಿ ಅವರನ್ನು ಭೇಟಿಯಾದರು. ಇಬ್ಬರೂ ನಾಯಕರು ದೆಹಲಿಯ ಹೈದರಾಬಾದ್ ಹೌಸ್‌ನಲ್ಲಿ ನಿಯೋಗ ಮಟ್ಟದ ಮಾತುಕತೆ ನಡೆಸಿದರು. ಈ ಸಭೆಯ ನಂತರ ಭಾರತದ ಮೊದಲ ಗಣರಾಜ್ಯೋತ್ಸವದಂದು ಇಂಡೋನೇಷ್ಯಾ ಮುಖ್ಯ ಅತಿಥಿ ರಾಷ್ಟ್ರವಾಗಿತ್ತು. ಭಾರತ ದೇಶವು ಗಣರಾಜ್ಯಗೊಂಡು 75 ವರ್ಷಗಳನ್ನು ಪೂರೈಸುತ್ತಿರುವುದರಿಂದ ಇಂಡೋನೇಷ್ಯಾ ಮತ್ತೊಮ್ಮೆ ಈ ಐತಿಹಾಸಿಕ ಸಂದರ್ಭದಲ್ಲಿ ಭಾಗವಹಿಸಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಈ ಮಾತುಕತೆಯ ನಂತರ ಫಿನ್‌ಟೆಕ್, ಕೃತಕ ಬುದ್ಧಿಮತ್ತೆ (ಎಐ), ಇಂಟರ್ನೆಟ್ ಆಫ್ ಥಿಂಗ್ಸ್ ಮತ್ತು ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯದಂತಹ ಕ್ಷೇತ್ರಗಳಲ್ಲಿ ಸಹಕಾರವನ್ನು ಬಲಪಡಿಸಲು ಎರಡೂ ದೇಶಗಳು ಭಾರತ ಮತ್ತು ಇಂಡೋನೇಷ್ಯಾ ನಡುವೆ ಒಪ್ಪಂದಗಳನ್ನು ಹಂಚಿಕೊಳ್ಳಲಾಯಿತು. ಭಾರತದ ಗಣರಾಜ್ಯೋತ್ಸವದ ಮುಖ್ಯ ಅತಿಥಿಯಾಗಿ ಆಹ್ವಾನಿಸಿದ್ದಕ್ಕೆ ಕೃತಜ್ಞತೆಯನ್ನು ವ್ಯಕ್ತಪಡಿಸಿದ ಇಂಡೋನೇಷ್ಯಾ ಅಧ್ಯಕ್ಷ ಸುಬಿಯಾಂಟೊ, ಪ್ರಧಾನಿ ಮೋದಿ ಅವರೊಂದಿಗೆ ಬಹಳ ಉತ್ತಮವಾದ ಮತ್ತು ಅತ್ಯಂತ ಸ್ಪಷ್ಟವಾದ ಚರ್ಚೆ ನಡೆಸಿದ್ದೇನೆ ಎಂದು ಹೇಳಿದ್ದಾರೆ. ಇಂಡೋನೇಷ್ಯಾ ಆರ್ಥಿಕ ಕ್ಷೇತ್ರದಲ್ಲಿ ಸಹಕಾರದ ಮಟ್ಟವನ್ನು ವೇಗಗೊಳಿಸಲು ಎದುರು ನೋಡುತ್ತಿದೆ ಎಂದು ಅವರು ಹೇಳಿದ್ದಾರೆ. ಸಾಂಸ್ಕೃತಿಕ ಪ್ರದರ್ಶನಗಳು: ಮೆರವಣಿಗೆಯು 300 ಕಲಾವಿದರಿಂದ ರೋಮಾಂಚಕ ಆರಂಭಿಕ ಪ್ರದರ್ಶನದೊಂದಿಗೆ ಶೆಹನಾಯಿ, ನಾದಸ್ವರಂ ಮತ್ತು ಥಾವಿಲ್ ಮುಂತಾದ ಸಾಂಪ್ರದಾಯಿಕ ವಾದ್ಯಗಳಲ್ಲಿ ಸಾರೆ ಜಹಾನ್ ಸೆ ಅಚ್ಛಾ ದೇಶಭಕ್ತಿ ಗೀತೆಯನ್ನು ನುಡಿಸುತ್ತದೆ. ಈ ಸಂಗೀತ ಪ್ರಸ್ತುತಿಯು ಭಾರತದ ಏಕತೆ ಮತ್ತು ಶ್ರೀಮಂತ ಸಾಂಸ್ಕೃತಿಕ ವಸ್ತ್ರವನ್ನು ಸಂಕೇತಿಸುತ್ತದೆ. ರಿಪಬ್ಲಿಕ್ ಡೇ ಪೆರೇಡ್' ಎಂದರೆ: ಕರ್ತವ್ಯ ಪಥದಲ್ಲಿ ನಡೆಯುವ ಒಂದು ಭರ್ಜರಿ ಮೆರವಣಿಗೆ. ರೈಸಿನಾ ಹಿಲ್‌ನಲ್ಲಿ ರಾಷ್ಟ್ರಪತಿ ಭವನದಿಂದ ಇಂಡಿಯಾ ಗೇಟ್ ತನಕದ ದಾರಿ ಇದು.

ಈ ದಾರಿಯ ಇಕ್ಕೆಲಗಳಲ್ಲಿ ಆಹ್ವಾನಿತ ಪ್ರವಾಸಿಗರು ಕುಳಿತಿರುತ್ತಾರೆ. ಕರ್ತವ್ಯಪಥದಲ್ಲಿ ಒಟ್ಟು 77 ಸಾವಿರ ಜನರಿಗೆ ಕುಳಿತುಕೊಳ್ಳುವ ವ್ಯವಸ್ಥೆಗಳಿವೆ. ಇವುಗಳಲ್ಲಿ 42 ಸಾವಿರ ಆಸನಗಳನ್ನು ಜನಸಾಮಾನ್ಯರಿಗೆ ಮೀಸಲಾಗಿ ಇರಿಸಲಾಗಿದೆ. ರಾಷ್ಟ್ರಪತಿ ಭವನದ ಬಳಿ ರೈಸಿನಾ ಹಿಲ್‌ನಲ್ಲಿ ಆರಂಭವಾಗುವ ಈ ಮೆರವಣಿಗೆ ಇಂಡಿಯಾ ಗೇಟ್ ದಾಟಿ, ಚಾರಿತ್ರಿಕ ಕೆಂಪು ಕೋಟೆಯ ತನಕ ಸಾಗುತ್ತದೆ. ಇದರಲ್ಲಿ ಭಾರತದ ಸೈನಿಕ ಶಕ್ತಿ ಮತ್ತು ಸಾಂಸ್ಕೃತಿಕ ವೈವಿಧ್ಯಗಳ ಪ್ರದರ್ಶನ ನಡೆಯುತ್ತದೆ.

ರತನ್ ಟಾಟಾ, ಮನಮೋಹನ್‌ಸಿಂಗ್, ಸಾವರ್ಕರ್‌ಗೆ ಭಾರತರತ್ನ ಪ್ರಶಸ್ತಿ..?!

ದೇಶದ ಉದ್ಯಮಕ್ಕೆ ಹೊಸ ಚೈತನ್ಯ ನೀಡಿದ್ದ ಉದ್ಯಮಿ ರತನ್ ಟಾಟಾ, ಭಾರತದ ಆರ್ಥಿಕತೆಗೆ ಹೊಸ ವಾಖ್ಯಾನ ಬರೆದ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಸೇರಿ ಇಂದು ಭಾರತ ರತ್ನ ಪ್ರಶಸ್ತಿ ಕೇಂದ್ರ ಸರ್ಕಾರ ಪ್ರಕಟಿಸುವ ಸಾಧ್ಯತೆ ಇದೆ. ದೇಶಕ್ಕೆ ಸಲ್ಲಿಸಿರುವ ಅಪ್ರತಿಮ ಸೇವೆಯನ್ನು ಪರಿಗಣಿಸಿ ಈ ಇಬ್ಬರು ಮಹನೀಯರಿಗೆ ದೇಶದ ಅತ್ಯುನ್ನತ ನಾಗರಿಕ ಪುರಸ್ಕಾರವಾದ ಭಾರತ ರತ್ನ ಪ್ರಶಸ್ತಿಯನ್ನು ಮರಣೋತ್ತರವಾಗಿ ಘೋಷಿಸುವ ಸಂಭವವಿದೆ.ಒಂದು ಮೂಲದ ಪ್ರಕಾರ ಕಟ್ಟಾ ಹಿಂದುತ್ವವಾದಿಯಾಗಿದ್ದ ವೀರ್ ಸಾವರ್ಕರ್‌ಗೂ ಭಾರತ ರತ್ನ ಪ್ರಶಸ್ತಿಯನ್ನು ಕೇಂದ್ರ ಸರ್ಕಾರ ಘೋಷಣೆ ಮಾಡಲಿದೆ. 76ನೇ ಗಣರಾಜ್ಯೋತ್ಸವದ ಹಿನ್ನೆಲೆ ರತನ್ ಟಾಟಾ, ಡಾ.ಮನಮೋಹನ್ ಸಿಂಗ್ ಸೇರಿದಂತೆ ಹಲವು ಗಣ್ಯರಿಗೆ ಕೇಂದ್ರ ಸರ್ಕಾರ ಭಾರತ ರತ್ನ ಪ್ರಶಸ್ತಿ ನೀಡಲು ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

7 ಲಕ್ಷದ 80 ಸಾವಿರ ದೂರುಗಳು ಬರುವವರೆಗೂ ಬಾಳೆಹಣ್ಣು ತಿನ್ನುತ್ತಾ ಇದ್ರಾ?

ಮೀಟರ್ ಬಡ್ಡಿ ಹಾವಳಿಯಿಂದ ಬಡವರು ಮನೆಗಳು, ಹಳ್ಳಿಗಳನ್ನು ಖಾಲಿ ಮಾಡಿ ತೆರಳುತ್ತಿದ್ದಾರೆ

• ಉದಯವಾಹಿನಿ , ಬೆಂಗಳೂರು

ಮೀಟರ್ ಬಡ್ಡಿ ಸಂಗ್ರಹದ ದೂರುಗಳ ಕುರಿತು ಕೈಗೊಂಡ ಕ್ರಮದ ವಿಷಯದಲ್ಲಿ ರಾಜ್ಯ ಸರಕಾರ ಶ್ವೇತಪತ್ರ ಬಿಡುಗಡೆ ಮಾಡಬೇಕು ಎಂದು ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಅವರು ಒತ್ತಾಯಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಮಾಧ್ಯಮದವರ ಜೊತೆ ಮಾತನಾಡಿದ ಅವರು, 7 ಲಕ್ಷದ 80 ಸಾವಿರಕ್ಕೂ ಹೆಚ್ಚು ದೂರುಗಳು ಬರುವವರೆಗೂ ನೀವು ಬಾಳೆಹಣ್ಣು ತಿನ್ನುತ್ತಾ ಇದ್ರಾ? ಎಷ್ಟು ಕ್ರಮ ಕೈಗೊಂಡಿದ್ದೀರಿ? ಎಷ್ಟು ಜನರನ್ನು ಬಂಧಿಸಿದ್ದೀರಿ ಎಂದು ಪ್ರಶ್ನಿಸಿದರು. ಬೆಳಗಾವಿ ಒಂದೇ ಜಿಲ್ಲೆಯಲ್ಲಿ ಗರಿಷ್ಠ ಅಂದರೆ 2,71,466 ದೂರುಗಳು, ಬಾಗಲಕೋಟೆ ಜಿಲ್ಲೆಯಲ್ಲಿ 89,087, ಬಿಜಾಪುರ-75 ಸಾವಿರ, ಮಂಡ್ಯ ಜಿಲ್ಲೆಯಲ್ಲಿ 42,500- ಹೀಗೆ ಕರ್ನಾಟಕದಾದ್ಯಂತ ಜನರು ನಮ್ಮನ್ನು ಶೋಷಿಸುತ್ತಿದ್ದಾರೆ; ದೌರ್ಜನ್ಯ ನಡೆದಿದೆ ಎಂದು ದೂರು ಕೊಟ್ಟಿದ್ದಾರೆ. ಮನೆ ಖಾಲಿ ಮಾಡಿಸಿದ. ಮನೆಗೆ ಬೀಗ ಹಾಕಿದ ದೂರುಗಳೂ ಇವೆ ಎಂದು ವಿವರಿಸಿದರು.

ಮೀಟರ್ ಬಡ್ಡಿ ಹಾವಳಿಯಿಂದ ಬಡವರು ಮನೆಗಳು, ಹಳ್ಳಿಗಳನ್ನು ಖಾಲಿ ಮಾಡಿ ತೆರಳುತ್ತಿದ್ದಾರೆ. ಬಡ್ಡಿ ವ್ಯವಹಾರ ಮಾಡುವವರು ದೌರ್ಜನ್ಯ ಮಾಡಿ, ಬಾರುಕೋಲಿನಿಂದ ಹೊಡೆದಿದ್ದಾರೆ. ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಸರಕಾರ ಏನು ಕ್ರಮ ಕೈಗೊಂಡಿದೆ. ಎಂದು ಪ್ರಶ್ನೆಯನ್ನು ಮುಂದಿಟ್ಟರು.

ರಾಜ್ಯ ಸರಕಾರ ಶ್ವೇತಪತ್ರ ಬಿಡುಗಡೆ

ಶೋಷಣೆ ವಿಚಾರದ

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

ಸಂಸ್ಕೃತ ಕೋರ್ಸ್ ತಾತ್ಕಾಲಿಕ ಸ್ಥಗಿತ

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ತಾತ್ಕಾಲಿಕ ಸ್ಥಗಿತಗೊಳ್ಳುವ ಕೆಲ ಕೋರ್ಸ್‌ಗಳಲ್ಲಿ ಸಂಸ್ಕೃತವೂ ಸೇರಿದ್ದಾಗಿ ವರದಿಯಾಗಿದೆ. 2024-25 ನೇ ಸಾಲಿನಲ್ಲಿ ಲಭ್ಯವಿರುವ 20 ಸೀಟುಗಳ ಪೈಕಿ 5 ಸೀಟುಗಳು ಮಾತ್ರ ಭರ್ತಿಯಾಗಿವೆ. ಇದೇ ವೇಳೆ ಉರ್ದು ವಿಭಾಗದ ಲಭ್ಯವಿರುವ 26 ಸೀಟುಗಳಲ್ಲಿ 25 ಸೀಟುಗಳು ಭರ್ತಿ. ಇದು ಸಂಸ್ಕೃತದ ಸ್ಥಿತಿಗತಿಗೆ ಕನ್ನಡಿ. ಭಾರತೀಯ ಭಾಷಾಶುದ್ಧಿ ಹಾಗೂ ಭಾವಶುದ್ಧಿಗೆ ಸಂಸ್ಕೃತ ಅತ್ಯಗತ್ಯ. ಆದರಿದು ಕಡೆಗಣನೆಗೆ ಒಳಗಾಗುತ್ತಿರುವುದು ದುರಂತ.

ರಾಜ್ಯದಲ್ಲಿ ಸಂಸ್ಕೃತಕ್ಕಾಗಿಯೇ ಬೆಂಗಳೂರಿನಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆಯಾಗಿದ್ದರೂ ಉದ್ದೇಶ ಈಡೇರಿಲ್ಲ, ಈಡೇರುವ ಲಕ್ಷಣವೂ ಕಾಣುತ್ತಿಲ್ಲ. ವಿವಿಧ ವಿಶ್ವವಿದ್ಯಾಲಯಗಳಲ್ಲಿದ್ದ ಇಂಜಿನಿಯರಿಂಗ್ ವಿಭಾಗಗಳು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ವಿಲೀನಗೊಂಡವು. ಆದರೆ ವಿವಿಧ ವಿಶ್ವವಿದ್ಯಾಲಯಗಳಲ್ಲಿರುವ ಸಂಸ್ಕೃತ ವಿಭಾಗಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ವಿಲೀನಗೊಂಡಿಲ್ಲ. ಅಷ್ಟೇ ಏಕೆ ಶತಮಾನಗಳನ್ನು ಕಂಡ ಸರ್ಕಾರಿ ಸಂಸ್ಕೃತ ಕಾಲೇಜುಗಳೇ ವಿಲೀನಗೊಂಡಿಲ್ಲ. ಬದಲಾಗಿ ಬೆಂಗಳೂರಿನ ಸರ್ಕಾರಿ ಸಂಸ್ಕೃತ ಕಾಲೇಜಿನ ಆವರಣದಲ್ಲಿಯೇ ನೆಲೆಯೂರಿ ಅಲ್ಲಿಯೇ ಕಾಲೇಜು ತೆರೆದು ಮೂಲ ಕಾಲೇಜನ್ನು ಉಸಿರುಗಟ್ಟಿಸಿದೆ. ಮಾಗಡಿ ಬಳಿಯ ತಿಪ್ಪಸಂದ್ರದ ಬಳಿ ಸಂಸ್ಕೃತ ವಿವಿಗೆ ಕಟ್ಟಡ ಸಿದ್ಧಗೊಂಡಿದ್ದರೂ ಮನೆ ಬಾಡಿಗೆ ಭತ್ಯೆ ಕಡಿತಗೊಳ್ಳುವ ಕಾರಣದಿಂದಲೋ ಏನೋ ಅಲ್ಲಿಗೆ ಹೋಗದೇ ಉಳಿಯಲಾಗಿದೆ.

ತನಿಖಾ ಸಂಸ್ಥೆಗಳು ಕೇಂದ್ರ ಸರ್ಕಾರದ ಅಣತಿಯಂತೆ ಕಾರ್ಯನಿರ್ವಹಿಸುತ್ತಿವೆ : ಕಾಂಗ್ರೇಸ್ ವಾಗ್ದಾಳಿ

• ಉದಯವಾಹಿನಿ ಬೆಂಗಳೂರು

ತನಿಖಾ ಸಂಸ್ಥೆಗಳು ಕೇಂದ್ರ ಸರ್ಕಾರದ ಅಣತಿಯಂತೆ ಕಾರ್ಯನಿರ್ವಹಿಸುತ್ತಿವೆ ಎಂದು ಕಾಂಗ್ರೇಸ್ ವಾಗ್ದಾಳಿ ನಡೆಸಿದೆ. ದೇಶದ ಸ್ನಾಯುತ್ತ ತನಿಖಾ ಸಂಸ್ಥೆಗಳು ಕೇಂದ್ರ ಬಿಜೆಪಿ ಸರ್ಕಾರದ ಅಣತಿಯಂತೆ ಕಾರ್ಯನಿರ್ವಹಿಸುತ್ತಿವೆ, ದ್ವೇಷ ರಾಜಕಾರಣಕ್ಕೆ ಬಳಕೆಯಾಗುತ್ತಿವೆ ಎಂದು ಮತ್ತೆ ಮತ್ತೆ ಸಾಬೀತಾಗುತ್ತಲೇ ಇದೆ.

ಇದಕ್ಕೆ ಪುಷ್ಟಿ ನೀಡುವಂತೆ ನ್ಯಾಯಾಲಯವೇ ಇಡಿ ಅಧಿಕಾರಿಗಳ ಕಾರ್ಯ ವೈಖರಿಯ ಮೇಲೆ ಬಲವಾದ ಅನುಮಾನ ವ್ಯಕ್ತಪಡಿಸಿ ದಂಡ ವಿಧಿಸಿದೆ. ವಿಪಕ್ಷಗಳ ನಾಯಕರು, ರಾಜಕೀಯ ವಿರೋಧಿಗಳು, ವಿರೋಧ ಪಕ್ಷಗಳ ಪರವಾಗಿರುವವರನ್ನು ಗುರಿಯಾಗಿಸಿ ಸ್ನಾಯುತ್ತ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಕಾಂಗ್ರೇಸ್ ವಾಗ್ದಾಳಿ ನಡೆಸಿದೆ.

ಆಂಬ್ಯುಲೆನ್ಸ್‌ಗೆ ದಾರಿ ಬಿಡದೇ ದರ್ಪ ತೋರಿದ ಆಟೋ ಚಾಲಕ: ವಿಡಿಯೋ

• ಉದಯವಾಹಿನಿ ಬೆಂಗಳೂರು

ಉದಯವಾಹಿನಿ ಚಿತ್ರ

ಆಂಬ್ಯುಲೆನ್ಸ್ ಬರುತ್ತಿದ್ದರೂ ದಾರಿ ಬಿಡದೇ ದರ್ಪ ತೋರಿದ ಆಟೋ ಚಾಲಕನಿಗೆ ಬೆಂಗಳೂರು ಸಂಚಾರ ಪೊಲೀಸರು ಬಂಧಿಸಿ ದಂಡ ವಿಧಿಸಿದ್ದಾರೆ. ಆಂಬ್ಯುಲೆನ್ಸ್ ಬರುತ್ತಿದ್ದರೆ ಯಾವುದೇ ಟ್ರಾಫಿಕ್ ನಲ್ಲಿದ್ದರೂ ದಾರಿ ಬಿಡಬೇಕು ಎಂದು ನಿಯಮವೇ ಇದೆ. ತುರ್ತಾಗಿ ಒಬ್ಬರ ಜೀವ ಉಳಿಸುವ ಕಾರಣಕ್ಕೆ ತೆರಳುವ ಆಂಬ್ಯುಲೆನ್ಸ್‌ಗೆ ದಾರಿ ಮಾಡಿಕೊಡುವುದು ಮಾನವೀಯತೆಯ ದೃಷ್ಟಿಯಿಂದಲೂ ನಮ್ಮ ಕರ್ತವ್ಯವಾಗಿದೆ. ಆದರೆ ಈ ಆಟೋ ಚಾಲಕ ಹಾರ್ನ್ ಸಾಲದೆಂಬಂತೆ ದಾರಿ ಬಿಡುವಂತೆ ಆಂಬ್ಯುಲೆನ್ಸ್ ಚಾಲಕ ವಾಯ್ಸ್ ಸಂದೇಶ ಮಾಡಿದರೂ ಕೇಳದೇ ದರ್ಪ ತೋರಿದ್ದಾನೆ. ಈ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿತ್ತು. ಇದರ ಬೆನ್ನಲ್ಲೇ ಬೆಳಂದೂರು ಸಂಚಾರ ಠಾಣೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಕೂಡ್ಲು ನಿವಾಸಿ ಪರಮೇಶ್ ಎನ್ನುವ 49 ವರ್ಷದ ವ್ಯಕ್ತಿ ಬಂಧಿತ. ಈತನನ್ನ ಬಂಧಿಸಿ ದಂಡ ವಿಧಿಸಿ ಬಿಡುಗಡೆ ಮಾಡಲಾಗಿದೆ.

ಆಟೋ ನೋಂದಣಿ ಸಂಖ್ಯೆ ಆಧರಿಸಿ ಆತನನ್ನು ವಶಕ್ಕೆ ಪಡೆಯಲಾಗಿತ್ತು. ವಿಚಾರಣೆ ವೇಳೆ ನನಗೆ ಹಿಂದಿನಿಂದ ಆಂಬ್ಯುಲೆನ್ಸ್ ಬರುತ್ತಿದ್ದುದು ಗೊತ್ತಾಗಿರಲಿಲ್ಲ ಎಂದು ಸಮಜಾಯಿಷಿ ನೀಡಿದ್ದಾನೆ.

ಬೆಂಗಳೂರಿನ ಮಂತ್ರಿಮಾಲ್ 2ನೇ ಮಹಡಿಯಿಂದ ಹಾರಿ ವ್ಯಕ್ತಿ ಆತ್ಮಹತ್ಯೆ

• ಉದಯವಾಹಿನಿ ಬೆಂಗಳೂರು

ನಗರದ ಪ್ರತಿಷ್ಠಿತ ಮಾಲ್ ಆಗಿರುವಂತ ಮಂತ್ರಿ ಮಾಲ್ 2ನೇ ಮಹಡಿಯಿಂದ ಹಾರಿ ವ್ಯಕ್ತಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವಂತ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವಂತ ಮಂತ್ರಿಮಾಲ್ ನ 2ನೇ ಮಹಡಿಯಿಂದ ಮಂಜುನಾಥ್ ಎಂಬುವರು ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸುಮಾರು 2 ಕೋಟಿ ಸಾಲ ಮಾಡಿಕೊಂಡಿದ್ದಂತ ಅವರು, ಸಾಲದ ಬಾಧೆ ತಾಳರಾರದೇ ಆತ್ಮಹತ್ಯೆಗೆ ಶರಣಾಗಿದ್ದಾರೆ ಎನ್ನಲಾಗಿದೆ. 2 ಕೋಟಿ ಸಾಲದ ಬಾಧೆಯನ್ನು ತಾಳಲಾರದೇ ಮಂಜುನಾಥ್ ಮಲ್ಲೇಶ್ವರಂನಲ್ಲಿರುವಂತ ಮಂತ್ರಿ ಮಾಲ್ ನ 2ನೇ ಮಹಡಿಯಿಂದ ಹಾರಿ ಜನವರಿ 23, 2025ರ ರಾತ್ರಿ 8.30ರವ ವೇಳೆಗೆ ಆತ್ಮಹತ್ಯೆ ಮಾಡಿಕೊಂಡಿದ್ದಾಗಿ ತಿಳಿದು ಬಂದಿದೆ.

100ನೇ ಉಡಾವಣೆಗೆ ಸಜ್ಜಾದ ಇಸ್ರೋ- ಬಾಹ್ಯಾಕಾಶ ಕ್ಷೇತ್ರದಲ್ಲಿ ಮತ್ತೊಂದು ಮೈಲಿಗಲ್ಲು

• ಉದಯವಾಹಿನಿ ಬೆಂಗಳೂರು

ಉದಯವಾಹಿನಿ ಚಿತ್ರ

ಭಾರತದ ಬಾಹ್ಯಾಕಾಶ ಸಂಸ್ಥೆ ಇಸ್ರೋ ಶ್ರೀ ಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ತನ್ನ 100 ನೇ ಉಡಾವಣೆಗೆ ಸಜ್ಜಾಗಿದೆ. ಈ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ನೂರನೇ ಕಾರ್ಯಾಚರಣೆ -GSLV- F15/NVS-02 ಆಗಿದೆ. ಈ ಕಾರ್ಯಾಚರಣೆಯನ್ನು ಜನವರಿ 29 ರಂದು ಬೆಳಿಗ್ಗೆ 6:23 ಕ್ಕೆ ಉಡಾವಣೆ ಮಾಡಲು ಸದ್ಯ ತಾತ್ಕಾಲಿಕವಾಗಿ ಇಸ್ರೋ ನಿರ್ಧರಿಸಿದೆ. ಈ ಉಡಾವಣೆಯ ಕುರಿತು ಇಸ್ರೋ ತನ್ನ X ಹ್ಯಾಂಡಲ್‌ನಲ್ಲಿ ಪೋಸ್ಟ್ ಮಾಡಿದ್ದು, ನಿಮ್ಮ ಕ್ಯಾಲೆಂಡರ್‌ಗಳನ್ನು ಮಾರ್ಕ್ ಮಾಡಿ! GSLV- F15/NVS-02 ಮಿಷನ್‌ನ ಉಡಾವಣೆಯನ್ನು ಜನವರಿ 29, 2025 ರಂದು 06:23 ಗಂಟೆಗೆ IST ಕ್ಕೆ SDSC SHAR , ಶ್ರೀ ಹರಿಕೋಟಾದಿಂದ ನಿಗದಿಪಡಿಸಲಾಗಿದೆ ಎಂದು ಪೋಸ್ಟ್ ಮಾಡಿದೆ.

ಇದನ್ನು ಲೈವ್‌ನಲ್ಲಿ ವೀಕ್ಷಿಸಲಿಚ್ಛಿಸುವ ಸಾರ್ವಜನಿಕರು ಶ್ರೀಹರಿಕೋಟಾದ ಖಆಖಅ ಖಊಂಖ ನಲ್ಲಿರುವ ಲಾಂಚ್ ವ್ಯೂ ಗ್ಯಾಲರಿಯಿಂದ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಇದಕ್ಕಾಗಿ ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಳ್ಳುವ ಮೂಲಕ ಉಡಾವಣೆಯನ್ನು ವೀಕ್ಷಿಸಬಹುದು ಎಂದು ಇಸ್ರೋ ತಿಳಿಸಿದೆ.

ನೋಂದಣಿ ಪ್ರಕ್ರಿಯೆ ಜನವರಿ 24, 2025 ರಿಂದ ಪ್ರಾರಂಭವಾಗಿದೆ. ಈ ಉಡಾವಣೆ NVS-02 ಉಪಗ್ರಹವನ್ನು ನಿಯೋಜಿಸುವ ನಿಟ್ಟಿನಲ್ಲಿ ಕಾರ್ಯಗತವಾಗಿದ್ದು, ಇದು ಭಾರತದ ಕಾನ್ಸೆಷನ್ ಸಿಸ್ಟಮ್‌ನೊಂದಿಗೆ ಭಾರತದ ಸ್ವದೇಶಿ ನೇವಿಗೇಶನ್ ಮುನ್ನಡೆಸುತ್ತದೆ.

ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣವನ್ನು ಪುನಃ ಆರಂಭಿಸಬೇಕು

ಬೆಂಗಳೂರು ನಗರದ 2ನೇ ವಿಮಾನ ನಿಲ್ದಾಣವನ್ನು ಆನೇಕಲ್ ಅಥವ ಬಿಡದಿಯಲ್ಲಿ ನಿರ್ಮಾಣ ಮಾಡಬೇಕು ತೇಜಸ್ವಿ ಸೂರ್ಯ

• ಉದಯವಾಹಿನಿ ಬೆಂಗಳೂರು

ಬೆಂಗಳೂರಿನಲ್ಲಿ 2ನೇ ವಿಮಾನ ನಿಲ್ದಾಣವನ್ನು ನಿರ್ಮಾಣ ಮಾಡಬೇಕು ಎಂಬ ಚರ್ಚೆಗಳು ನಡೆಯುತ್ತಿವೆ. ವಿಮಾನ ನಿಲ್ದಾಣ ಎಲ್ಲಿ ನಿರ್ಮಾಣ ಮಾಡಲಾಗುತ್ತದೆ? ಎಂಬುದು ಇನ್ನೂ ಅಂತಿಮಗೊಂಡಿಲ್ಲ. ತುಮಕೂರು, ನೆಲಮಂಗಲ, ರಾಮನಗರ, ಬೆಂಗಳೂರು ದಕ್ಷಿಣ ಭಾಗದಲ್ಲಿ ಹೀಗೆ ಚರ್ಚೆಗಳು ನಡೆಯುತ್ತಿವೆ. ಇಂತಹ ಹೊತ್ತಿನಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಸಲಹೆಯೊಂದನ್ನು ನೀಡಿದ್ದಾರೆ. ಆಯ್ದ ಸಂಸದರು ಇರುವ ಸಮಿತಿ ಕೇಂದ್ರ ಸರ್ಕಾರದ ಆದಾಯ ಮತ್ತು ವೆಚ್ಚದ ಕುರಿತು ಉಸ್ತುವಾರಿ ನೋಡಿಕೊಳ್ಳುತ್ತದೆ.

2ನೇ ವಿಮಾನ ನಿಲ್ದಾಣವನ್ನು ನಿರ್ಮಾಣ ಮಾಡಬೇಕು, ಸ್ಥಳ ಗುರುತಿಸುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ಹೆಚ್‌ಎಎಲ್ ವಿಮಾನ ನಿಲ್ದಾಣ ಪುನಃ ಆರಂಭಿಸುವ ಆಯ್ಕೆಯನ್ನು ಪರಿಗಣಿಸಬೇಕು ಎಂದು ಮನವಿ ಮಾಡಲಾಗಿದೆ ಎಂದು ತೇಜಸ್ವಿ ಸೂರ್ಯ ಹೇಳಿದ್ದಾರೆ.

ಉದಯವಾಹಿನಿ ಚಿತ್ರ

ಬೆಂ.ದಕ್ಷಿಣ ಭಾಗದಲ್ಲಿ ಹೀಗೆ ಚರ್ಚೆ

ಮೂರು ವಿಮಾನ ನಿಲ್ದಾಣ ಅಗತ್ಯವಿದೆ: ಸಂಸದ ತೇಜಸ್ವಿ ಸೂರ್ಯ ಮಾತನಾಡಿದ ವಿಶ್ವದಲ್ಲಿ ನ್ಯೂಯಾರ್ಕ್, ಲಂಡನ್ ಸೇರಿದಂತೆ ವಿವಿಧ ನಗರಗಳು ಒಂದಕ್ಕಿಂತ ಅಧಿಕ ಏರ್‌ಪೋರ್ಟ್‌ಗಳನ್ನು ಹೊಂದಿವೆ.

ಬೆಂಗಳೂರು ನಗರದಲ್ಲಿಯೂ ಮೂರು ಏರ್‌ಪೋರ್ಟ್ ಕಾರ್ಯಾಚರಣೆ ನಡೆಸಿದರೆ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ನಿರ್ವಹಣೆ ಮಾಡುವ ಬಿಐಎಎಲ್ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹರಿ ಮರಾರ್ ಅವರನ್ನು ಎರಡು ವಾರಗಳ ಹಿಂದೆ ಭೇಟಿ ಮಾಡಿದ್ದೆ ಎಂದು ಸಂಸದರು ಹೇಳಿದ್ದಾರೆ. ಬಿಐಎಎಲ್ ಕೆಐಎನ 150 ಕಿ. ಮೀ. ವ್ಯಾಪ್ತಿಯಲ್ಲಿ ಮೇ 24, 2032ರ ತನಕ ಹೊಸ ವಿಮಾನ ನಿಲ್ದಾಣ ನಿರ್ಮಾಣ ಮಾಡುವುದಿಲ್ಲ. ಇರುವ ಏರ್‌ಪೋರ್ಟ್ ಅಭಿವೃದ್ಧಿ ಮಾಡುವುದಿಲ್ಲ ಎಂದು ಕೇಂದ್ರ ವಿಮಾನಯಾನ ಸಚಿವಾಲಯದ ಜೊತೆ ಒಪ್ಪಂದ ಮಾಡಿಕೊಂಡಿದೆ.

2033ರ ಬಳಿಕ ಹೊಸ ಏರ್‌ಪೋರ್ಟ್ ಮಾಡಬಹುದು ಎಂದರು. ಒಪ್ಪಂದದ ಪ್ರಕಾರವೇ ಬಿಐಎಎಲ್ ಹೆಚ್‌ಎಎಲ್ ವಿಮಾನ ನಿಲ್ದಾಣದ ವಾಣಿಜ್ಯ ಹಾರಾಟದ ವ್ಯವಸ್ಥೆಯನ್ನು ನೋಡಿಕೊಳ್ಳಬಹುದೇ? ಎಂಬ ಸಾಧ್ಯತೆಯ ಕುರಿತು ಪರಿಶೀಲನೆ ನಡೆಸುವಂತೆ ಮನವಿ ಮಾಡಿದ್ದೇನೆ.

ಅಲ್ಲದೇ 6 ತಿಂಗಳ ಹಿಂದೆ ಬೆಂಗಳೂರು ದಕ್ಷಿಣದಲ್ಲಿಯೇ 2ನೇ ವಿಮಾನ ನಿಲ್ದಾಣ ನಿರ್ಮಾಣ ಮಾಡುವಂತೆ ವಿಮಾನಯಾನ ಸಚಿವರಿಗೆ ಪತ್ರವನ್ನು ಬರೆದಿದ್ದೇನೆ ಎಂದು ತೇಜಸ್ವಿ ಸೂರ್ಯ ಹೇಳಿದರು.

ಸದ್ಯ ಹೆಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ವಾಣಿಜ್ಯ ಸೇವೆ ಇಲ್ಲ. ಗಣ್ಯರ ವಿಮಾನಗಳ ಸಂಚಾರಕ್ಕೆ ಮಾತ್ರ ವಿಮಾನ ನಿಲ್ದಾಣವನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಪ್ರಯಾಣದ ಸಮಯ ಉಳಿತಾಯ

ಸದ್ಯ ಬೆಂಗಳೂರು ದಕ್ಷಿಣ ಭಾಗದ ಜನರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ತಲುಪಲು ಪೀಕ್ ಅವರ್‌ನಲ್ಲಿ 2 ರಿಂದ 2.30 ಗಂಟೆ ಪ್ರಯಾಣ ಮಾಡಬೇಕಿದೆ. ಆದ್ದರಿಂದ ನಗರ ದಕ್ಷಿಣ ಭಾಗದಲ್ಲಿಯೇ ಹೊಸ ಏರ್‌ಪೋರ್ಟ್ ನಿರ್ಮಾಣವಾದರೆ ಜನರ ಪ್ರಯಾಣದ ಸಮಯ ಉಳಿತಾಯವಾಗಲಿದೆ ಎಂದು ಸಂಸದರು ವಿವರಣೆ ನೀಡಿದ್ದಾರೆ.

ಈ ವಿಮಾನ ನಿಲ್ದಾಣದಲ್ಲಿಯೂ ವಿಮಾನ ಸೇವೆ ಪುನಃ ಆರಂಭಿಸಬೇಕು ಎಂದು ಕೆಲವು ದಿನಗಳ ಹಿಂದೆ ಕೇಂದ್ರ ಸಚಿವ ವಿ. ಸೋಮಣ್ಣ ಸಹ ಸಲಹೆ ನೀಡಿದರು. ಸಂಸದ ತೇಜಸ್ವಿ ಸೂರ್ಯ ಬೆಂಗಳೂರು ನಗರದ 2ನೇ ವಿಮಾನ ನಿಲ್ದಾಣವನ್ನು ಆನೇಕಲ್ ಅಥವ ಬಿಡದಿಯಲ್ಲಿ ನಿರ್ಮಾಣ ಮಾಡಬೇಕು ಎಂದು ಸಲಹೆ ನೀಡಿದ್ದಾರೆ. ಇದರಿಂದಾಗಿ ದಕ್ಷಿಣ ಬೆಂಗಳೂರಿನ ಜನರಿಗೆ ಅನುಕೂಲವಾಗಲಿದೆ

-ತೇಜಸ್ವಿ ಸೂರ್ಯ, ಸಂಸದ

ಮೈಕ್ರೋ ಫೈನಾನ್ಸ್ ಕಿರುಕುಳ, ಕಠಿಣ ಕ್ರಮದ ಎಚ್ಚರಿಕೆ

• ಉದಯವಾಹಿನಿ ಬೆಂಗಳೂರು

ಕರ್ನಾಟಕದಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳ ಕಿರುಕುಳದ ಬಗ್ಗೆ ಭಾರೀ ಚರ್ಚೆಯಾಗಿದೆ.

ಕಂಪನಿಗಳ ಕಿರುಕುಳ ತಡೆಯಲಾಗದೆ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ಸಹ ವರದಿಯಾಗಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕಾನೂನು ಬಾಹಿರ ಸಾಲ ವಸೂಲಾತಿ ಮಾಡುವ ಮೈಕ್ರೋ ಫೈನಾನ್ಸ್ ಕಂಪನಿಗಳಿಗೆ ಖಡಕ್ ಎಚ್ಚರಿಕೆ ನೀಡಿದ್ದು ಕಠಿಣ ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳಿದ್ದಾರೆ.

ಶನಿವಾರ ಬೆಂಗಳೂರಿನಲ್ಲಿ ಸಿದ್ದರಾಮಯ್ಯ ಮಹತ್ವದ ಸಭೆಯನ್ನು ನಡೆಸಿದರು.

ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳ ಕಾರ್ಯಾಚರಣೆ ಮತ್ತು ಸಾರ್ವಜನಿಕರಿಗೆ ಉಂಟಾಗುತ್ತಿರುವ ಸಮಸ್ಯೆಗಳ ಗೃಹ ಕಚೇರಿ ಕೃಷ್ಣಾದಲ್ಲಿ ಸಭೆ ನಡೆಯಿತು.

ಉಪ ಮುಖ್ಯಮಂತ್ರಿ ಡಿ. ಕೆ. ಶಿವ ಕುಮಾರ್, ಗೃಹ ಸಚಿವ ಜಿ. ಪರಮೇಶ್ವರ, ಕಾನೂನು ಸಚಿವ ಎಚ್. ಕೆ. ಪಾಟೀಲ್, ಕಂದಾಯ ಸಚಿವ ಕೃಷ್ಣ ಬೈರೇಗೌಡ ಸಭೆಯಲ್ಲಿ ಪಾಲ್ಗೊಂಡಿದ್ದರು. ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ಎಲ್. ಕೆ. ಅತೀಕ್, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್ ಸೇರಿ ಗೃಹ ಇಲಾಖೆ, ಒಳಾಡಳಿತ, ಕಂದಾಯ, ಗುಪ್ತಚರ ಇಲಾಖೆಗಳ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಉದಯವಾಹಿನಿ ಚಿತ್ರ

ಖಡಕ್ ಎಚ್ಚರಿಕೆ ಕೊಟ್ಟ ಸಿಎಂ

ಈ ಸಭೆಯಲ್ಲಿ ಬ್ಯಾಂಕ್, ಫೈನಾನ್ಸ್ ಹಾಗೂ ಮೈಕ್ರೋ ಫೈನಾನ್ಸ್‌ಗಳ ಪ್ರತಿನಿಧಿಗಳ ಮೇಲೆ ಪ್ರಶ್ನೆಗಳ ಸುರಿಮಳೆಗೈದ ಮುಖ್ಯಮಂತ್ರಿಗಳು, ನಿಯಮ ಮೀರಿ ಸಾಲ ವಸೂಲಿ ಮಾಡಿದಲ್ಲಿ ಕಠಿಣ ಕ್ರಮ ಕೈಗೊಳ್ಳುತ್ತೇನೆ, ನನ್ನ ಜನರ ರಕ್ಷಣೆಗಾಗಿ ನಾನೇ ಕ್ರಮ ಕೈಗೊಳ್ಳುತ್ತೇನೆ ಎಂದು ಎಚ್ಚರಿಕೆ ಕೊಟ್ಟರು.

ಗಣರಾಜ್ಯೋತ್ಸವ ದಿನಾಚರಣೆ ನಿಮಿತ್ತ ಬೆಂಗಳೂರಿನ ಈ ರಸ್ತೆಗಳಲ್ಲಿ ಸಂಚಾರ, ಪಾರ್ಕಿಂಗ್ ನಿಷೇಧ

• ಉದಯವಾಹಿನಿ ಬೆಂಗಳೂರು

ಗಣರಾಜ್ಯೋತ್ಸವ ದಿನಾಚರಣೆ ನಿಮಿತ್ತ ಬೆಂಗಳೂರಿನ ಕೆಲವು ರಸ್ತೆಗಳಲ್ಲಿ ವಾಹನ ಸಂಚಾರ ಮತ್ತು ಪಾರ್ಕಿಂಗ್ ನಿಷೇಧಿಸಲಾಗಿದೆ. ಇಲ್ಲಿದೆ ವಿವರ ಜನವರಿ 26 ಅಂದರೆ ಇಂದು ಗಣರಾಜ್ಯೋತ್ಸವ ನಿಮಿತ್ತ ಇಂದು ಬೆಳಿಗ್ಗೆ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ರಾಜ್ಯಪಾಲರು ಧ್ವಜಾರೋಹಣ ಮಾಡಿ ಗೌರವ ವಂದನೆ ಸ್ವೀಕರಿಸಲಿದ್ದಾರೆ.

ಹೀಗಾಗಿ ಕೆಲವು ರಸ್ತೆಗಳಲ್ಲಿ ಸಂಚಾರ ನಿಷೇಧಿಸಲಾಗಿದೆ. ಬೆಳಿಗ್ಗೆ 8.30 ರಿಂದ 10.30 ರವರೆಗೆ ಸಂಚಾರ ಪಾರ್ಕಿಂಗ್ ನಿಷೇಧ ಹೇರಲಾಗಿದೆ. ಕಬ್ಬನ್ ರಸ್ತೆಯಲ್ಲಿ ಬಿಆರ್ ವಿ ಜಂಕ್ಷನ್ ನಿಂದ ಕಾಮರಾಜರಸ್ತೆ ಜಂಕ್ಷನ್ ವರೆಗೆ ಎರಡೂ ದಿಕ್ಕುಗಳಲ್ಲಿ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿದೆ. ಈ ಬಗ್ಗೆ ಸಂಚಾರಿ ಪೊಲೀಸರು ಟ್ವಿಟ್ ಮೂಲಕ ಮಾಹಿತಿ ನೀಡಿದ್ದಾರೆ.

ಇನ್ ಫೆಂಟ್ರಿ ರಸ್ತೆಯಿಂದ ಮಣಿಪಾಲ್ ರಸ್ತೆ: ನೇರವಾಗಿ ಇನ್ ಫೆಂಟ್ರಿ ರಸ್ತೆ- ಸಫೀನಾ ಪ್ಲಾಜಾದಲ್ಲಿ ಎಡತಿರುವು ಪಡೆದು ಮೈನ್ ಗಾರ್ಡ್ ರಸ್ತೆ- ಆಲೀಸ್ ಸರ್ಕಲ್-ಡಿಸ್ಸೆನ್ಸರಿ ರಸ್ತ

ಆಸ್ತಿ ಒತ್ತುವರಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ

ಜಾನುವಾರುಗಳ ರಕ್ಷಣೆಗೆ ಪ್ರತಿ ಪಂಚಾಯಿತಿ ವ್ಯಾಪ್ತಿಯಲ್ಲಿ 100 ಎಕರೆ ಗೋಮಾಳ ಮೀಸಲಿಡಬೇಕೆಂದು ರೈತ ಸಂಘದಿಂದ ಹೋರಾಟ

• ಉದಯವಾಹಿನಿ ಬಂಗಾರಪೇಟೆ

ತಾಲ್ಲೂಕಿನಾದ್ಯಂತ ಆಕ್ರಮ ಸಾಗುವಳಿ ಚೀಟಿ, ಹಾಗೂ ಒತ್ತುವರಿ ಆಗಿರುವ ಸರ್ಕಾರಿ ಆಸ್ತಿಗಳನ್ನು ತೆರೆವುಗೊಳಿಸಲು ವಿಶೇಷ ತಂಡ ರಚನೆ ಮಾಡಿ ಕೆರೆ ಸ್ವರೂಪವನ್ನು ಹಾಳು ಮಾಡಿರುವ ಡಿ.ಬಿ.ಎಲ್ ಗುತ್ತಿಗೆದಾರರ ವಿರುದ್ದ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿ ಜಾನುವಾರುಗಳ ರಕ್ಷಣೆಗೆ ಪ್ರತಿ ಪಂಚಾಯಿತಿ ವ್ಯಾಪ್ತಿಯಲ್ಲಿ 100 ಎಕರೆ ಗೋಮಾಳ ಮೀಸಲಿಡಬೇಕೆಂದು ರೈತ ಸಂಘದಿಂದ ತಾಲ್ಲೂಕು ಕಚೇರಿ ಮುಂದೆ ಹೋರಾಟ ಮಾಡಿ ತಹಶೀಲ್ದಾರ್ ವೆಂಕಟೇಶಪ್ಪ ರವರಿಗೆ ಮನವಿ ನೀಡಿ ಒತ್ತಾಯಿಸಲಾಯಿತು.

ರಾಜಕೀಯ ಒತ್ತಡಕ್ಕೆ ಮಣಿಯದೆ ಸಂವಿಧಾನದ ಅಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಮಾನ್ಯರು ಸರ್ವೆ ನಂ. 36 ರ 0.35 ಗುಂಟೆ ಗುಂಡು ತೋಪು ಹಾಗೂ ಗಾಲ್ಫ್ ಭೂಗಳ್ಳರಿಂದ ಒತ್ತುವರಿ ಆಗಿರುವ 50 ಎಕರೆ ಗೋಮಾಳ, ಕೆರೆ ಕುಂಟೆ ಗಡಿಭಾಗದ ವರದಾಪುರ

ಉದಯವಾಹಿನಿ ಚಿತ್ರ

ಸರ್ವೇ ನಂ.9 ರಲ್ಲಿನ 142 ಎಕರೆ ಹಾಗೂ ಕೃಷಪುರ ದಿನ್ನೆಯ 50 ಎಕರೆ ಸೇರಿದಂತೆ ನೂರಾರು ಎಕರೆ ಗೋಮಾಳವನ್ನು ಉಳಿಸಲು ಹತ್ತು ಸಾವಿರ ಕೋಟಿ ಬೆಲೆ ಬಾಳುವ 3 ಸಾವಿರ ಎಕರೆ ಅರಣ್ಯ ಭೂಮಿಯನ್ನು ಏಡುಕೊಂಡಲು ರವರಂತೆ ಧೈರ್ಯ ತೋರಬೇಕೆಂದು ತಹಶೀಲ್ದಾರ್‌ರವರಿಗೆ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಸಲಹೆ ನೀಡಿದರು.

ತಾಲ್ಲೂಕು ಕಚೇರಿ ಮುಂದೆ ಹೋರಾಟ

ಸರ್ಕಾರದ ಕೆಲಸ ದೇವರ ಕೆಲಸ ಆದರೆ ತಾಲ್ಲೂಕು ಕಂದಾಯ ಸರ್ವೇ ಅಧಿಕಾರಿಗಳ ಕೆಲಸ ಜನಸಾಮಾನ್ಯರ ತೆರಿಗೆ ಹಣದಲ್ಲಿ ಲಕ್ಷ ಲಕ್ಷ ಸಂಬಳ ಪಡೆದು ಜನಸಾಮಾನ್ಯರ ಕೆಲಸವನ್ನು ಮಾಡಬೇಕಾದ ಅಧಿಕಾರಿಗಳು ಶ್ರೀಮಂತರ ಪ್ರಭಾವಿ ರಾಜಕಾರಣಿಗಳು ಹೇಳಿದ ಕೆಲಸವನ್ನು ಕ್ಷಣ ಮಾತ್ರದಲ್ಲಿ ಮಾಡಿ ಕಡತಗಳನ್ನು ಮನೆ ಬಾಗಿಲಿಗೆ ತಲುಪಿಸಿದರೆ ಬಡವರ ಕೆಲಸ ಆಗಬೇಕಾದರೆ ಮೊದಲು ಕಚೇರಿಯನ್ನು ತಮ್ಮ ಅಂಗೈಯಲ್ಲಿಟ್ಟುಕೊಂಡಿರುವ ದಲ್ಲಾಳಿಗಳ ಸಂಪರ್ಕವಿಲ್ಲದೆ, ಬಡವರ ನೆರಳು ಸಹ ಇಲಾಖೆಯ ಬಾಗಿಲಿಗೆ ಬೀಳುವಂತಿಲ್ಲ ಅಷ್ಟರ ಮಟ್ಟಿಗೆ ತಾಲ್ಲೂಕಾಡಳಿತ ಹದಗೆಟ್ಟಿದೆ ಎಂದು ಅವ್ಯವಸ್ಥೆಯ ವಿರುದ್ದ ಆಕ್ರೋಶ ವ್ಯಕ್ತಪಡಿಸಿದರು.

ಗೋಮಾಳ ಜಾಗ ಗುಳಂ

ಸುಪ್ರೀಂ ಕೋರ್ಟ್ ಆದೇಶದಂತೆ ಪ್ರತಿ ತಾಲ್ಲೂಕಿನಲ್ಲೂ ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ಪ್ರತಿ ಹಳ್ಳಿಯಲ್ಲೂ ಸಾವಿರ ಜಾನುವಾರುಗಳಿಗೆ 100 ಎಕರೆ ಗೋಮಾಳ ಜಮೀನು ಮೀಸಲೀಡಬೇಕೆಂಬ ಕಾನೂನು ಇದೆ ಆದರೆ ಇರುವ ಗೋಮಾಳವನ್ನು ರಾಜಕಾರಣಿಗಳು ಭೂ ಮಾಫಿಯದವರು ಒತ್ತುವರಿ ಮಾಡಿಕೊಂಡು ಖಾಸಗಿ ಲೇಔಟ್ ಅಭಿವೃದ್ದಿ ಮಾಡುವ ಮೂಲಕ ಗೋಮಾಳ ಜಮೀನನ್ನು ನುಂಗಿ ನೀರು ಕುಡಿಯುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ಮುಂಗಾರು ಮಳೆ ಆರ್ಭಟಕ್ಕೆ ಹೊರ ರಾಜ್ಯಗಳ ಪರಿಸ್ಥಿತಿ ನೋಡಿದರು ಸ್ಥಳಿಯ ಕಂದಾಯ ಅಧಿಕಾರಿಗಳು ಮುಂಜಾಗ್ರತವಾಗಿ ಒತ್ತುವರಿ ಆಗಿರುವ ಕೆರೆ, ರಾಜಕಾಲುವೆಗಳನ್ನು ಸರ್ವೇ ಮಾಡಿಸಿ ಒತ್ತುವರಿ ತೆರೆವುಗೊಳಿಸಿ ಅಭಿವೃದ್ದಿ ಮಾಡದೆ ಬೇಜವಬ್ದಾರಿಯಿಂದ ವರ್ತಿಸಿದರೆ ಮುಂದೆ ಮುಂಗಾರು ಮುನಿದರೆ ರೈತರ ಬೆಳೆ, ಜನಸಾಮಾನ್ಯರ ಬದುಕು ನೀರಿನಲ್ಲಿ ಕೊಚ್ಚಿ ಹೋಗುತ್ತಿದೆ ಎಂದು ಆರೋಪ ಮಾಡಿದರು
-ಕದರಿನತ್ತ ಅಪ್ಪೋಜೆರಾವ್, ತಾಲ್ಲೂಕಾದ್ಯಕ್ಷ

ಗುರಿ ಸಾಧನೆಗೆ ನೀರಿನ ಆಯವ್ಯಯ ಕಡ್ಡಾಯ

• ಉದಯವಾಹಿನಿ ಶಿಡ್ಲಘಟ್ಟ

ತಾಲ್ಲೂಕು ಪಂಚಾಯಿತಿ ಮತ್ತು ಫೌಂಡೇಷನ್ ಫಾರ್ ಇಕಾಲಾಜಿಕಲ್ ಸೆಕ್ಯೂರಿಟಿ ಸಂಸ್ಥೆಯ ಸಹಯೋಗದಲ್ಲಿ ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆಯನ್ನು ಆಧರಿಸಿ ಸಮಗ್ರ ಸಹಭಾಗಿತ್ವ ವಾರ್ಷಿಕ ಕ್ರಿಯಾಯೋಜನೆ ತಯಾರಿಸುವ ಕುರಿತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮತ್ತು ಇಲಾಖೆ ಅಧಿಕಾರಿಗಳಿಗೆ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಒಂದು ದಿನದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ಎಫ್‌ಇಎಸ್ ಸಂಸ್ಥೆಯ ಕಾರ್ಯಕ್ರಮ ವ್ಯವಸ್ಥಾಪಕ ಸಿ.ಲೋಕೇಶ್ ಮಾತನಾಡಿ, ಪಂಚಾಯಿತಿಗಳು ಗುರಿ ಸಾಧಿಸಬೇಕಾದರೆ ತಪ್ಪದೇ ಪ್ರತಿವರ್ಷ ಕಡ್ಡಾಯವಾಗಿ ನೀರಿನ ಆಯವ್ಯಯ ಮಾಡಬೇಕು.

ನೀರಿನ ಪ್ರಮಾಣ ಎಷ್ಟಿದೆ, ಎಷ್ಟು ಖರ್ಚು ಮಾಡುತ್ತಿದ್ದೇವೆ, ಎಷ್ಟು ನೀರನ್ನು ಉಳಿಸಬೇಕು ಮತ್ತು ಅಂತರ್ಜಲ ಪ್ರಮಾಣವನ್ನು ಅರ್ಥ ಮಾಡಿಕೊಂಡಿರಬೇಕು. ಇತ್ತೀಚೆಗೆ ಬಿಡುಗಡೆಯಾದ ಅಂಕಿ ಅಂಶಗಳನ್ನು ಗಮನಿಸಿದರೆ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳು ಕೇಕಡಾ 165 ರಿಂದ 195 ರಷ್ಟು ಅಂತರ್ಜಲ ಬಳಕೆ ಮಾಡುವ ಜಿಲ್ಲೆಗಳಾಗಿವೆ ಎಂದು

ಉದಯವಾಹಿನಿ ಚಿತ್ರ

ತಿಳಿಸಿದರು.ಕಾರ್ಯಾಗಾರದಲ್ಲಿ ಪ್ರಮುಖವಾಗಿ 17 ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಹಾಗೂ ಸ್ಥಳೀಯ 9 ಅಂಶಗಳಿಗೆ ಸಂಬಂಧಪಟ್ಟಂತೆ ಯೋಜನೆ ತಯಾರಿಸುವ ಕುರಿತು ಪಿಡಿಒಗಳೊಂದಿಗೆ ಚಟುವಟಿಕೆ ಆಧಾರಿತ ಚರ್ಚೆಯನ್ನು ಮಾಡಲಾಯಿತು.

ತಾಲ್ಲೂಕು ಪಂಚಾಯಿತಿ ನರೇಗಾ ಸಹಾಯಕ ನಿರ್ದೇಶಕ ಎನ್. ಚಂದ್ರಪ್ಪ, ಯೋಜನಾಧಿಕಾರಿ ಅನಿಲ್‌ಕುಮಾರ್, ಎಫ್‌ಇಎಸ್ ಸಂಸ್ಥೆಯ ವ್ಯವಸ್ಥಾಪಕಿ ನಿಕತ್ ಪರ್ವೀನ್, ಕ್ಷೇತ್ರ ಸಂಯೋಜಿಕಿ ಲೀಲಾವತಿ, ಪಿಡಿಒಗಳಾದ ಅಂಜನ್‌ಕುಮಾರ್, ಆರ್. ಪವಿತ್ರಾ, ವಿ.ತನ್ವೀರ್‌ಅಹ್ಮದ್, ನೈನಾನಿಕತ್, ಪಶು ವೈದ್ಯಾಧಿಕಾರಿ ಡಾ. ಶ್ರೀನಾಥ್ ರೆಡ್ಡಿ, ಹಿರಿಯ ವೈದ್ಯಾಧಿಕಾರಿ ಎಂ.ಎಸ್.ದೇವರಾಜ್, ರೇಷ್ಮೆ ವಿಸ್ತರಣಾಧಿಕಾರಿ ಭಾರತಿ, ತೋಟಗಾರಿಕೆ ಅಧಿಕಾರಿ ಪಿ.ಮಂಜುಳಾ, ವಿದ್ಯಾ ವಸ್ತ್ರದ್ ಮತ್ತಿತರರು ಹಾಜರಿದ್ದರು.

ವಿದ್ಯಾರ್ಥಿಗಳು ರಸ್ತೆ ಸುರಕ್ಷತೆ ನಿಯಮ ಪಾಲಿಸಿ: ಎಎಸ್‌ಐ ಲಿಂಗರಾಜು

• ಉದಯವಾಹಿನಿ ಚಾಮರಾಜನಗರ

ವಿದ್ಯಾರ್ಥಿಗಳು ರಸ್ತೆ ಸಂಚಾರಿ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಪಟ್ಟಣ ಸಂಚಾರಿ ಪೊಲೀಸ್ ಠಾಣೆ ಎಎಸ್‌ಐ ಲಿಂಗರಾಜು ತಿಳಿಸಿದರು.

ಭಾರತ ಸರ್ಕಾರದ ನೆಹರು ಯುವ ಕೇಂದ್ರ, ಪಟ್ಟಣ ಸಂಚಾರಿ ಪೊಲೀಸ್ ಠಾಣೆ, ಚಾಮರಾಜನಗರ ವಿಶ್ವ ವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ ವಿಭಾಗ ಎನ್‌ಎಸ್‌ಎಸ್ ಶಿಬಿರಾರ್ಥಿಗಳಿಗೆ ಭುವನೇಶ್ವರಿ ವೃತದಲ್ಲಿ ಸಂಚಾರಿ ನಿಯಮದ ಬಗ್ಗೆ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿ., ರಸ್ತೆ ಸುರಕ್ಷತಾ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ವಾಹನ ಚಲನೆ ಮಾಡುವಾಗ 18 ವರ್ಷ ತುಂಬಿರಬೇಕು ಸಾರಿಗೆ ಇಲಾಖೆಯಿಂದ ಡಿಎಲ್ ಪಡೆದುಕೊಂಡಿರಬೇಕು. ಹೆಲ್ಮೆಟ್ ಹಾಕಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಅಪಘಾತ ಸಂದರ್ಭದಲ್ಲಿ ಗಾಯಾಳುಗಳಿಗೆ ದಯವಿಟ್ಟು ಅವರಿಗೆ ಸಹಾಯ ಮಾಡಿ ನಿಮಗೆ ಯಾವುದೇ ತೊಂದರೆ ಆಗೋದಿಲ್ಲ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿ ಕಾರ್ಯಕ್ರಮ ಚಾಲನೆ ನೀಡಿದರು. ಸಂಚಾರಿ ಪೊಲೀಸ್ ಠಾಣೆಯ

ಉದಯವಾಹಿನಿ ಚಿತ್ರ

ವಿದ್ಯಾರ್ಥಿಗಳು ಅಥವಾ ಸಾರ್ವಜನಿಕರು ಕುಡಿದು ವಾಹನ ಚಾಲನೆ ಮಾಡಬಾರದು ಮಾಡಿದರೆ ಕಠಿಣ ಶಿಕ್ಷೆಗೆ ಒಳಗಾಗುತ್ತಾರೆ ಜೊತೆಗೆ ಪ್ರಾಣಕ್ಕೆ ಅಪಾಯ ಸಂಭವಿಸುವ ಸಾಧ್ಯತೆ ಹೆಚ್ಚು ಆದ್ದರಿಂದ ಎಲ್ಲರೂ ಜಾಗೃತರಾಗಿ
-ಪಿಎಸ್‌ಐ ಧನಂಜಯ.ಡಿ.

ಪಿ.ಎಸ್.ಐ ರವಿಕುಮಾರರವರು ಮಾತನಾಡಿ ಸಂಚಾರ ಮಾಡುವಾಗ ಮೊಬೈಲ್ ಬಳಸಬಾರದು ಜೀವಪಾಯದಿಂದ ರಕ್ಷಣೆ ಪಡೆಯಿರಿ.

ಕಾರು ಚಾಲನೆ ಮಾಡುವಾಗ ತಪ್ಪದೆ ಸೀಟ್ ಬೆಲ್ಟ್ ಧರಿಸಿ, ಅಪ್ರಾಪ್ತ ವಯಸ್ಥರು ವಾಹನ ಚಲಾಯಿಸುವುದು ಶಿಕ್ಷಾರ್ಹ ಅಪರಾಧ, ಮಧ್ಯಪಾನ ಮಾಡಿ ವಾಹನ ಚಲಾಯಿಸಿದರೆ ಪ್ರಾಣಕ್ಕೆ ಕುತ್ತು, ಟ್ರಿಬಲ್ ರೈಡಿಂಗ್ ಮಾಡುವುದು ಕಾನೂನು ಬಾಹಿರ ಎಂದು ಸಂಚಾರ ನಿಯಮದ ಬಗ್ಗೆ ವಿವರಿಸಿದರು.

ವಾಹನಗಳ ದಾಖಲೆಗಳು ಸರಿಯಾಗಿರಬೇಕು ಜೊತೆಗೆ ಅಪ್ರಾಪ್ತ ವಯಸ್ಕರು ವಾಹನವನ್ನು ಚಲಿಸಬಾರದು ಜೊತೆಗೆ ಎಲ್ಲಾ ಸಿಗ್ನಲ್‌ಗಳಲ್ಲೂ ಕೂಡ ಸಿಸಿಟಿವಿ ಇರುತ್ತವೆ ಇದರ ಬಗ್ಗೆ ಜಾಗೃತಿ ವಹಿಸಿ ಎಂದು ಹೇಳಿದರು.

ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಡಾ. ಆರ್. ಮಹೇಶ್ ಮಾತನಾಡಿ, ಪ್ರಸ್ತುತದ ದಿನಮಾನಗಳಲ್ಲಿ ಯುವಜನತೆ ಮತ್ತು ಸಂಚಾರ ಮಾಡುವಂತ ಸಮಸ್ತ ಜನರು ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಜೀವ ಮತ್ತು ಜೀವನ ಎಂಬುದು ಬಹಳ ಮುಖ್ಯವಾದದ್ದು ಆದುದರಿಂದ ಜಾಗೃತಿ ವಹಿಸಿ ಎಂದು ಕಿವಿ ಮಾತು ಹೇಳಿದರು.

ರಸ್ತೆ ನಿಯಮ ಪಾಲಿಸಿ, ಜೀವನ ಉಳಿಸಿ: ಎಂ ಜಿ ಲೋಕೇಶ್

• ಉದಯವಾಹಿನಿ ಕೋಲಾರ

ಪ್ರತಿಯೊಬ್ಬರೂ ರಸ್ತೆ ಸಂಚಾರ ನಿಯಮಗಳ ಬಗ್ಗೆ ಚೆನ್ನಾಗಿ ತಿಳಿದಿರಬೇಕು, ವಿಶೇಷವಾಗಿ ರಸ್ತೆ ಅಪಘಾತದ ಅಪಾಯದಲ್ಲಿರುವ ಮಕ್ಕಳು ಮತ್ತು ಯುವಕರು. ಅಂಕಿಅಂಶಗಳ ಪ್ರಕಾರ (ವಿಶ್ವ ಆರೋಗ್ಯ ಸಂಸ್ಥೆ, 2008), ಹೆಚ್ಚಿನ ಆಸ್ಪತ್ರೆಗೆ ದಾಖಲಾದ ಪ್ರಕರಣಗಳು ಮತ್ತು ಸಾವಿಗೆ ಪ್ರಮುಖ ಕಾರಣವೆಂದರೆ ರಸ್ತೆ ಆಘಾತದಿಂದ ಕಂಡು ಬಂದಿದೆ ಎಂದು ಗಲ್‌ಪೇಟೆ ಠಾಣೆಯ ವೃತ್ತ ನಿರೀಕ್ಷಕ ಎಂ ಜಿ ಲೋಕೇಶ್ ತಿಳಿಸಿದರು.

ಉದಯವಾಹಿನಿ ಚಿತ್ರ

ರಸ್ತೆಗೆ ಸುರಕ್ಷತೆಯ ಬಗ್ಗೆ ಅರಿವು

ಮೈ ಭಾರತ್-ನೆಹರು ಯುವ ಕೇಂದ್ರ ಕೋಲಾರ, ನವ ಸಮಾಜ ಮತ್ತು ಪರಿಸರ ಅಭಿವೃದ್ಧಿ ಸಂಸ್ಥೆ, ಪೊಲೀಸ್ ಇಲಾಖೆ ಕೋಲಾರ, ಜಿಲ್ಲಾ ಕಾನೂನು ಸೇವಗಳ ಪ್ರಾಧಿಕಾರ ಕೋಲಾರ, ರೋಟರಿ ಕೋಲಾರ್ ಲೈಕ್ ಸೈಡ್ ಹಾಗೂ ಡಾಕ್ಟರ್ ಎಪಿಜೆ ಅಬ್ದುಲ್ ಕಲಾಂ ಎಜುಕೇಶನ್ ಅಂಡ್ ಚಾರಿಟೇಬಲ್ ಟೆಸ್ಟ್ ಇವರ ಸಹಯೋಗದಲ್ಲಿಯಿಂದ ಬೆಳಿಗ್ಗೆ ಜನವರಿ 23 ನೇ ತಾರೀಕು 10.30 ಗಂಟೆಗೆ ರಸ್ತೆಗೆ ಸುರಕ್ಷತೆಯ ಬಗ್ಗೆ ಅರಿವು ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು.

ಕಾರ್ಯದರ್ಶಿಗಳು ಮುಸ್ತಫಾ ಎಂಪಿ ಅವರು ಮಾತನಾಡಿ ರಸ್ತೆ ಸುರಕ್ಷತೆಯು ಅತ್ಯಂತ ಸಾಮಾನ್ಯ ಮತ್ತು ಪ್ರಮುಖ ವಿಷಯವಾಗಿದೆ ಮತ್ತು ಸಾರ್ವಜನಿಕರಲ್ಲಿ ವಿಶೇಷವಾಗಿ ಹೊಸ ವಯಸ್ಸಿನ ಜನರಲ್ಲಿ ಹೆಚ್ಚಿನ ಜಾಗೃತಿಯನ್ನು ತರಲು ಶಿಕ್ಷಣ, ಸಾಮಾಜಿಕ ಜಾಗೃತಿ, ಇತ್ಯಾದಿಗಳಂತಹ ವಿವಿಧ ಕ್ಷೇತ್ರಗಳಿಗೆ ಸೇರಿಸಲಾಗಿದೆ ಎಂದು ತಿಳಿಸಿದರು

ಜಿಟಿಟಿಸಿ ಪ್ರಾಂಶುಪಾಲ ವಿಕಾಸ್ ಡಿ ರವರು ಮಾತನಾಡಿ ರಸ್ತೆಯಲ್ಲಿ ಹೋಗುವ ಪ್ರತಿಯೊಬ್ಬ ವ್ಯಕ್ತಿಗೆ ಗಾಯ ಅಥವಾ ಸಾವಿನ ಅಪಾಯವಿದೆ.

ರಸ್ತೆ ಅಪಘಾತಗಳಿಂದಾಗಿ ಪ್ರಪಂಚದಾದ್ಯಂತ ವಾರ್ಷಿಕವಾಗಿ ಲಕ್ಷಾಂತರ ಜೀವಗಳು ಕಳೆದುಹೋಗುತ್ತವೆ, ಇದರ ಪರಿಣಾಮವಾಗಿ ವ್ಯಕ್ತಿಗಳಿಗೆ ಮತ್ತು ರಾಷ್ಟ್ರಕ್ಕೆ ಹಣಕಾಸಿನ ಮತ್ತು ಸಂಪನ್ಮೂಲಗಳ ದೊಡ್ಡ ನಷವಾಗುತ್ತದೆ
-ಶಾಮ್ಸ್ ಎಂ ಬಿ ಅಧ್ಯಕ್ಷರು ನವ ಸಮಾಜ ಮತ್ತು ಪರಿಸರ ಅಭಿವೃದ್ಧಿ ಸಂಸ್ಥೆ

ಪಾದಚಾರಿಗಳು, ವಾಹನ ಚಾಲಕರು, ಸೈಕ್ಲಿಸ್ಟ್‌ಗಳು, ಪ್ರಯಾಣಿಕರು ಎಂದು ವಿವರಿಸಿದರು.

ಜಾನೂರು ಸ್ಪರ್ಧೆಯಲ್ಲಿ ರಶ್ಮಿಗೆ ಪ್ರಥಮ ಬಹುಮಾನ

• ಉದಯವಾಹಿನಿ ಚಿಂತಾಮಣಿ

ಗಣರಾಜ್ಯೋತ್ಸವ ಪ್ರಯುಕ್ತ ಬೆಂಗಳೂರಿನ ಲಾಲ್ ಬಾಗ್‌ನಲ್ಲಿ ಆಯೋಜಿಸಿರುವ ಜಾನೂರು ಪ್ರದರ್ಶನದಲ್ಲಿ ತಾಜಾ ಹಸಿರು ತೆಂಗಿನ ಎಲೆಗಳು ಮತ್ತು ಹೂವುಗಳನ್ನು ಬಳಸಿ ಅಮೃತಸರದ ವಾಲ್ಮೀಕಿ ಆಶ್ರಮ ಮತ್ತು ಸೀತಾರಾಮ ಲಕ್ಷ್ಮಣ ಮಂಟಪವನ್ನು ಸಂಕೀರ್ಣದ ವಿವರಗಳು ಅಶ್ವಮೇಧ ಯಾಗ, ಲವ-ಕುಶ ಜನನ ಇನ್ನು ಅನೇಕ ವಿಷಯಗಳನ್ನು ಒಳಗೊಂಡ ಕಲಾಕೃತಿಯನ್ನು ಪ್ರದರ್ಶಿಸಿರುವ ನಗರದ ವೆಂಕಟೇಶ್ವರ ಬಡಾವಣೆ ನಿವಾಸಿ ಕಲಾವಿದೆ ರಶ್ಮಿಹರ್ಷ ಅವರು ಪ್ರಥಮ ಬಹುಮಾನ ಪಡೆದಿದ್ದು ಹ್ಯಾಟ್ರಿಕ್ ಸಾಧನೆ ಮಾಡಿದ್ದಾರೆ. 2024ರ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಬಾಳೆ ಮತ್ತು ತೆಂಗಿನ ಗರಿಗಳಲ್ಲಿ ತಯಾರಿಸಿದ ಅಯೋಧ್ಯೆಯ ರಾಮನ ಮಂಟಪ, ರಾಮ-ಸೀತೆ, ಲಕ್ಷ್ಮಣರ ಪ್ರತಿಮೆ ತಯಾರಿಸಿದ್ದ ರಶ್ಮಿ, ಜಾನೂರು ವಿಭಾಗದಲ್ಲಿ ಪ್ರಥಮ ಬಹುಮಾನ ಪಡೆದುಕೊಂಡಿದ್ದರು.

ನಂತರ 2024ರ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಆಯೋಜಿಸಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.

ಉದಯವಾಹಿನಿ ಚಿತ್ರ

ಅಂಬೇಡ್ಕರ್ ಕುರಿತ ಸ್ಪರ್ಧೆಯಲ್ಲಿಯೂ ರತ್ನ ಅವರು ದೆಹಲಿಯ ಹಳೆಯ ಸಂಸತ್ ಭವನದ ಕಟ್ಟಡವನ್ನು ತೆಂಗಿನ ಗರಿಗಳಿಂದ ರಚಿಸಿ ಪ್ರಥಮ ಬಹುಮಾನ ಪಡೆದುಕೊಂಡಿದ್ದರು. ಈ ಬಾರಿಯ ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನದಲ್ಲಿ ವಿಶ್ವಗುರು ಬಸವಣ್ಣ ಮತ್ತು ವಚನ ಸಾಹಿತ್ಯಾಧಾರಿತ ಗಣರಾಜ್ಯೋತ್ಸವದ 216ನೇ ಫಲಪುಷ್ಪ ಪ್ರದರ್ಶನದ ತೋಟಗಳ ಸ್ಪರ್ಧೆಗಳಾದ ಇಕೆಬಾನಾ, ತರಕಾರಿ ಕೆತ್ತನೆ, ಥಾಯ್ ಆರ್ಟ್, ಜಾನೂರು, ರಂಗೋಲಿ ಸ್ಪರ್ಧೆ, ಪುಷ್ಪಭಾರತಿ, ಬೋನ್ಸಾಯ್, ಒಣ ಹೂವಿನ ಜೋಡಣೆ ಸೇರಿ ಹಲವಾರು ಪೂರಕ ಕಲೆಗಳ ಸ್ಪರ್ಧೆ ಆಯೋಜಿಸಲಾಗಿದ್ದು ನೂರಾರು ಕಲಾವಿದರು ಭಾಗವಹಿಸಿದ್ದಾರೆ.

ಹೃದಯಾಘಾತಕ್ಕೆ ಪ್ರತಿಭಟನಾಕಾರನ ಸಾವು

• ಉದಯವಾಹಿನಿ ಗುಡಿಬಂಡೆ

ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ತಾಲ್ಲೂಕು ಕಚೇರಿ ಎದುರು ಹಮ್ಮಿಕೊಂಡಿರುವ ಅನಿರ್ದಿಷ್ಟಾವಧಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ವ್ಯಕ್ತಿಯೊಬ್ಬ ಶುಕ್ರವಾರ ರಾತ್ರಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಉಲ್ಲೋಡು ಗ್ರಾಪಂ ವ್ಯಾಪ್ತಿಯ ಮಾಚಾವಲ ಹಳ್ಳಿಯ ನರಸಿಂಹಪ್ಪ (65) ಮೃತ ಇತ್ತೀಚೆಗೆ ಅನಾರೋಗ್ಯಕ್ಕೆ ತುತ್ತಾಗಿ ಚಿಕಿತ್ಸೆ ಪಡೆಯುತ್ತಿದ್ದರು. ನರಸಿಂಹಪ್ಪ ಉಚಿತ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದ್ದು, ದಲಿತ ಸಂಘಟನೆ ಹಮ್ಮಿಕೊಂಡಿರುವ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ರಾತ್ರಿ 10 ಗಂಟೆ ಸುಮಾರಿಗೆ ಹೃದಯಾಘಾತವಾಗಿದ್ದು, ಕೂಡಲೇ ಗುಡಿಬಂಡೆ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಘಟನಾ ಸ್ಥಳಕ್ಕೆ ಚಿಕ್ಕಬಳ್ಳಾಪುರ ಡಿವೈಎಸ್‌ಪಿ ಶಿವಕುಮಾರ್ ಭೇಟಿ ನೀಡಿ ಪರಿಶೀಲಿಸಿದರು. ತಹಶೀಲ್ದಾರ್ ಸಿಗೃತ್‌ವುಲ್ಲಾ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಲಕ್ಷ್ಮೀಪತಿ ರೆಡ್ಡಿ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ನಿವೇಶನ, ಭೂಮಿ ಮಂಜೂರು, ದಲಿತರ ಮೇಲಿನ ದೌರ್ಜನ್ಯ, ಮೂಲಸೌಕರ್ಯ ಪೂರೈಕೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗ

ಅಂತರಾಳದಿಂದ... EDITORIAL

ಜಲಗಾಂವ್ ರೈಲು ದುರಂತ ಹಲವು ಪ್ರಶ್ನೆ ಮತ್ತು ಪಾಠ

ಉದಯವಾಹಿನಿ ಚಿತ್ರ

ಹೆಚ್ಚಿನ ಸಂಖ್ಯೆಯ ಅಪಘಾತಗಳಿಗೆ ತಪ್ಪುಗ್ರಹಿಕೆಗಳು ಇಲ್ಲವೇ ಪರಿಸ್ಥಿತಿಯನ್ನು ಸರಿಯಾಗಿ ಅಂದಾಜಿಸುವಲ್ಲಿ ಆಗುವ ವೈಫಲ್ಯಗಳೇ ಕಾರಣ. ಯಾವುದಾದರೂ ಘಟನೆ ನಡೆದಾಗ ತಕ್ಷಣವೇ ಸ್ಪಂದಿಸಲು ಬೇಕಾದಷ್ಟು ಸಾಮರ್ಥ್ಯ ಹಾಗೂ ಅವಕಾಶದ ಕೊರತೆ ಕೂಡ ಹಲವು ಅಪಘಾತಗಳಿಗೆ ಕಾರಣ ಆಗುವುದಿದೆ. ಕೆಲವೊಂದು ಅಪಘಾತಗಳಿಗೆ ಮಾತ್ರ ಮೇಲಿನ ಎಲ್ಲ ಸಂಗತಿಗಳು ಒಟ್ಟಾಗಿ ಕಾರಣ ಆಗುವುದುಂಟು.

ಮಹಾರಾಷ್ಟ್ರದ ಜಲಗಾಂವ್‌ನಲ್ಲಿ ಸಂಭವಿಸಿದ ರೈಲು ದುರಂತ ಕೂಡ ಅಂತಹದ್ದೇ ಒಂದು ಅಪಘಾತ ಪ್ರಕರಣ. ಲಖನೌದಿಂದ ಮುಂಬೈಗೆ ಹೊರಟಿದ್ದ ಪುಷ್ಪಕ್ ಎಕ್ಸ್‌ಪ್ರೆಸ್‌ನ ಬೋಗಿಯೊಂದರಲ್ಲಿ ಬೆಂಕಿ ಹೊತ್ತಿಕೊಂಡಿದೆ ಎಂಬ ವದಂತಿ ಹಬ್ಬಿದ್ದರಿಂದ ಹಲವು ಪ್ರಯಾಣಿಕರು ಚೈನು ಎಳೆದು, ರೈಲು ನಿಲ್ಲುವಂತೆ ಮಾಡಿ, ಜಿಗಿದು ಓಡತೊಡಗಿದಾಗ ಈ ದುರಂತ ಸಂಭವಿಸಿತು. ಪಕ್ಕದ ಹಳಿಗಳ ಮೇಲೆ ಬರುತ್ತಿದ್ದ ಕರ್ನಾಟಕ ಎಕ್ಸ್‌ಪ್ರೆಸ್ ರೈಲಿನ ಅಡಿಗೆ ಸಿಲುಕಿ 13 ಜನ ಜೀವ ಕಳೆದುಕೊಳ್ಳಬೇಕಾಯಿತು. ಚಹಾ ಮಾರುವ ವ್ಯಕ್ತಿ ವದಂತಿ ಹಬ್ಬಿಸಿದ್ದೇ ಈ ದುರ್ಘಟನೆಗೆ ಕಾರಣವಾಯಿತು ಎಂದು ಹೇಳಲಾಗುತ್ತಿದೆ.

ಘಟನೆ ನಡೆದ ಸ್ಥಳದಲ್ಲಿ ರೈಲು ಮಾರ್ಗ ತಿರುವಿನಿಂದ ಕೂಡಿದ್ದರಿಂದ ಪ್ರಯಾಣಿಕರು ಹಳಿಗಳ ಮೇಲೆ ಓಡುತ್ತಿರುವುದು ಕರ್ನಾಟಕ ಎಕ್ಸ್‌ಪ್ರೆಸ್ ರೈಲಿನ ಚಾಲಕರಿಗೆ ಬೇಗ ಗೊತ್ತಾಗಿಲ್ಲ. ಬಳಿಕ ರೈಲಿನ ವೇಗವನ್ನು ತಗ್ಗಿಸಿದರೂ ದುರಂತವನ್ನು ತಪ್ಪಿಸಲು ಸಾಧ್ಯವಾಗಿಲ್ಲ.

> **ಬೆಂಕಿ ಹೊತ್ತಿಕೊಂಡ ವದಂತಿಯು ಕಾರಣವಿಲ್ಲದೆ ಹಬ್ಬಿತೋ ಅಥವಾ ರೈಲಿನಲ್ಲಿ ಕಿಡಿ ಹಾಗೂ ಹೊಗೆ ಕಾಣಿಸಿಕೊಂಡಿದ್ದರಿಂದ ಎದ್ದಿತೋ ಎಂಬುದು ಸ್ಪಷ್ಟವಾಗಿಲ್ಲ. ಅಚ್ಚುಗಳು ಬಿಸಿಯಾಗಿದ್ದರಿಂದಲೋ ಬ್ರೇಕ್ ವ್ಯವಸ್ಥೆಯಲ್ಲಿನ ದೋಷದಿಂದಾಗಿ ಗಾಲಿ ಮತ್ತು ಹಳಿಗಳ ನಡುವೆ ಘರ್ಷಣೆ ಏರ್ಪಟ್ಟಿದ್ದರಿಂದಲೋ ಕಿಡಿ ಕಾಣಿಸಿಕೊಂಡಿರಬಹುದು ಎಂದೂ ಹೇಳಲಾಗುತ್ತಿದೆ.**

ವದಂತಿ, ಗೊಂದಲ ಹಾಗೂ ಕೈಮೀರಿದ ಸನ್ನಿವೇಶ- ಹೀಗೆ ಎಲ್ಲವೂ ಈ ಅಪಘಾತಕ್ಕೆ ಕಾರಣವಾಗಿವೆ. ಬೆಂಕಿ ಹೊತ್ತಿಕೊಂಡ ವದಂತಿಯು ಕಾರಣವಿಲ್ಲದೆ ಹಬ್ಬಿತೋ ಅಥವಾ ರೈಲಿನಲ್ಲಿ ಕಿಡಿ ಹಾಗೂ ಹೊಗೆ ಕಾಣಿಸಿಕೊಂಡಿದ್ದರಿಂದ ಎದ್ದಿತೋ ಎಂಬುದು ಸ್ಪಷ್ಟವಾಗಿಲ್ಲ. ಅಚ್ಚುಗಳು ಬಿಸಿಯಾಗಿದ್ದರಿಂದಲೋ ಬ್ರೇಕ್ ವ್ಯವಸ್ಥೆಯಲ್ಲಿನ ದೋಷದಿಂದಾಗಿ ಗಾಲಿ ಮತ್ತು ಹಳಿಗಳ ನಡುವೆ ಘರ್ಷಣೆ ಏರ್ಪಟ್ಟಿದ್ದರಿಂದಲೋ ಕಿಡಿ ಕಾಣಿಸಿಕೊಂಡಿರಬಹುದು ಎಂದೂ ಹೇಳಲಾಗುತ್ತಿದೆ. ಒಂದುವೇಳೆ, ಈ ಸಂಗತಿಯೇನಾದರೂ ನಿಜವಾಗಿದ್ದಲ್ಲಿ ರೈಲಿನ ಎಲ್ಲಾ ಸಾಧನ-ಸಲಕರಣೆಗಳು ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳುವಲ್ಲಿ ರೈಲ್ವೆ ಇಲಾಖೆಯ ನಿರ್ವಹಣಾ ವಿಭಾಗವು ಸೋತಿದೆ ಎಂದರ್ಥ. ಆಗ, ಈ ವಿಭಾಗವನ್ನೇ ಉತ್ತರದಾಯಿಯನ್ನಾಗಿ ಮಾಡ ಬೇಕಾಗುತ್ತದೆ. ರೈಲಿನಲ್ಲಿ ಯಾವುದೇ ಕಿಡಿ ಇಲ್ಲವೇ ಹೊಗೆ ಕಾಣಿಸಿಕೊಂಡಿರಲಿಲ್ಲ ಎಂದು ಇಲಾಖೆಯು ಹೇಳಿದೆ. ಆದರೆ, ಇಲಾಖೆಯ ಈ ಹೇಳಿಕೆಯೇ ಅಂತಿಮವಲ್ಲ.

ಕಾರ್ಯಾಚರಣೆ ಹಾಗೂ ಸುರಕ್ಷತಾ ವ್ಯವಸ್ಥೆಯಲ್ಲಿ ಏನಾದರೂ ಲೋಪಗಳಾಗಿವೆಯೇ ಎಂಬುದನ್ನು ಪತ್ತೆ ಮಾಡಲು ತನಿಖೆ ನಡೆಯುತ್ತಿದೆ. ಸುಳ್ಳು ವದಂತಿಯೇ ದುರ್ಘಟನೆಗೆ ಕಾರಣ ಎಂಬುದಾಗಿ ಮಹಾರಾಷ್ಟ್ರ ಸರ್ಕಾರವೂ ಹೇಳಿದೆ. ಯಾವುದಾದರೂ ಪಿತೂರಿ ಈ ಘಟನೆಯ ಹಿಂದಿದೆಯೇ ಎಂಬುದನ್ನು ಪತ್ತೆ ಮಾಡುವುದಕ್ಕಾಗಿ ಜಲಗಾಂವ್ ಜಿಲ್ಲಾಡಳಿತವು ತನಿಖೆಗೆ ಆದೇಶಿಸಿದೆ. ರೈಲ್ವೆ ಇಲಾಖೆಯಲ್ಲಿನ ಸುರಕ್ಷತಾ ವ್ಯವಸ್ಥೆಯ ವೈಫಲ್ಯವೇ ಘಟನೆಗೆ ಕಾರಣ ಎಂದು ವಿರೋಧಪಕ್ಷಗಳು ದೂರಿವೆ. ಭಿನ್ನ ಆಯಾಮಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ನಡೆದಿರುವ ತನಿಖೆಗಳಿಂದ ದುರಂತಕ್ಕೆ ನಿಖರ ಕಾರಣವೇನು ಎಂಬುದು ಗೊತ್ತಾಗಲಿದೆ.

ಆದರೆ, ಪ್ರತಿ ದುರ್ಘಟನೆಯಿಂದಲೂ ಕಲಿಯಬೇಕಾದ ಪಾಠಗಳಿರುತ್ತವೆ. ದುರಂತವು ಮಾನವ ದೋಷ, ಯಾಂತ್ರಿಕ ವೈಫಲ್ಯ, ನೈಸರ್ಗಿಕ ಪ್ರಕೋಪ ಅಥವಾ ಪ್ರಯಾಣಿಕರಿಂದ ಹಬ್ಬುವ ವದಂತಿ ಯಾವುದರಿಂದಲೇ ಆಗಿರಲಿ, ಅಪಘಾತ ಸಂಭವಿಸದಂತೆ ಎಚ್ಚರಿಕೆ ವಹಿಸಬೇಕಾಗಿರುವುದು ರೈಲ್ವೆ ಇಲಾಖೆಯ ಜವಾಬ್ದಾರಿ. ರೈಲು ಬೋಗಿಗಳಲ್ಲಿ ಹಬ್ಬುವ ವದಂತಿಗಳನ್ನು ಇಲಾಖೆಯು ಹೇಗೆ ನಿಭಾಯಿಸಲಿದೆ ಎಂಬ ಪ್ರಶ್ನೆಯನ್ನು ಜಲಗಾಂವ್ ದುರಂತ ಈಗ ಮುನ್ನೆಲೆಗೆ ತಂದಿದೆ. ಪ್ರತಿ ಬೋಗಿಯಲ್ಲೂ ಪ್ರಯಾಣಿಕರಿಗೆ ಸರಿಯಾದ ಮಾಹಿತಿ ತಲುಪಿಸುವಂತಹ ಸಂವಹನ ವ್ಯವಸ್ಥೆಯೊಂದು ಬೇಕಾಗಿರುವುದು ಇಂದಿನ ತುರ್ತು. ಆ ದಿಸೆಯಲ್ಲಿ, ಸರ್ಕಾರ ಏನು ಯೋಜನೆ ರೂಪಿಸಲಿದೆ ಎಂಬುದನ್ನು ಕಾದುನೋಡಬೇಕು. ವದಂತಿಗಳು ಹಬ್ಬಿದಾಗ ಗಾಬರಿ ಬಿದ್ದು ಸುರಕ್ಷಿತ ತಾಣಗಳತ್ತ ಓಡುವುದು ಜನ ತೋರುವ ಸಾಮಾನ್ಯ ಪ್ರತಿಕ್ರಿಯೆ. ದುರ್ಘಟನೆಗೆ ಸಂಬಂಧಿಸಿದಂತೆ ಅವರನ್ನು ದೂಷಿಸುವುದರಲ್ಲಿ ಅರ್ಥವಿಲ್ಲ. ಪ್ರತಿ ಅಪಘಾತ ಸಂಭವಿಸಿದಾಗಲೂ ಅದು ಸುರಕ್ಷತೆಯ ಕುರಿತು ಪ್ರಶ್ನೆಗಳನ್ನು ಎತ್ತುತ್ತದೆ ಮತ್ತು ಅಂತಹ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕಂಡುಕೊಂಡು ವ್ಯವಸ್ಥೆಯನ್ನು ಬಲಪಡಿಸುವ ಕೆಲಸವನ್ನು ಮಾಡುವುದು ರೈಲ್ವೆ ಇಲಾಖೆಯ ಕರ್ತವ್ಯವಾಗಿದೆ.

• ಹಿಂದಿನ ಸಂಚಿಕೆಯಿಂದ **73ನೆಯ ಅಧ್ಯಾಯ**

ಕ್ಷಮೆಯಲ್ಲಿ ಭೂಮಿಗೆ ಸಮಾನನು. ಬುದ್ಧಿಯಲ್ಲಿ ಬೃಹಸ್ಪತಿಗೆ ಸಮಾನನು ತನ್ನ ತಂದೆಗೆ ಸಂತೋಷವುಂಟುಮಾಡುವ ಚರಿತ್ರವುಳ್ಳವನು. ಹೀಗೆ ಅನೇಕ ಸದ್ಗುಣಗಳಿಂದ ಸಹಸ್ರಕಿರಣಗಳುಳ್ಳ ಸೂರನೋಪಾದಿ ಯಲ್ಲೊಪತ್ತ ಶತ್ರುಗಳಿಗೆ ಸಹಿಸಲು ಶಕ್ಯವಲ್ಲದ ಪರಾಕ್ರಮವುಳ್ಳ ಅದಿಕ್ಷಾಲಕರಿಗೆ ಸಮಾನನಾದ ಶ್ರೀರಾಮನು ತನಗೆ ಪತಿಯಾಗಬೇಕೆಂದು ಭೂದೇವಿಯು ಬಯಸಿದಳು.

ಈ ಪ್ರಕಾರದಲ್ಲಿ ಸದ್ಗುಣ ಸಂಪನ್ನನಾದ ಶ್ರೀರಾಮನನ್ನು ನೋಡಿ ವೃದ್ಧರಾದ ದಶರಥ ರಾಜನು ತನ್ನ ಮನಸ್ಸಿನಲ್ಲಿ ನಾನು ಜೀವಿಸಿರುವಾಗಲೇ! ಶ್ರೀರಾಮನಿಗೆ ಪಟ್ಟಾಭಿಷೇಕ ವನ್ನು ಮಾಡಬೇಕು. ನನ್ನ ಪ್ರಿಯಪುತ್ರನೂ ಸರ್ವಭೂತದಯಾಪರನೂ ಮಳೆಯನ್ನು ಕರೆಯುವ ವರ್ಜನ್ಯನ ಸಮಾನನಾದವನೂ ವರಾಕ್ರಮದಲ್ಲಿ ದೇವೇಂದ್ರನಿಗೂ ಧೈರ್ಯ ದಲ್ಲಿ ಹಿಮವತ್ಪರ್ವತಕ್ಕೂ ಸಮಾನನಾದವನೂ ನನಗಿಂತಲೂ ಅಧಿಕ ಗುಣಸಂಪನ್ನನೂ ಆದ ಶ್ರೀರಾಮನಲ್ಲಿ ಸಮಸ್ತ ಭೂಭಾರವನ್ನು ಇರಿಸಿ ಪಟ್ಟಾಭಿಷಿಕ್ತನಾದ ಆತನನ್ನು ಒಂದುಸಾರಿಯಾದರೂ ನೋಡಿದಮೇಲೆ ನಾನು ಸ್ವರ್ಗಲೋಕವನ್ನೇ ದುವೆನು ಎಂದು ಯೋಚಿಸಿದನು; ಅರಸುಗಳಿಗುಚಿತವೂ ಅಪರಿಮಿತವೂ ಪವಿತ್ರಕರವೂ ಆದ ಸದ್ಗುಣಗಳಿಂದ ಯುಕ್ತವಾದ ಆ ಕುಮಾರನಿಗೆ ಯುವರಾಜಪಟ್ಟವನು ಕಟ್ಟಬೇಕೆಂದು ಪ್ರಧಾನಿಗಳ ಕೂಡ ಆಲೋಚನೆಯನ್ನು ಮಾಡಿ ನಿಶ್ಚಯಿಸಿದನು. ಅವರನ್ನು ಕುರಿತು ನನಗೆ ಭೂಮಿಯಲ್ಲಿಯೂ ಅಂತರಿಕ್ಷದಲ್ಲಿಯೂ ಭಯಗಳೂ ಉತ್ಪಾತಗಳೂ ತೋರುತ್ತಿವೆ. ನನ್ನ ಶರೀರದಲ್ಲಿ ಮುಪ್ಪು ತಲೆದೋರಿದೆ. ಪೂರ್ಣಚಂದ್ರನಂತೆ ಮುಖವುಳ್ಳ ಶ್ರೀರಾಮನು ನನ್ನ ಮನಸ್ಸಿನ ಚಿಂತೆಯನ್ನು ಪರಿಹರಿಸುವನು. ಆತನು ಸಮಸ್ತ ಪ್ರಜೆಗಳಿಗೂ ನನಗೂ ಇಷ್ಟನಾದವನು. ಪ್ರಜೆಗಳ ಶ್ರೇಯಸ್ಸಿಗೂ ನನ್ನ ಶ್ರೇಯಸ್ಸಿಗೂ ಕಾರಣನಾದವನು ಎಂದು ನುಡಿದನು. ಅನಂತರ ಕಾಲೋಚಿತವನ್ನರಿತು ಧರ್ಮಾತ್ಮನಾದ ಆ ರಾಯನು ತನ್ನ ಕುಮಾರನಾದ ಶ್ರೀರಾಮನ ಮೇಲಣ ಪ್ರೀತಿಯಿಂದ ತನ್ನ ದೇಶದಲ್ಲಿ ನಾನಾ ಪ್ರಾಂತಗಳಲ್ಲಿಯೂ ಮರ್ಗಗಳಲ್ಲಿಯೂ ಇದ್ದ ಪ್ರಧಾನ ಪುರುಷರನ್ನು ಕರೆಯಿಸಿ, ಅವರನ್ನು ಅನೇಕ ಬಿಡಾರಗಳಲ್ಲಿ ಇರಿಸಿ ಅಲಂಕಾರವಾದ ಉಡುಗೊರೆಗಳಿಂದ ಸತ್ಕರಿಸಿದನು. ಜನಕರಾಯನೂ ಕೇಕಯರಾಯನೂ ಶ್ರೀರಾಮನಿಗೆ ಪಟ್ಟಾಭಿಷೇಕವಾಗುವುದನ್ನು ಆನಂತರ ಕೇಳುವರೆಂದು ಭಾವಿಸಿ, ತ್ವರಾವಿಷ್ಟನಾದ್ದರಿಂದ ಅವರನ್ನು ಕರೆಯಿಸದೆ ಪಟ್ಟಾಭಿಷೇಕಕ್ಕೆ ಯತ್ನ ಮಾಡಿದನು. ಆಮೇಲೆ ಸಮೀಪದಲ್ಲಿ ಕುಳಿತಿದ್ದ ತನ್ನ ದೇಶದ ರಾಯರಿಂದಲೂ ಅನೇಕ ವಿನಯಗುಣಸಂಪನ್ನರಾದ ಪರರಾಯರಿಂದಲೂ ತೇಜಸ್ವಿಗಳಾದ ಪುರಜನಗಳಿಂದಲೂ ಪರಿವೃತನಾಗಿ ದಶರಥರಾಯನು ಸಿಂಹಾಸನಾರೂಢನಾಗಿ ದೇವಸಭೆಯಲ್ಲಿ ಸಮಸ್ತ ದೇವತೆಗಳಿಂದ ವರಿವೃತಾದ ದೇವೇಂದ್ರನಂತೆ ಒಪ್ಪುತ್ತ ಆಲೋಚನೆಮಾಡುತ್ತಿದ್ದನು. **ಮುಂದುವರೆಯುವುದು.....**

ಈ ದಿನ ಭಾರತದ ಪ್ರಜಾಪ್ರಭುತ್ವ ದಿನ

ರಾಷ್ಟ್ರಾಭಿಮಾನವನ್ನು ಜಾಗೃತಗೊಳಿಸುವ ಕೃತಿ ಮಾಡಿ ನಿಜವಾದ ಅರ್ಥದಲ್ಲಿ ಆಚರಿಸೋಣ

• ಶ್ರೀ. ಮೋಹನ್ ಗೌಡ

ಉದಯವಾಹಿನಿ ವಿಶೇಷ

26 ಜನವರಿ ಈ ದಿನ ಭಾರತದ ಪ್ರಜಾಪ್ರಭುತ್ವ ದಿನ ಅಂದರೆ ಗಣರಾಜ್ಯೋತ್ಸವವಾಗಿದೆ. ಈ ಪ್ರಯುಕ್ತ ರಾಷ್ಟ್ರಾಭಿಮಾನ ಹಾಗೂ ರಾಷ್ಟ್ರಪ್ರೇಮವನ್ನು ಜಾಗೃತಗೊಳಿಸುವಂತಹ ಕೃತಿಗಳು ಹಾಗೂ ಆದರ್ಶ ಪ್ರಜಾಪ್ರಭುತ್ವವುಳ್ಳ ರಾಜ್ಯ ಬರುವುದಕ್ಕಾಗಿ ಅವಶ್ಯಕವಿರುವ ಬೇಡಿಕೆಗಳನ್ನು ಈ ಲೇಖನದಲ್ಲಿ ಮಂಡಿಸಲಾಗಿದೆ.

ಈ ರೀತಿಯ ಕೃತಿ ಮಾಡುವುದರಿಂದ ಆದರ್ಶ ಪ್ರಜಾಪ್ರಭುತ್ವದ ರಾಜ್ಯ ಬರುತ್ತದೆ ಹಾಗೂ ಆಗಲೇ ಕ್ರಾಂತಿಕಾರರು ದೇಶಕ್ಕಾಗಿ, ಪರ್ಯಾಯವಾಗಿ ನಮಗಾಗಿ ಮಾಡಿದ ಬಲಿದಾನದ ಋಣವನ್ನು ನಿಜಾರ್ಥದಲ್ಲಿ ತೀರಿಸಬಹುದು. ಪ್ರಜೆಗಳು ಪ್ರಜೆಗಳ ಕಲ್ಯಾಣಕ್ಕಾಗಿ ನಡೆಸುತ್ತಿರುವ ರಾಜ್ಯವೆಂದರೆ ಪ್ರಜಾಪ್ರಭುತ್ವ, ಅಂದರೆ ಪ್ರಜಾತಂತ್ರ. ಆದರೆ ಮಿತ್ರರೇ, ಇಂದು ನಿಜವಾದ ಅರ್ಥದಲ್ಲಿ ಪ್ರಜೆಗಳ ರಾಜ್ಯವಿದೆಯೇ? ಇಲ್ಲವಲ್ಲ, ಪ್ರಜಾಪ್ರಭುತ್ವ ದಿನದ ಪ್ರಯುಕ್ತ ಇಂದಿನ ದಯನೀಯ ಸ್ಥಿತಿಯ ಹಿಂದಿರುವ ಕಾರಣಗಳ ಬಗ್ಗೆ ಚಿಂತನೆ ಮಾಡಬೇಕಾಗಿದೆ.

ರಾಷ್ಟ್ರಾಭಿಮಾನದ ಅಭಾವ'ವೇ ದೇಶದ ಎಲ್ಲ ಸಮಸ್ಯೆಗಳ ಹಿಂದಿನ ಕಾರಣ: ದೇಶದಲ್ಲಿ ಹಲವಾರು ಸಮಸ್ಯೆಗಳಿವೆ. ದೇಶದಲ್ಲಿ ಭ್ರಷ್ಟಾಚಾರವು ಕೋಲಾಹಲವೆಬ್ಬಿಸಿದೆ. ದೇಶದ ಗಡಿಗಳು ಕೂಡ ಸುರಕ್ಷಿತವಾಗಿಲ್ಲ. ದೇಶದ ಸ್ಥಿತಿ ಹೀಗೆಯೇ ಮುಂದುವರಿದರೆ ನಮ್ಮೆಲ್ಲರ ಅಸ್ತಿತ್ವಕ್ಕೂ ಧಕ್ಕೆಯುಂಟಾಗುವುದು. ಇದಕ್ಕಾಗಿ ನಾವು ದೇಶದ ಭಾವೀ ಪ್ರಜೆಗಳು ಎಂಬ ಸಂಬಂಧದಿಂದ ಈ ವಿಷಯದ ಬಗ್ಗೆ ಗಂಭೀರವಾದ ವಿಚಾರ ಮಾಡಿ ಉಪಾಯವನ್ನು ಹುಡುಕಬೇಕಾಗಿದೆ, ಆಗಲೇ ಮುಂಬರುವ ಭಾರತವು ಆದರ್ಶ ಹಾಗೂ ಸುಜಲಾಂ ಸುಫಲಾಂ ಆಗುತ್ತದೆ. ನಮ್ಮೆಲ್ಲರಲ್ಲಿರುವ ರಾಷ್ಟ್ರಾಭಿಮಾನದ ಅಭಾವವೇ ಇದಕ್ಕೆ ಮುಖ್ಯ ಕಾರಣವಾಗಿದೆ ಎಂದ. ನಾನು ಮಾಡುವ ಪ್ರತಿಯೊಂದು ಕೃತಿಯನ್ನು ನನ್ನಲ್ಲಿ ಹಾಗೂ ಇತರರಲ್ಲಿ ರಾಷ್ಟ್ರಾಭಿಮಾನ ಜಾಗೃತವಾಗುವಂತೆಯೇ ಮಾಡುವೆನು' ಎಂದು ನಾವು ಇಂದಿನಿಂದ ನಿರ್ಧರಿಸಬೇಕಾಗಿದೆ. ಮೇಲೆ ನೀಡಿರುವಂತಹ ಪ್ರತಿಯೊಂದು ಅಂಶಗಳನ್ನೂ ನಾವು ಆಚರಿಸಿದಾಗ ಅದು ನಿಜವಾದ ಪ್ರಜಾಪ್ರಭುತ್ವವಾಗಿರುತ್ತದೆ. ನಾವು ಪ್ರತಿಯೊಂದು ಅಂಶಗಳನ್ನು ಕೃತಿಯಲ್ಲಿ ತಂದುಕೊಳ್ಳೋಣ.

ರಾಷ್ಟ್ರಾಭಿಮಾನವನ್ನು ಜಾಗೃತಗೊಳಿಸಲು ಮಾಡಬೇಕಾಗಿರುವ ಕೃತಿಗಳು

- ಧ್ವಜದ ಅಪಮಾನವನ್ನು ತಡೆಯುವುದು.
- ಕ್ರಾಂತಿಕಾರರ ಚರಿತ್ರೆಯ ಅಧ್ಯಯನ ಮಾಡಿ ಅವರ ಮೌಲ್ಯಗಳನ್ನು ಕೃತಿಯಲ್ಲಿ ತರುವುದು.
- ದೇಶಭಕ್ತಿ ಹಾಡುಗಳನ್ನು ಕಂಠಪಾಠ ಮಾಡುವುದು ಹಾಗೂ ಅದನ್ನು ಸಮೂಹದಲ್ಲಿ ಹಾಡುವುದು.
- ಕ್ರಾಂತಿಕಾರರ ಘೋಷವಾಕ್ಯಗಳನ್ನು ಹಾಗೂ ಅವರ ಚಿತ್ರಗಳನ್ನು ಮನೆಯಲ್ಲಿ ಹಾಕುವುದು.
- ಯಾವುದಾದರೊಬ್ಬ ಕ್ರಾಂತಿಕಾರರನ್ನು ನಮಗೆ ಆದರ್ಶವಾಗಿ ಆರಿಸುವುದು.
- ಸ್ನೇಹಿತರ ಜನ್ಮದಿನದಂದು ಕ್ರಾಂತಿಕಾರರ ಚಿತ್ರ ಅಥವಾ ಅವರ ಬಗ್ಗೆ ಮಾಹಿತಿ ನೀಡುವ ಸಣ್ಣ ಪುಸ್ತಕಗಳನ್ನು ಉಡುಗೊರೆಯಾಗಿ ನೀಡುವುದು.
- ತಮ್ಮ ಶಾಲೆಗಳಲ್ಲಿ ಸಂಪೂರ್ಣ 'ವಂದೇ ಮಾತರಂ' ಅನ್ನು ಹೇಳಲು ಆಗ್ರಹ ಮಾಡುವುದು.
- ರಾಷ್ಟ್ರಗೀತೆಯ ಅಪಮಾನವಾಗುತ್ತಿದ್ದರೆ ಅದನ್ನು ತಡೆಯುವುದು.
- ಕ್ರಾಂತಿಕಾರರ ಜೀವನದ ಮೇಲಾಧರಿಸಿದ ಚರ್ಚಾಕೂಟಗಳನ್ನು ಆಯೋಜಿಸುವುದು.
- ಪ್ರತಿಜ್ಞೆಯಂತೆ ನಡೆದುಕೊಳ್ಳುವುದು.
- ಕ್ರಾಂತಿಕಾರರ ಹಾಗೂ ದೇಶಭಕ್ತರ ಚಿತ್ರಗಳ ಪ್ರದರ್ಶನವನ್ನು ಆಯೋಜಿಸುವುದು.
- ಕ್ರಾಂತಿಕಾರರ ಚಿತ್ರಗಳಿಗೆ ಬಣ್ಣ ಹಚ್ಚುವ ಸ್ಪರ್ಧೆಯನ್ನು ಆಯೋಜಿಸುವುದು.
- ದೇಶಭಕ್ತಿಯನ್ನು ಮೂಡಿಸುವಂತಹ ಚಲನಚಿತ್ರ ಹಾಗೂ ಧಾರಾವಾಹಿಗಳನ್ನು ನೋಡುವುದು..

ದಿನಕ್ಕೊಂದು ಮುಕ್ತಕ -77

ಹೆಚ್.ಎಸ್. ಪ್ರತಿಮಾ

ಉದಯವಾಹಿನಿ ವಿಶೇಷ

ಬಲಿಯಾಗಿ ಇತರರೆಡೆ ಮಾತಿನಲಿ ಜೀವನವು ಕಲೆಯಿರಲು ನೆಲೆಯಲ್ಲಿ ತಿಳಿಯುವಲ್ಲಿ ಹಲವು ಕಾಯಕವಿರಲು ಮನೆಯೊಂದು ಅಂತರವು ಬಲವು ತುಂಬಿರಬೇಕು ಲಕ್ಷ್ಮಿ ದೇವಿ....

ಭಾವಾರ್ಥ: ಬಲಿಯಾಗುತ್ತಿರುವುದು ಜೀವನವು ಹಲವರ ಮಾತನ್ನು ಕೇಳಿ. ನೆಲೆಯಲಿ ಕಲೆಯಾದಂತೆ. ಜನರ ಜೀವನದಲ್ಲಿ ಮನೆಯಲ್ಲಂತೂ ಹಲವಾರು ಕೆಲಸಗಳು ಇರುತ್ತವೆ. ಎಲ್ಲರಿಗೂ ಅವರದೇ ಆದ ಜವಾಬ್ದಾರಿಗಳು ಇರುತ್ತವೆ. ಇತರರ ಮಾತನ್ನು ಕೇಳಿ ಜೀವನದಲ್ಲಿ ಬೀರುಕುಂಟಾದರೆ. ಜೀವನವು ಬಹಳಷ್ಟು ಕಷ್ಟದಿಂದ ಸಾಗಬೇಕಾಗುತ್ತದೆ. ಯಾರೇ ಏನೇ ಹೇಳಿದರೂ ಸಹ. ಒಗ್ಗಟ್ಟು ಎಲ್ಲರಲ್ಲೂ ಇರಬೇಕು . ಬಲವು ಇದ್ದರೆ ಜೀವನದಲ್ಲಿ ಸಾರ್ಥಕ ಕಾಣಬಹುದು. ಜೀವನದಲ್ಲಿ ಸಂತೋಷವಾಗಿ ಇರಬೇಕೆಂದರೆ ಬಲವಿರಬೇಕು ಅದನ್ನು ಅರಿತು ಸಾಗಬೇಕು. ಆಗ ಜೀವನ ಸಂತಸದಲ್ಲಿ ಸಾಗುವುದು. ನಂಬಿಸಿ ಮೋಸ ಮಾಡಿದರೆ ನಿನಗೂ ಮೋಸ ಕಟ್ಟಿಟ್ಟ ಬುತ್ತಿ ಮರೆಯದಿರಿ. ಮೋಸ ಮಾಡದಿರಿ, ಮೋಸ ಹೋಗದಿರಿ.

ಸಂವಿಧಾನವನ್ನು ಜಾರಿಗೆ ತರಲು ಜ. 26 ಅನ್ನು ಏಕೆ ಆಯ್ಕೆ ಮಾಡಲಾಯಿತು.?

• ಉದಯವಾಹಿನಿ ಬೆಂಗಳೂರು

ಭಾರತದ ಇತಿಹಾಸವು ರಾಮಾಯಣ ಮತ್ತು ಮಹಾಭಾರತದ ಕಾಲಕ್ಕೆ ಹೋಗುತ್ತದೆ. ಈ ಭೂಮಿ ಸಿಂಧೂ ಕಣಿವೆ ನಾಗರೀಕತೆಯ ಕಾಲದಿಂದಲೂ ಅಸ್ತಿತ್ವದಲ್ಲಿರುವ ಪರಂಪರೆಯನ್ನು ಹೊಂದಿದೆ. ಬ್ರಿಟಿಷ್ ಸಾಮ್ರಾಜ್ಯದ ವಸಾಹತುಶಾಹಿ ಆಳ್ವಿಕೆಯಿಂದ ಈ ಭೂಮಿಯ ಶ್ರೀಮಂತ ಮತ್ತು ಪ್ರಾಚೀನ ಇತಿಹಾಸವು ಹಾಳಾಗಿದೆ.

ವಸಾಹತುಶಾಹಿಯ ಹಂತವು ಭಾರತಕ್ಕೆ ಕಷ್ಟಕರ ಅವಧಿಯಾಗಿತ್ತು ಮತ್ತು ಅದು ಆಗಸ್ಟ್ 15, 1947 ರಂದು ಸ್ವಾತಂತ್ರ್ಯದೊಂದಿಗೆ ಕೊನೆಗೊಂಡಿತು.

ಪ್ರತಿ ವರ್ಷ ಜನವರಿ 26 ರಂದು ಭಾರತದಲ್ಲಿ ಗಣರಾಜ್ಯೋತ್ಸವವನ್ನು ಆಚರಿಸಲಾಗುತ್ತದೆ.

ಸ್ವಾತಂತ್ರ್ಯ ದಿನಾಚರಣೆಯ ಜೊತೆಗೆ, ಇದು ನಮ್ಮ ದೇಶದಲ್ಲಿ ಅತ್ಯಂತ ಪ್ರಮುಖ ದಿನವಾಗಿದೆ. ಇದು ಭಾರತವನ್ನು ಡೊಮಿನಿಯನ್‌ನಿಂದ ಗಣರಾಜ್ಯವಾಗಿ ಪರಿವರ್ತಿಸಿದ ಭಾರತದ ಸಂವಿಧಾನವನ್ನು ಅಂಗೀಕರಿಸಿದ್ದನ್ನು ನೆನಪಿಸುತ್ತದೆ.

ಸಂವಿಧಾನವು ಜನವರಿ 26, 1950 ರಂದು ಜಾರಿಗೆ ಬಂದಿತು. ಆದಾಗ್ಯೂ, ಭಾರತದ ಸಂವಿಧಾನ ಸಭೆಯು

ನವೆಂಬರ್ 26, 1949 ರಂದು ಸಂವಿಧಾನವನ್ನು ಅಂಗೀಕರಿಸಿತು ಎಂಬುದನ್ನು ಗಮನಿಸಬೇಕು. ಇದು ಪ

ಕನ್ನಡ ಹೃದಯದ ಭಾಷೆಯಾಗಬೇಕು ಹೊರತು ಬಾಯಿಪಾಠವಾಗುವುದು ಬೇಡ

ಕನ್ನಡದ ಮನಸ್ಸುಗಳನ್ನು ಕೇಂದ್ರೀಕರಿಸಲು, ಜಾಗೃತಿಗೊಳಿಸಲು ಕನ್ನಡ ಸಾಹಿತ್ಯ ಸಮ್ಮೇಳನಗಳು ಪ್ರಸ್ತುತ ಅಗತ್ಯ

• ಉದಯವಾಹಿನಿ, ಬ್ಯಾಡಗಿ

ಕನ್ನಡದ ಮನಸ್ಸುಗಳನ್ನು ಕೇಂದ್ರೀಕರಿಸಲು ಮತ್ತು ಜಾಗೃತಿಗೊಳಿಸಲು 'ಕನ್ನಡ ಸಾಹಿತ್ಯ ಸಮ್ಮೇಳನ'ಗಳು ಪ್ರಸ್ತುತ ಅಗತ್ಯವಾಗಿವೆ ಎಂದು ಜಾನಪದ ವಿದ್ವಾಂಸ ಶಂಭು ಬಳಿಗಾರ ಅಭಿಪ್ರಾಯಪಟ್ಟರು.

ಪಟ್ಟಣದ ಎಪಿಎಂಸಿ ಆವರಣದ ಸಿದ್ಧೇಶ್ವರ ಕಲ್ಯಾಣ ಮಂಟಪದ ಬಯಲು ರಂಗಮಂದಿರದಲ್ಲಿ ಆಯೋಜಿಸಿದ್ದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಶಾಲೆಗಳ ಉಳಿವಿಗೆ ನಾವೆಲ್ಲ ಜಾಗೃತರಾಗಬೇಕು. ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಅಭ್ಯಾಸ ಮಾಡಬೇಕು, ಒಂದು ಮಾಧ್ಯಮವಾಗಿ ಅಲ್ಲ ಎಂದು ಪ್ರತಿಪಾದಿಸಿದ ಅವರು ರಾಜಕಾರಣಿಗಳಿಂದ ಶಿಕ್ಷಣ ಕ್ಷೇತ್ರ ಉದ್ಯಮವಾಗುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು. ಕನ್ನಡ ಹೃದಯದ ಭಾಷೆಯಾಗಬೇಕು ಹೊರತು ಬಾಯಿಪಾಠವಾಗುವುದು ಬೇಡ. ಕವಿಗಳು

ಉದಯವಾಹಿನಿ ಚಿತ್ರ

ರಾಜಕಾರಣಿಗಳಿಂದ ಶಿಕ್ಷಣ ಕ್ಷೇತ್ರ ಅಪವಿತ್ರ

ಆಚಾರ, ವಿಚಾರ, ನೋವು, ನಲಿವು, ಸಂಸ್ಕೃತಿಯನ್ನು ಅರ್ಥ ಮಾಡಿಕೊಂಡು ಅವುಗಳ ಮೂಲಕ ಜನರನ್ನು ಜಾಗೃತಗೊಳಿಸುವ ಸಾಹಿತ್ಯ ರಚಿಸಬೇಕಾಗಿದೆ ಎಂದರು. 14ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆ ಸಾಹಿತಿ ಸಂಕಮ್ಮ ಸಂಕಣ್ಣನವರ ಮಾತನಾಡಿ, ಮಾತೃಭಾಷೆ ಯಾದ ಕನ್ನಡವನ್ನು ಮನೆಯಿಂದಲೇ ಆರಂಭಿಸಬೇಕು. ಕನಿಷ್ಠ ದ್ವಿತೀಯ ಪಿಯುಸಿವರೆಗೆ ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸಬೇಕು ಎಂದು ಒತ್ತಾಯಿಸಿದರು.

ಸಮ್ಮೇಳನದ ಅಧ್ಯಕ್ಷ ಜೀವ ರಾಜ ಛತ್ರದ ಮಾತನಾಡಿ, ಕನ್ನಡ ಶಾಲೆಗಳು ಉಳಿಯಬೇಕಾದರೆ ರಾಜ್ಯದಲ್ಲಿರುವ ಸಿಗ್ರೇಡ್ ವಿದ್ಯಾರ್ಥಿಗಳಿಗೆ ಮೊರಾರ್ಜಿ, ಕಿತ್ತೂರ

ಮೆರವಣಿಗೆ ಬ್ಯಾಡಗಿ

ಪಟ್ಟಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ತಾಲ್ಲೂಕು 7ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಜೀವರಾಜ ಛತ್ರದ ದಂಪತಿಯನ್ನು ಅದ್ದೂರಿ ಮೆರವಣಿಗೆ ಮೂಲಕ ಕರೆತರಲಾಯಿತು ನೆಹರೂ ನಗರದ ದಾನಮ್ಮದೇವಿ ದೇವಸ್ಥಾನದಿಂದ ಆರಂಭಗೊಂಡು ಪ್ರಮುಖ ಬೀದಿಗಳಲ್ಲಿ ಸಂಭ್ರಮದಿಂದ ಮೆರವಣಿಗೆ ನಡೆಯಿತು. ಮುದ್ದಿನೇಶ್ವರ ವಿರಕ್ತಮಠದ ಚನ್ನಮಲ್ಲಿಕಾರ್ಜುನ ಸ್ವಾಮೀಜಿ ಸಾನಿಧ್ಯ ಹಾಗೂ ಕುಮಾರೇಶ್ವರ ಧಾರ್ಮಿಕ ಪಾಠಶಾಲೆಯ ಮುಖ್ಯಸ್ಥ ರಾಚಯ್ಯ ಓದಿಸೋ ಮಠ ಅವರ ಉಪಸ್ಥಿತಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಜಿ.ಕೋಟಿ ಕನ್ನಡ ಬಾವುಟ ಹಾರಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಕನ್ನಡ ನಾಡು ನುಡಿಯ ಬಗ್ಗೆ ನಮ್ಮ ಸಹಕಾರವಿದೆ. ಹೊಸ ಹೊಸ ಸಾಹಿತಿಗಳು ಮೂಡಿ ಬರಲಿ. ಸಾಹಿತ್ಯ ಸಮ್ಮೇಳನಗಳು ಶಿಕ್ಷಣ ಇಲಾಖೆ ಮಾತ್ರ ಸೀಮಿತವಾಗದೆ ಎಲ್ಲರೂ ಅದರಲ್ಲಿ ಸಕ್ರೀಯವಾಗಿ ಭಾಗವಹಿಸುವಂತಾಗಬೇಕು. ಸರ್ಕಾರ ನಾಡು ನುಡಿಯ ರಕ್ಷಣೆಗೆ ಕಂಕಣ ಬದ್ರವಾಗಿದೆ ಎಂದದರು. ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷ ಎಸ್.ಆರ್.ಪಾಟೀಲ ಮಾತನಾಡಿ ಬ್ಯಾಡಗಿ ಮೆಣಸಿನಕಾಯಿ ವ್ಯಾಪಾರಕ್ಕೆ ಮಾತ್ರ ಸೀಮಿತವಾಗಿರದೆ ಕಲೆ, ಕ್ರೀಡೆ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿಯೂ ಮಂಚೂಣಿಯಲ್ಲಿದೆ

-ಬಸವರಾಜ ಶಿವಣ್ಣ ಶಾಸಕ

ಚನ್ನಮ್ಮ ನವೋದಯ ಇನ್ನಿತರ ವಸತಿ ಶಾಲೆಗಳಲ್ಲಿ ಪ್ರವೇಶ ಮೀಸಲಿಡಬೇಕು. ಇಲ್ಲದಿದ್ದರೆ ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳು ಮುಂದಿನ ಹತ್ತು ವರ್ಷದಲ್ಲಿ ಹುಡು ಕಬೇಕಾದ ಪರಿಸ್ಥಿತಿ ನಿರ್ಮಾಣವಾಗಬಹುದು ಎಂದು ಆತಂಕ ವ್ಯಕ್ತಪಡಿಸಿದರು.

ಮಾಜಿ ಶಾಸಕ ಸುರೇಶಗೌಡ್ರ ಪಾಟೀಲ, ವಿರೂಪಾಕ್ಷಪ್ಪ ಬಳ್ಳಾರಿ ಮಾತನಾಡಿದರು. ಈ ವೇಳೆ ಪುರಸಭೆ ಅಧ್ಯಕ್ಷ ಬಾಲಚಂದ್ರ ಪಾಟೀಲ, ಉಪಾಧ್ಯಕ್ಷ ಸುಭಾಸ್ ಮಾಳಗಿ, ಸ್ಥಾಯಿ ಸಮಿತಿ ಅಧ್ಯಕ್ಷ ಚಂದ್ರಣ್ಣ ಶೆಟ್ಟರ, ನಿಕಟಪೂರ್ವ ಸಮ್ಮೇಳನದ ಅಧ್ಯಕ್ಷ ಪ್ರಕಾಶ ಮನ್ನಂಗಿ, ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಲಿಂಗಯ್ಯ ಹಿರೇಮಠ, ತಾಲ್ಲೂಕು ಘಟಕದ ಅಧ್ಯಕ್ಷ ಬಿ.ಎಂ. ಜಗಾಪುರ, ಬಿಇಒ ಎಸ್.ಜಿ.ಕೋಟಿ, ಮಾಲತೇಶ ಅರಳಿಮಟ್ಟಿ ಪಿ.ಟಿ.ಲಕ್ಕಣ್ಣನವರ, ವರ್ತಕ ಬಸವರಾಜ ಸುಂಕಾಪುರ, ರೈತ ಮುಖಂಡ ಮಲ್ಲಿಕಾರ್ಜುನ ಬಳ್ಳಾರಿ, ತಹಶೀಲ್ದಾರ ಫಿರೋಜಷಾ ಸೋಮನಕಟ್ಟಿ, ನೌಕರರ ಸಂಘದ ಅಧ್ಯಕ್ಷ ತಾಲ್ಲೂಕು ಘಟಕದ ಅಧ್ಯಕ್ಷ ಎಂ.ಎನ್. ಕಂಬಳಿ, ಮುಖಂಡ ದಾನಪ್ಪ ಚೂರಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸಂವಿಧಾನ ದೇಶವನ್ನು ಮುನ್ನಡೆಸುವ ಒಂದು ಶಕ್ತಿ

• ಉದಯವಾಹಿನಿ, ಲಕ್ಷ್ಮೇಶ್ವರ

ಸಂವಿಧಾನ ಕೇವಲ ಒಂದು ಪುಸ್ತಕವಲ್ಲ, ಅದು ಭಾರತವನ್ನು ಮುನ್ನಡೆಸುವ ಮಹಾನ್ ಶಕ್ತಿ. ಅಂತಹ ಸಂವಿಧಾನದ ಕುರಿತು ಅರಿಯಬೇಕಾದ್ದು ಎಲ್ಲರ ಜವಾಬ್ದಾರಿ. ಈ ಹಿನ್ನೆಲೆಯಲ್ಲಿ ರಸಪ್ರಶ್ನೆ ಕಾರ್ಯಕ್ರಮ ಸಂಘಟಿಸಲಾಗಿದೆ ಎಂದು ಲಕ್ಷೇಶ್ವರ ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಧರ್ಮರ ಕೃಷ್ಣಪ್ಪ ಹೇಳಿದರು.

76 ನೇ ಗಣರಾಜ್ಯೋತ್ಸವದ ನಿಮಿತ್ತ ತಾಲ್ಲೂಕು ಆಡಳಿತ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಗಳ ಸಹಯೋಗದಲ್ಲಿ ಲಕ್ಷೇಶ್ವರ ಉತ್ತರ ಸಿಆರ್‌ಸಿ ಕೇಂದ್ರದಲ್ಲಿ ಭಾರತದ ಸಂವಿಧಾನ ವಿಷಯದ ಕುರಿತು ಹಮ್ಮಿಕೊಂಡ ರಸಪ್ರಶ್ನೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಮುಖ್ಯ ಶಿಕ್ಷಕ ಡಿ.ಎನ್. ದೊಡ್ಡಮನಿ ಮಾತನಾಡಿ, 'ರಸಪ್ರಶ್ನೆ ಸ್ಪರ್ಧಾ ಕಾರ್ಯಕ್ರಮ ವಿದ್ಯಾರ್ಥಿಗಳ ಬುದ್ಧಿವಂತಿಕೆಗೆ

ಉದಯವಾಹಿನಿ ಚಿತ್ರ

ಸಾಣೆ ಹಿಡಿದಂತೆ ಎಂದರು. ಮಾಧ್ಯಮಿಕ ನೌಕರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಎಲ್. ಎಸ್. ಅರಳಿಹಳ್ಳಿ, ಪ್ರೌಢಶಾಲಾ ಸಹಶಿಕ್ಷಕರ ಸಂಘದ ಸಂಘಟನಾ ಕಾರ್ಯದರ್ಶಿ ಎಸ್.ಡಿ. ಲಮಾಣಿ ಮಾತನಾಡಿದರು.

ಪ್ರೌಢಶಾಲಾ ವಿಭಾಗದ ಬಿಆರ್‌ಪಿ ಈಶ್ವರ ಮೆಡೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾಡಳ್ಳಿಯ ಸರ್ಕಾರಿ ಪ್ರೌಢಶಾಲೆ ಶಿಕ್ಷಕ ಅಕ್ಷರಾಬ್ ನದಾಫ ರಸಪ್ರಶ್ನೆ ಸ್ಪರ್ಧೆ ನಿರ್ವಹಣೆ ಮಾಡಿದರು. ಸಿಆರಿ ಉಮೇಶ ನೇಕಾರ ಸ್ವಾಗತಿಸಿದರು.

ಫಲಿತಾಂಶ: ಲಕ್ಷ್ಮೇಶ್ವರ ಎಸ್ಟಿಪಿಎಂಬಿ ಇಂಗ್ಲಿಷ್ ಮಾಧ್ಯಮ ಶಾಲೆಯ ಅರ್ಪಿತಾ ಚವಣ್ಯವರ ಭುವನೇಶ್ವರಿ ಹೆಬ್ಬಾಳ ಪ್ರಥಮ, ಯುನಿಕ್ ಶಾಲೆಯ ಚಂದನಾ ಕಳಸಾಪುರ, ವಿನುತಾ ಫೋರ್ಪಡೆ ದ್ವಿತೀಯ, ಆಕ್ಸ್‌ಫರ್ಡ್ ಶಾಲೆಯ ಸಿಂಚನಾ ಕಟ್ಟೆಣ್ಣವರ, ಆಕಾಂಕ್ಷಾ ಪಾಟೀಲ ತೃತೀಯ ಸ್ಥಾನ ಪಡೆದರು.

ಸತೀಶ ಬೋಮಲೆ ವಂದಿಸಿದರು. ಎನ್.ಎ. ಮುಲ್ಲಾ, ಶಿಕ್ಷಕರಾದ ಎಸ್.ಬಿ. ಹೂವಿನ, ವಿರೇಶ ಕಮ್ಮಾರ, ಸಿ.ಎಫ್. ಪಾಟೀಲ, ಎನ್.ಎಸ್. ಬೀರನೂರ ಇದ್ದರು. ಆರ್.ಬಿ. ಅಡರಕಟ್ಟಿ ನಿರೂಪಿಸಿದರು. ಲಕ್ಷ್ಮೇಶ್ವರ ಪಟ್ಟಣ ವ್ಯಾಪ್ತಿಯ ಇಬ್ಬರು ವಿಧ್ಯಾರ್ಥಿಗಳ 14 ಪ್ರೌಢಶಾಲೆಗಳ ತಂಡಗಳು ಭಾಗವಹಿಸಿದವು.

ಗುನ್ನಾಳ ಪಾಲಿಟೆಕ್ನಿಕ್ ಕಾಲೇಜು; ಪ್ರಯೋಗಾಲಯಕ್ಕೆ ಚಾಲನೆ

• ಉದಯವಾಹಿನಿ, ಯಲಬುರ್ಗಾ

ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಸತಿ ನಿಲಯ ನಿರ್ಮಿಸಿಕೊಡಲಾಗಿದೆ. ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಂಡು ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಬೇಕು ಎಂದು ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.

ತಾಲ್ಲೂಕಿನ ಗುನ್ನಾಳ ಗ್ರಾಮದಲ್ಲಿ ಪಾಲಿಟೆಕ್ನಿಕ್ ಪ್ರಯೋಗಾಲಯಕ್ಕೆ ಮತ್ತು ಬಾಲಕಿಯರ ವಸತಿ ನಿಲಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಮದಲ್ಲಿ ಸುಸಜ್ಜಿತವಾಗಿ ನಿರ್ಮಾಣಗೊಂಡ ಪ್ರಯೋಗಾಲಯವನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆ ಅಡಿ ಯಲ್ಲಿ 2ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ.

ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತ್ವರಿತವಾಗಿ ನಿರ್ಮಿಸಿ ಬಳಕೆಗೆ ಅನುಕೂಲ ಮಾಡಿಕೊಡಲಾಗುತ್ತಿದೆ. ಸರಿಯಾದ ರೀತಿಯಲ್ಲಿ ಸದ್ಬಳಕೆಯಾಗಬೇಕು ಎಂದರು.

ಕಾಲೇಜಿನ ಕಂಪೌಂಡ್ ನಿರ್ಮಾಣಕ್ಕೆ ನರೇಗಾ ಯೋಜನೆ ಅಡಿಯಲ್ಲಿ ನಿರ್ಮಿಸಿಕೊಡಲು ಜಿಲ್ಲಾಪಂಚಾಯಿತಿ ಅಧಿ

ಉದಯವಾಹಿನಿ ಚಿತ್ರ

ಕಾರಿಗಳಿಗೆ ಸೂಚಿಸಲಾಗುವುದು. ಹಾಗೆಯೇ ಇನ್ನಿತರ ಅಗತ್ಯ ಸೌಲಭ್ಯಕ್ಕೆ ಕ್ರಮಕೈಗೊಳ್ಳಲಾಗುತ್ತದೆ. ಮುಖ್ಯವಾಗಿ ಬಾಲಕಿಯರ ವಸತಿ ನಿಲಯ ಸ್ಥಾಪನೆಗೆ ಪ್ರಯತ್ನಿಸುವುದಾಗಿ ಹೇಳಿದರು.

ಪಾಲಿಟೆಕ್ನಿಕ್ ಕಾಲೇಜು ಪ್ರಾಂಶುಪಾಲ ರೇವಣಸಿದ್ದಯ್ಯ, ವಿಭಾಗ ತಾಂತ್ರಿಕ ಅಧಿಕಾರಿ ಚಂದ್ರಶೇಖರ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ನಾಗಮಣಿ, ಹಿಂದುಳಿದ ವರ್ಗಗಳು ಕಲ್ಯಾಣ ಇಲಾಖೆ ಅಧಿಕಾರಿ ಶಿವಶಂಕರ ಕರಡಕಲ್ಲ, ಗಣ್ಯರಾದ ರಾಘವೇಂದ್ರಚಾರ್ಯ ಜೋಷಿ, ಡಾ. ಶಿವನಗೌಡ ದಾನರಡ್ಡಿ, ನಾಗರಾಜ ನವಲಹಳ್ಳಿ, ರುದ್ರಪ್ಪ ಮರಕಟ್ಟಿ, ಬಸವರಾಜ ಕಳ್ಳಿ ಸೇರಿ ಇದ್ದರು.

ಹೆದ್ದಾರಿಯಲ್ಲಿ ಯುಟರ್ನ್ ಬೇಡಿಕೆ ಪರಿಶೀಲನೆ

• ಉದಯವಾಹಿನಿ, ಉಪ್ಪಿನಂಗಡಿ

ರಾಷ್ಟ್ರೀಯ ಹೆದ್ದಾರಿ 75ರ ಶಿರಾಡಿ ಪೇಟೆಯಿಂದ ಉದನೆ ಕಡೆಗೆ 1ಕಿ.ಮೀ. ದೂರದ ಇಡತ್ತಡ್ಕ ಎಂಬಲ್ಲಿ ಯು- ಟರ್ನ್ ಬೇಡಿಕೆ ಸಂಬಂಧ ಪುತ್ತೂರು ಉಪ ವಿಭಾಗಾಧಿಕಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.ಇಡತ್ತಡ್ಕ ಎಂಬಲ್ಲಿ ಶಿರಾಡಿ ಗ್ರಾಮ ಪಂಚಾಯಿತಿಗೆ ರಸ್ತೆ ಸಂಪರ್ಕವಿದ್ದು, ಸುಮಾರು 25 ಕುಟುಂಬಸ್ಥರು ಬಳಕೆ ಮಾಡುತ್ತಿದ್ದಾರೆ.

ಅಲ್ಲಿ ಯು-ಟರ್ನ್‌ಗೆ ಅವಕಾಶ ನೀಡಿದೆ ಇದ್ದರೆ ಈ ಪ್ರದೇಶದ ನಿವಾಸಿಗಳು 6 ಕಿ.ಮೀ. ದೂರದ ಉದನೆ ಪೇಟೆಯಲ್ಲಿ ಯು-ಟರ್ನ್ ತೆಗೆದುಕೊಳ್ಳಬೇಕಾಗುತ್ತದೆ. ಈ ಕಾರಣದಿಂದ ಇಡತ್ತಡ್ಕದಲ್ಲಿ ಯು-ಟರ್ನ್‌ಗೆ ಅವಕಾಶ ನೀಡಬೇಕು

ಉದಯವಾಹಿನಿ ಚಿತ್ರ

ಎಂದು ಶಿರಾಡಿ ಗ್ರಾಮ ಪಂಚಾಯಿತಿಯಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರಿಗೆ ಮನವಿ ಮಾಡಲಾಗಿತ್ತು. ಈ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿ, ಪುತ್ತೂರು ಉಪ ವಿಭಾಗಧಿಕಾರಿಗೆ ಸೂಚನೆ ನೀಡಿದ್ದರು.

ಪುತ್ತೂರು ಡಿವೈಎಸ್‌ಪಿ ಅರುಣ್ ನಾಗೇಗೌಡ, ಕಡಬ ತಹಶೀಲ್ದಾರ್ ಪ್ರಭಾಕರ ಖಜೂರ, ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಚೆನ್ನಪ್ಪ ಗೌಡ ಇದ್ದರು.

ಗೋಪಾಲಕೃಷ್ಣ ನಾಯರಿ ರಂಗ ಪ್ರಶಸ್ತಿ-25 ಪ್ರದಾನ

• ಉದಯವಾಹಿನಿ, ಬ್ರಹ್ಮಾವರ

ಕಲೆ ಮತ್ತು ಸಾಹಿತ್ಯ ಲೋಕದ ಬೆಳವಣಿಗೆಗೆ ಹಿರಿಯರ ದೇಣಿಗೆ ಮರೆಯಲಾಗದು. ಅವರ ಶ್ರಮ ದಿಂದಾಗಿ ಇಂದು ಅದನ್ನು ಆಸ್ವಾದಿಸಲು ಸಾಧ್ಯವಾಗಿದೆ' ಎಂದು ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ ಹೇಳಿದರು.

ಸಾಲಿಗ್ರಾಮ ಗುಂಡ್ಮಿಯಲ್ಲಿರುವ ಸದಾನಂದ ರಂಗಮಂಟಪದಲ್ಲಿ ಬೆಂಗಳೂರಿನ ಸಮಸ್ತರು ರಂಗ ಅಧ್ಯ

ಯನ ಕೇಂದ್ರದ ವತಿಯಿಂದ ಹಂಗಾರಕಟ್ಟೆ ಐರೋಡಿ ಯಕ್ಷಗಾನ ಕಲಾ ಕೇಂದ್ರದ ಸಹಕಾರದೊಂದಿಗೆ ನಡೆದ ದೇಶಿ ಪದ್ಧತಿಯ ರಂಗಭೂಮಿ ನಿರ್ದೇ ಶಕ ದಿ. ಗೋಪಾಲಕೃಷ್ಣ ನಾಯರಿ ಅವರ 2ನೇ ವರ್ಷದ ಸಂಸ್ಮರಣಾ ಕಾರ್ಯಕ್ರಮ ಮತ್ತು ಗೋಪಾಲಕೃಷ್ಣ ನಾಯರಿ ರಂಗ ಪ್ರಶಸ್ತಿ-25 ಪ್ರದಾನ ಸಮಾರಂಭದಲ್ಲಿ ಅವರು

ಉದಯವಾಹಿನಿ ಚಿತ್ರ

ಮಾತನಾಡಿದರು. ಗೋಪಾಲಕೃಷ್ಣ ನಾಯರಿ ಅವರು ಶ್ರೇಷ್ಠ ರಂಗ ಭೂಮಿ ಕಲಾವಿದ. ನಿರ್ದೇಶಕ ಮಾತ್ರವಲ್ಲ, ಕರಾವಳಿ ವಲಯದ ಸಾಂಸ್ಕೃತಿಕ ರಾಯಭಾರಿಯಾಗಿದ್ದರು. ಎನ್.ಎಸ್.ಡಿ ನಿರ್ದೇಶಕರಾಗಿ ಅವರ ಕಾರ್ಯ ಮರೆಯಲಾರದ್ದು ಎಂದರು.

ಗುಂಡ್ಮಿ ವೈಕುಂಠ ಹೇರ್ಳೆ ಸಂಸ್ಮರಣಾ ಮಾತುಗಳನ್ನಾಡಿದರು. ಹೊನ್ನಾವರದ ಕೆಕ್ಕಾರಿನ ರಂಗಭೂಮಿ ನಿರ್ದೇಶಕ, ಕಲಾವಿದ ಗೋಪಾಲಕೃಷ್ಣ ದೇವರು ಭಟ್ಟ ಅವರಿಗೆ ರಂಗ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೇಲು ಮಣ್ಣಿಗೆಯ ಸಂತೋಷ ಯಾಜಿ ಅಭಿ ನಂದನಾ ನುಡಿಗಳ ನ್ಯಾಡಿದರು. ಮಂಗಳೂರಿನ ವಿಶೇಷ ಸರ್ಕಾರಿ ವಕೀಲರಾದ ಬದರಿನಾಥ ನಾಯರಿ, ರಾಧಾಕೃಷ್ಣ ನಾಯರಿ, ಶಿವಕುಮಾರ್ ನಾಯರಿ ಇದ್ದರು, ಗಣಪತಿ ನಾಯರಿ ಸ್ವಾಗತಿಸಿದರು. ಕನ್ನಡ ಸಾಹಿತ್ಯ ಪರಿಷತ್ ಬ್ರಹ್ಮಾವರ ಘಟಕದ ಅಧ್ಯಕ್ಷ ರಾಮಚಂದ್ರ ಐತಾಳ ಪ್ರಶಸ್ತಿ ಪತ್ರ ವಾಚಿಸಿದರು.

ಕಲಾಕೇಂದ್ರದ ಕಾರ್ಯದರ್ಶಿ ಐರೋಡಿ ರಾಜ ಶೇಖರ ಹೆಬ್ಬಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಘವೇಂದ್ರ ನಾಯರಿ ನಿರೂಪಿಸಿದರು. ಮಂಜುನಾಥ ನಾಯರಿ ವಂದಿಸಿದರು.

ಉಚಿತ ಆರೋಗ್ಯ ಶಿಬಿರ ಸದುಪಯೋಗ ಪಡೆದುಕೊಳ್ಳಿ

• ಉದಯವಾಹಿನಿ, ಕಲಬುರಗಿ

ರಾಷ್ಟ್ರೀಯ ಆರೋಗ್ಯ ಅಭಿಯಾನ ಜಿಲ್ಲಾಡಳಿತ ಜಿಲ್ಲಾಪಂಚಾಯತ ಕಲಬುರಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಲಬುರಗಿ ಹಾಗೂ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿಯಲ್ಲಿ ವೈದ್ಯೇಹಿ ಆಸ್ಪತ್ರೆ ಬೆಂಗಳೂರು ಇವರ ಸಂಯೂಕ್ತಾಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಜಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನಡೆಯಿತು.

ಶಿಬಿರವನ್ನು ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ ಯವರು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿಯಲ್ಲಿ ಸುಮಾರು 300 ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣಾ

ಉದಯವಾಹಿನಿ ಚಿತ್ರ

ಶಿಬಿರವನ್ನು ಹಮ್ಮಿಕೊಂಡಿದ್ದು ಶನಿವಾರ ನಡೆದ ಶಿಬಿರದಲ್ಲಿ 109 ಮಕ್ಕಳು ಸ್ಕ್ರೀನಿಂಗ್ ನಲ್ಲಿ ಶಸ್ತ್ರ ಚಿಕಿತ್ಸೆಗೆ 54 ಮಕ್ಕಳು ಆಯ್ಕೆ ಆಗಿದ್ದಾರೆ.

ನಂತರ ಮಾತನಾಡಿದ ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಶರಣಬಸಪ್ಪ ಕ್ಯಾತ್ನಾಳ ಇಂತಹ ಒಳ್ಳೆಯ ಕಾರ್ಯಕ್ರಮವನ್ನು ನಮ್ಮ ವೈದ್ಯಕೀಯ ತಂಡ ಮಾಡುತ್ತಿರುವದು ಬಹಳಷ್ಟು ಸಂತಸದ ವಿಷಯ, ಪಾಲಕರು ತಮ್ಮ ಮಕ್ಕಳಿಗೆ ಯಾವುದೇ ತರಹದ ಸಮಸ್ಯೆಗಳಿದ್ದರೆ ಕೂಡಲೇ ನಮ್ಮ ಈ ಕಾರ್ಯಕ್ರಮಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

**ಜಿಲ್ಲೆಯ ಸುಮಾರು 4.8 ಲಕ್ಷ ಅಂಗನವಾಡಿ, ಶಾಲಾ ಮಕ್ಕಳಿಗೆ ತಪಾಸಣಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಮಕ್ಕಳಿಗೆ ಯಾವುದೇ ಅರೋಗ್ಯ ಸಮಸ್ಯೆ ಇದ್ದರು ಕೂಡ ಅದನ್ನು ಪತ್ತೆ ಹಚ್ಚಿ ನಿರ್ಮೂಲನೆ ಮಾಡುವಂತ ಕಾರ್ಯವನ್ನು ನಮ್ಮ ಆರ್ ಸಿ ಎಚ್ ಓ ಹಾಗೂ ಆರ್ ಬಿ ಎಸ್ ಕೆ ತಂಡ ಮಾಡುತ್ತೆ ಜಿಲ್ಲೆಯ ಎಲ್ಲಾ ಸಾರ್

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	05:30 ರಿಂದ 07:00
ಗುಳಿಕ ಕಾಲ	ಮಧ್ಯಾಹ್ನ	04:00 ರಿಂದ 05:30
ಯಮಗಂಡ ಕಾಲ	ಮಧ್ಯಾಹ್ನ	04:00 ರಿಂದ 05:30

ಮೇಷ ನಿಮ್ಮ ವಿಚ್ಛಿದ್ರಕಾರಕ ಭಾವಗಳು ಮತ್ತು ಉದ್ವೇಗಗಳನ್ನು ಹತೋಟಿಯಲ್ಲಿರಿಸಿಕೊಳ್ಳಿ. ನಿಮ್ಮ ಸಾಂಪ್ರದಾಯಿಕ ಚಿಂತನೆ / ಹಳೆಯ ವಿಚಾರಗಳು ನಿಮ್ಮ ಪ್ರಗತಿಯನ್ನು ಕುಂಠಿತಗೊಳಿಸಬಹುದು ? ಅಭಿವೃದ್ಧಿಯನ್ನು ನಿಲ್ಲಿಸಬಹುದು ಮತ್ತು ಮುಂದೆ ಹೋಗಲು ಅಡೆತಡೆಗಳನ್ನು ರಚಿಸಬಹುದು

ವೃಷಭ ನೀವು ಮಾನಸಿಕವಾಗಿ ಮತ್ತು ದೈಹಿಕವಾಗಿ ಸ್ವಲ್ಪ ಸುಸ್ತನ್ನು ಅನುಭವಿಸಬಹುದು ? ನಿಮ್ಮ ಚೈತನ್ಯವನ್ನು ಹೆಚ್ಚಿಸಲು ಸ್ವಲ್ಪ ವಿಶ್ರಾಂತಿ ಮತ್ತು ಪೌಷ್ಟಿಕ ಆಹಾರ ಬಹಳ ಸಹಾಯ ಮಾಡುತ್ತದೆ. ಈ ರಾಶಿಚಕ್ರದ ವಿವಾಹಿತ ಜನರಿಗೆ ಇಂದು ಅತ್ತೆಮನೆಯ ಕಡೆಯಿಂದ ಹಣದ ಪ್ರಯೋಜನವಾಗುವ ಸಾಧ್ಯತೆ ಇದೆ.

ಮಿಥುನ ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ಹೊಸ ಆರ್ಥಿಕ ಒಪ್ಪಂದ ಕುದುರಿಸಲಾಗುತ್ತದೆ ಮತ್ತು ಹೊಸ ಹಣ ಬರುತ್ತದೆ. ಕೋಪ ಅಲ್ಪಾವಧಿ ಹಾಗೂ ಅದು ನಿಮ್ಮನ್ನು ತೊಂದರೆಯಲ್ಲಿ ಸಿಲುಕಿಸಬಹುದೆಂದು ಅರ್ಥ ಮಾಡಿಕೊಳ್ಳುವ ಸಮಯ.

ಕರ್ಕಾಟಕ ನಿಮ್ಮ ಆರೋಗ್ಯ ಮತ್ತು ನೋಟವನ್ನು ಸುಧಾರಿಸಲು ಕೆಲಸಗಳನ್ನು ಮಾಡಲು ಸಾಕಷ್ಟು ಸಮಯ ಹೊಂದಿರುತ್ತೀರಿ. ಮನೆಯ ಅಗತ್ಯಗಳನ್ನು ನೋಡುತ್ತಾ, ಇಂದು ನೀವು ನಿಮ್ಮ ಜೀವನ ಸಂಗಾತಿಯೊಂದಿಗೆ ಯಾವುದೇ ಅಮೂಲ್ಯ ವಸ್ತುವನ್ನು ಖರೀದಿಸಬಹುದು.

ಸಿಂಹ ದೈಹಿಕ ಲಾಭಕ್ಕಾಗಿ ವಿಶೇಷವಾಗಿ ಮಾನಸಿಕ ದೃಢತೆಗಾಗಿ ಧ್ಯಾನ ಮತ್ತು ಯೋಗ ಪ್ರಾರಂಭಿಸಿ. ಇಂದು ನಿಮ್ಮ ಯಾವುದೇ ಚಲಿಸಬಲ್ಲ ಅಸ್ತಿಯನ್ನು ಕದಿಯಬಹುದು ಆದ್ದರಿಂದ ಸಾಧ್ಯವಾದಷ್ಟು ಅದರ ಬಗ್ಗೆ ಗಮನ ಹರಿಸಿ. ನಿಮ್ಮ ಜೊತಗಿರುವವರ ಜೊತೆ ವಾದವಿವಾದಕ್ಕೆ ತೊಡಗಬೇಡಿ.

ಕನ್ಯಾ ನೀವು ಕಳೆದುಹೋದದ್ದರ ಬಗ್ಗೆ ಯೋಚಿಸುತ್ತಿದ್ದರೆ ನಿಮ್ಮ ಹತಾಶೆ ನಿಮ್ಮ ಆರೋಗ್ಯವನ್ನು ನಾಶಮಾಡಬಹುದು – ಸಾಧ್ಯವಾದಷ್ಟೂ ವಿಶ್ರಾಂತಿ ತಗೆದುಕೊಳ್ಳಲು ಪ್ರಯತ್ನಿಸಿ. ವ್ಯಾಪಾರದಲ್ಲಿ ಉತ್ತಮ ಲಾಭವನ್ನು ಗಳಿಸುವ ಸಾಧ್ಯತೆ ಇದೆ. ಇಂದಿನ ದಿನ ನೀವು ನಿಮ್ಮ ವ್ಯಾಪಾರಕ್ಕೆ ಹೊಸ ಎತ್ತರವನ್ನು ನೀಡಬಹುದು.

ತುಲಾ ಇಂದು ನೀವು ಆರಾಮವಾಗಿರಬೇಕು ಹಾಗೂ ನಿಕಟ ಸ್ನೇಹಿತರು ಮತ್ತು ಕುಟುಂಬದ ಎಲ್ಲಾ ಸದಸ್ಯರನ್ನು ಸಂತೋಷವಾಗಿರಿಸಲು ಪ್ರಯತ್ನಿಸಬೇಕು. ಆರ್ಥಿಕವಾಗಿ ನೀವು ಸಾಕಷ್ಟು ಬಲವಾಗಿ ಕಾಣುವಿರಿ, ಗ್ರಹ, ನಕ್ಷತ್ರಗಳ ಚಲನೆಯಿಂದ ನಿಮಗಾಗಿ ಹಣವನ್ನು ಸಂಪಾದಿಸುವ ಅನೇಕ ಅವಕಾಶಗಳು ಉಂಟಾಗುತ್ತವೆ.

ವೃಶ್ಚಿಕ ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ಹೆಚ್ಚು ಖರೀದಿಸಲು ಧಾವಿಸುವ ಮೊದಲು ನೀವು ಈಗಾಗಲೇ ಹೊಂದಿರುವುದನ್ನು ಬಳಸಿ. ನೀವು ಪ್ರೀತಿಸುವವರಿಂದ ಉಡುಗೊರೆಗಳನ್ನು ಪಡೆಯಲು ಹಾಗೂ ನೀಡಲು ಪವಿತ್ರವಾದ ದಿನ.

ಧನಸ್ಸು ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ಮನೆಯಿಂದ ಹೊರಗೆ ಹಿರಿಯರ ಆಶೀರ್ವಾದವನ್ನು ತೆಗೆದು ಕೊಂಡು ಹೋಗಿ, ಇದರಿಂದ ನೀವು ಹಣದ ಲಾಭವನ್ನು ಪಡೆಯಬಹುದು. ಮನೆಯ ವಿಷಯಗಳು ಮತ್ತು ಬಾಕಿಯಿರುವ ಗೃಹಕೃತ್ಯಗಳನ್ನು ಪೂರೈಸಲು ಒಂದು ಅನುಕೂಲಕರ ದಿನ.

ಮಕರ ನಿಮ್ಮ ತೂಕದ ಮೇಲೆ ಒಂದು ಕಣ್ಣಿಟ್ಟಿರಿ ಮತ್ತು ಅತಿಯಾಗಿ ತಿನ್ನಬೇಡಿ. ಇಂದು ಷೇರು ಮಾರುಕಟ್ಟೆಯಲ್ಲಿ ಹಣವನ್ನು ಹೂಡಿಕೆ ಮಾಡುವವರು ತಮ್ಮ ಹಣವನ್ನು ಕಳೆದುಕೊಳ್ಳಬಹುದು. ಸಮಯಕ್ಕೆ ನೀವು ಜಾಗರೂಕರಾಗಿದ್ದರೆ ಅದು ನಿಮಗೆ ಉತ್ತಮವಾಗಿರುತ್ತದೆ.

ಕುಂಭ ಆರೋಗ್ಯ ದೃಷ್ಟಿಯಿಂದ ಉತ್ತಮವಾದ ದಿನ. ನಿಮ್ಮ ಹರ್ಷಚಿತ್ತದ ಮನಸ್ಸು ರಾಜ್ಯದ ನೀವು ಬಯಸಿದ ಟಾನಿಕ್ ನೀಡುತ್ತದೆ ಮತ್ತು ನಿಮಗೆ ಆತ್ಮವಿಶ್ವಾಸ ತರುತ್ತದೆ. ನೀವು ನಿಮ್ಮ ಕಳೆದ ಸಮಯದಲ್ಲಿ ಬಹಳಷ್ಟು ಹಣವನ್ನು ಖರ್ಚುಮಾಡಿದ್ದಿರಿ ಇದರ ತೊಂದರೆ ನೀವು ಇಂದು ಅನುಭವಿಸಬೇಕಾಗಬಹುದು.

ಮೀನ ಹಳೆಯ ಸಂಪರ್ಕಗಳು ಮತ್ತು ಸಂಬಂಧಗಳ ಪುನಶ್ಚೇತನಕ್ಕೆ ಒಳ್ಳೆಯ ದಿನ. ನಿಮ್ಮ ಪ್ರೀತಿಪಾತ್ರರ ಭಾವನೆಗಳನ್ನು ಇಂದು ಅರ್ಥಮಾಡಿಕೊಳ್ಳಿ. ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳಿಗೆ ಒಳ್ಳೆಯ ದಿನ. ನೀವು ಇಂದು ನಿಮ್ಮ ಸಂಗಾತಿಯ ಜತೆ ನಿಮ್ಮ ಜೀವನದ ಅತ್ಯುತ್ತಮ ದಿನವನ್ನು ಕಳೆಯುತ್ತೀರಿ.

ಭತ್ತ ಕಟಾವು ತಾಸಿಗೆ 3ಸಾವಿರ ಅಂದ್ರೆ ಅದಕ್ಕೆ ಲೆಕ್ಕ ಇದ್ಯಾ ಇಲ್ವಾ ?

ಜಿಲ್ಲಾಧಿಕಾರಿಗಳೇ ಈ ಕೂಡಲೇ ಭತ್ತ ಕಟಾವು ಗೆ ಸೂಕ್ತ ಬೆಲೆ ನಿಗದಿ ಮಾಡಿ ಆದೇಶ ಹೊರಡಿಸಿ: ಕುಮಾರ್ ಬನ್ನೂರ್ ರೈತ

• ಉದಯವಾಹಿನಿ ವರದಿ

ಕಾರಟಗಿ: ತುಂಗಭದ್ರ ಎಡ ದಂಡೆ ಭಾಗದ ರೈತರ ಗೋಳು ಕೇಳುವರಾರು? ಎನ್ನುವ ಪರಿಸ್ಥಿತಿ ಉಂಟಾಗಿದೆ, ಕಳೆದ ಒಂದು ದಶಕದಿಂದ ನಿರಂತರ ರೈತರು ಬೆಳೆ ನಷ್ಟವನ್ನು ಅನುಭವಿಸುತ್ತಿದ್ದಾರೆ. ರಾಸಾಯನಿಕ ಗೊಬ್ಬರಗಳ ಬೆಲೆ ಏರಿಕೆ ಮತ್ತು ರೈತರ ಬೆಳೆಯಲ್ಲಿ ಇಳುವರಿ ಕಡಿಮೆಯಾಗಿ ಭತ್ತದ ಬೆಲೆಯು ಕಡಿಮೆಯಾಗಿ ಖರ್ಚು ಮಾಡಿದ ಹಣ ಕೂಡ ಕೈಗೆ ಬಾರದ ಪರಿಸ್ಥಿತಿ, ಒಂದೆಡೆಯಾದರೆ ಅಕಾಲಿಕ ಮಳೆಯಿಂದ ನೊಂದು ಬೆಂದು ಕಂಗೆಟ್ಟ ರೈತರಿಗೆ ಸರ್ಕಾರದಿಂದ ಪರಿಹಾರವೂ ಇನ್ನು ತಲುಪಿಲ್ಲ. ಹೀಗಿರುವಾಗ ರೈತರಿಗೆ ಗಾಯದ ಮೇಲೆ ಬರೆ ಎಳೆದಂತ ಸನ್ನಿವೇಶ ಸೃಷ್ಟಿಯಾಗುತ್ತಿದೆ.

ಭತ್ತದ ಬೆಳೆ ಕಟಾವು ಯಂತ್ರಗಳು ರೈತರಿಂದ ಹಣ ವಸೂಲಿಗಿಳಿದಿವೆ ಈ ಹಿಂದೆ ಭತ್ತದ ಕಟಾವು ಗಂಟೆಗೆ 2 ಸಾವಿರ ನಿಗದಿಪಡಿಸಲಾಗಿತ್ತು ನಂತರ ಬೆಳೆಯಿಂದ ಬೆಳೆಗೆ ಯಂತ್ರಗಳ ಕಟಾವು ಬೆಲೆ ಏರಿಕೆಯಾಗುತ್ತಲೆ ಇದೆ ಆದರೆ ಇದನ್ನು ಯಾರು ಪ್ರಶ್ನೆ ಮಾಡುವ ಗೋಜಿಗೆ ಹೋಗುತ್ತಿಲ್ಲ ಇನ್ನು ರೈತ ಪರ ಸಂಘಟನೆಗಾರರು ಕೂಡ ರೈತರ ಬಗ್ಗೆ ಕಾಳಜಿ ತೋರುತ್ತಿಲ್ಲ.

ಉದಯವಾಹಿನಿ ಚಿತ್ರ

ಬಿದ್ದಿರುವ ಭತ್ತದ ತೆನೆ ಕಟಾವು ಮಾಡುವ ಸಂದರ್ಭದಲ್ಲಿ ಕಟಾವಿಗೆ ಹೆಚ್ಚಿನ ಸಮಯ ತೆಗೆದು ಕೊಳ್ಳುತ್ತದೆ ಆ ಸಂದರ್ಭದಲ್ಲಿ ರೈತರ ಬೆಳೆದಿರುವ ಬೆಳೆಯನ್ನು ಕಟಾವು ಮಾಡಲು ಯಾವುದೇ ರಿಯಾಯಿತಿ ನೀಡುವುದಿಲ್ಲ ಇದರಿಂದ ರೈತರಿಗೆ ಸಾಕಷ್ಟು ಆರ್ಥಿಕ ನಷ್ಟ ಉಂಟಾಗುತ್ತಿದೆ, ಕಳೆದ ಒಂದು ವರ್ಷದ ಹಿಂದೆ ಕೊಪ್ಪಳ ಜಿಲ್ಲಾಧಿಕಾರಿಗಳು ಭತ್ತದ ಬೆಳೆ ಕಟಾವಿಗೆ ಸಂಬಂಧಿಸಿದಂತೆ ಬೆಲೆಯನ್ನು ನಿಗದಿ ಮಾಡಿ ಆದೇಶ ಹೊರಡಿಸಲಾಗಿತ್ತು ಆದರೆ ಈ ಬಾರಿ ಭತ್ತದ ಬೆಲೆ ಕಟಾವು ಬೆಲೆ ನಿಗದಿ ಮಾಡಿಲ್ಲ ಇದನ್ನೇ ಅವಕಾಶ ಮಾಡಿಕೊಂಡಿರುವ ಭತ್ತ ಕಟಾವು ಯಂತ್ರಗಳ ಮಾಲೀಕರು ಈ ಬಾರಿ ಭತ್ತ ಕಟಾವು ಮಾಡಲು ಒಂದು ಘಂಟೆಗೆ 3ಸಾವಿರ ಖಡಕಂಡಿತವಾಗಿ ಕೊಡಬೇಕೆಂದು ರೈತರ ಮೇಲೆ ಒತ್ತಡ ಹೇರಲಾಗಿದೆ ಇದು ರೈತಾಪಿ ವರ್ಗದಲ್ಲಿ ಆತಂಕ ಸೃಷ್ಟಿಸಿದೆ, ಭತ್ತ ಬೆಳೆದು ತೀವ್ರ ನಷ್ಟದಲ್ಲಿರುವ ರೈತರಿಗೆ ಇದೀಗ ಭತ್ತಕಟಾವು ಯಂತ್ರಕ್ಕೆ ಸರಿಸುಮಾರು 6 ನೂರರಿಂದ ರಿಂದ 7 ನೂರು ರೂಪಾಯಿಗಳು ಏರಿಕೆ ಮಾಡಿರುವುದು ರೈತರು ಸಾಕಷ್ಟು ಆರ್ಥಿಕ ನಷ್ಟವನ್ನು ಅನುಭವಿಸಿ ಭತ್ತ ಬೆಳೆಯುವ ಆಸಕ್ತಿಯನ್ನು ಕಡಿಮೆ ಮಾಡಲು ಸೂಚನೆ ನೀಡುತ್ತಿದೆ, ಇದು ರೈತರ ಮೇಲೆ ಪ್ರತಿಕೂಲ ಸನ್ನಿವೇಶ ಸೃಷ್ಟಿಯಾಗುವಂತಿದೆ. ರೈತರ ಹಿತಾಸಕ್ತಿಯನ್ನು ಜಿಲ್ಲಾಧಿಕಾರಿಗಳು ಮರೆತರೆ ಎನ್ನುವ ಅನುಮಾನ ಈಗ ರೈತಾಪಿ ರೈತರಲ್ಲಿ ಮೂಡಿದೆ. ರೈತರು ಈಗಾಗಲೇ ಸಾಕಷ್ಟು ಬೆಲೆ ನಷ್ಟವನ್ನು ಅನುಭವಿಸಿದ್ದಾರೆ ಒಂದು ತಾಸಿಗೆ 3ಸಾವಿರ ಅಂದ್ರೆ ಅದಕ್ಕೆ ಲೆಕ್ಕ ಐಯ್ತಾ ಇಲ್ಲ ಹಿಂಗ ಮುಂದು ವರೆದರೆ ರೈತರು ಭತ್ತ ಬೆಳೆಯುವುದು ಬಿಟ್ಟು ಗೂಳಿ ಹೋಗುವ ಪರಿಸ್ಥಿತಿ ಬರುತ್ತದೆ ಕೂಡಲೇ ಜಿಲ್ಲಾಧಿಕಾರಿಗಳು ಭತ್ತ ಕಟಾವು ಯಂತ್ರಗಳಿಗೆ ಸೂಕ್ತ ಬೆಲೆ ನಿಗದಿ ಮಾಡಬೇಕು ಎಂದು ಒತ್ತಾಯಿಸಿದರು.

ಸೂಚನೆಯ ಭರವಸೆ

ಕಾರಟಗಿ ತಾಲ್ಲೂಕಿನ ಮೈಲಾಪುರದ ಗ್ರಾಮದ ರೈತರು ಭತ್ತ ಕಟಾವು ಯಂತ್ರ ಬೆಳೆ ಏರಿಕೆಯನ್ನು ಖಂಡಿಸಿದ್ದಾರೆ ಭತ್ತ ಕಟಾವು ಬೆಲೆ ಏರಿಕೆ ಕಡಿಮೆ ಮಾಡುವಂತೆ ಮಾನ್ಯ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ್ ಎಸ್ ತಂಗಡಗಿ ಅವರ ಗೃಹ ಕಚೇರಿಗೆ ಅಳಲು ತೋಡಿಕೊಳ್ಳಲು ಬಂದಾಗ ಸಚಿವರು ಮನೆಯಲ್ಲಿ ಇರಲಿಲ್ಲ ಮೊಬೈಲ್ ಕರೆಯ ಮೂಲಕ ರೈತರ ಮನವಿಯನ್ನು ಆಲಿಸಿದ ಸಚಿವರು ಜಿಲ್ಲಾಧಿಕಾರಿಗಳಿಗೆ ಈ ಕೂಡಲೇ ಭತ್ತ ಕಟಾವು ಬೆಲೆ ಏರಿಕೆಯನ್ನು ನಿಯಂತ್ರಿಸಿ ಭತ್ತ ಕಟಾವಿಗೆ ಸೂಕ್ತ ಬೆಲೆ ನಿಗದಿ ಮಾಡುವಂತೆ ಸೂಚನೆ ನೀಡುತ್ತೇನೆ ಎಂದು ಭರವಸೆಯನ್ನು ನೀಡಿದ್ದಾರೆ

ಈ ಸಂದರ್ಭದಲ್ಲಿ ರೈತರು ಮಾತನಾಡಿ ಹೋದ ಬಾರಿ ಭತ್ತಕಟಾವು ಬೆಲೆಗಿಂತ ಈ ಬಾರಿ ಭತ್ತ ಕಟಾವು ಬೆಲೆ ತಾಸಿಗೆ ಆರು ಏಳು ರೂಪಾಯಿ ಹೆಚ್ಚಿಗೆ ಮಾಡಿದ್ದಾರೆ ಯಾರು ನಮ್ಮನ್ನು ಕೇಳುವುದಿಲ್ಲ ಅಂತ ಮಿಷನ್ ಮಾಲೀಕರು ಆಲೋಚನೆ ಮಾಡುತ್ತಿರಬೇಕು ಆದರೆ ನಾವು ಭತ್ತ ಕಟಾವು ಯಂತ್ರ ಮಾಲೀಕರ ವಿರುದ್ಧ ಜಿಲ್ಲಾಧಿಕಾರಿಗಳಿಗೆ ದೂರು ನೀಡುತ್ತೇವೆ.

ಅಭಿವೃದ್ಧಿಗಾಗಿ 30ಕೋಟಿ ರೂ. ಅನುದಾನಕ್ಕೆ ಮನವಿ

• ಉದಯವಾಹಿನಿ, ಚಿಂಚೋಳಿ

ಪುರಸಭೆ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಒದಗಿಸುವುದಕ್ಕಾಗಿ ಅಭಿವೃದ್ಧಿಗಾಗಿ 30ಕೋಟಿ ರೂ.ವಿಶೇಷ ಅನುದಾನ ಮಂಜೂರು ಮಾಡುವಂತೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಐಟಿಬಿಟಿ ಹಾಗೂ ಕಲ್ಬುರ್ಗಿ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆಯವರಿಗೆ ಪುರಸಭೆ ಅಧ್ಯಕ್ಷ ಆನಂದಕುಮಾರ ಟೈಗರ್ ಮನವಿ ಸಲ್ಲಿಸಿದ್ದಾರೆ.

ತಾಲ್ಲೂಕಾ ಅತ್ಯಂತ ಹಿಂದುಳಿದ,ಗಡಿ ಪ್ರದೇಶವಾಗಿದ್ದು ಪುರಸಭೆ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳಾದ, ಸಿ.ಸಿ.ರಸ್ತೆ, ಚರಂಡಿ, ವಿದ್ಯುತ್, ನೀರು ಸರಬರಾಜು ಇತ್ಯಾದಿ ಪಟ್ಟಣದಲ್ಲಿ ಕೊರತೆ ಇರುವುದರಿಂದ ಸಾರ್ವಜನಿಕರಿಗೆ ತುಂಬಾ ತೋಂದರೆ ಉಂಟಾಗುತ್ತಿದೆ ಹೀಗಾಗಿ ಪುರಭೆ ಯಲ್ಲಿ ಅನುದಾನ ಕೊರತೆ ಇರುವುದರಿಂದ ಪಟ್ಟಣದ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಗಳು ಕೈಗೊಳ್ಳಲು ಸಾದ್ಯವಾಗುತ್ತಿಲ್ಲ ಆದ್ದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಮೂಲಭೂತ ಸೌರ್ಕಗಳು ಒದಗಿಸಲು ವಿಶೇಷ ಅನುದಾನದ ಅವಶ್ಯಕತೆಯಿದೆ.

ಕಾಮಗಾರಿಗಳ ವಿವರ ಇಂತಿದೆ

1) ನೀರು ಶುದ್ದೀಕರಣ ಘಟಕ ಸ್ಥಾಪನೆ
2) ವಿರೇಂದ್ರ ಪಾಟೀಲ್ ಶಾಲೆಯ ಮುಖ್ಯರಸ್ತೆಯಿಂದ ತಾಂಡೂರ್ ಕ್ರಾಸ್‌ವರೆಗೆ ರಸ್ತೆಯ ಮಧ್ಯದಲ್ಲಿ ವಿಭಾಜಕ ಹಾಗೂ ರಸ್ತೆ ಸುಧಾರಣೆ
3)ತಾಂಡೂರ ಕ್ರಾಸದಿಂದ ಬೀದರ ಕ್ರಾಸ್‌ವರೆಗೆ ಎರಡು ಬದಿ ಆರ್.ಸಿ.ಸಿ ಮಳೆ ನೀರು ಚರಂಡಿ ನಿರ್ಮಾಣ
4) ವಿರೇಂದ್ರ ಪಾಟೀಲ್ ಶಾಲೆಯ ಮುಖ್ಯ ರಸ್ತೆಯಿಂದ ತಾಂಡೂರ್ ಕ್ರಾಸ್‌ವರೆಗೆ ರಸ್ತೆಯ ಮಧ್ಯದಲ್ಲಿ ವಿಭಾಜಕ ವಿದ್ಯುತ ಕಂಬ ಹಾಗೂ ಬೀದಿ ದೀಪ ಆಳವಡಿಸುವುದು
5) ವಿವಿಧ ಬಡಾವಣೆಗಳಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ
6) ಪಟ್ಟಣದ ವ್ಯಾಪ್ತಿಯಲ್ಲಿ ವಿವಿಧ ವಿನ್ಯಾಸಗಳಲ್ಲಿರುವ ಉದ್ಯಾನವನಗಳ ಅಭಿವೃದ್ಧಿ
7)ಚಂದಾಪೂರದಲ್ಲಿ ಹೊಸದಾಗಿ ನಿರ್ಮಾಣಗೊಂಡ ಗ್ರಂಥಾಲಯಕ್ಕೆ ವಿವಿಧ ರೀತಿಯ ಉನ್ನತ ವ್ಯಾಸಂಗಕ್ಕಾಗಿ ಪುಸ್ತಕಗಳು ಒದಗಿಸುವುದು
8) ಪಟ್ಟಣದ ವ್ಯಾಪ್ತಿಯಲ್ಲಿ ಬರುವ ಶಾಲಾ ಕಟ್ಟಡಗಳು, ಅಂಗನವಾಡಿ ಕಟ್ಟಡಗಳ ಅಭಿವೃದ್ಧಿಗಾಗಿ
9)ಪಟ್ಟಣದ ಮುಲ್ಲಾಮಾರಿ ನದಿಯ ದೊಡ್ಡ ಸೇತುವೆಯಿಂದ ಬಡಿ ದರ್ಗಾದ ವರೆಗೆ ತಡೆಗೋಡೆ ನಿರ್ಮಾಣ
10) ಪುರಸಭೆಯ ಸ್ಲಮ್ ಬೋರ್ಡ ಮನೆಗಳಿಗೆ ಮೂಲಭೂತ ಸೌಕರ್ಯ ಒದಗಿಸುವುದು,
11ಪುರಸಭೆಯ ವ್ಯಾಪ್ತಿಯಲ್ಲಿ ಹೊಸದಾಗಿ ಕ್ರೀಡಾಂಗಣ ನಿರ್ಮಾಣ ಮಾಡುವುದು ಇತ್ಯಾದಿ ಕಾಮಗಾರಿಗಳು ನಿರ್ಮಿಸಲು ಅಂದಾಜು 30ಕೋಟಿ ರೂ.ಅವಶ್ಯಕತೆ ಇರುತ್ತದೆ.

ತಾವು ವಿಶೇಷ ಅನುದಾನ ಬಿಡುಗಡೆ ಮಾಡಿದ್ದಲ್ಲಿ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅನುಕೂಲವಾಗುತ್ತದೆ ಎಂದರು.

ಉದಯವಾಹಿನಿ ಚಿತ್ರ

ಬೀದರ ಸಂಸದ ಸಾಗರ್ ಖಂಡ್ರೆಗೂ ಮನವಿ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ವಾರ್ಡ್‌ಗಳಲ್ಲಿ ಮೂಲ ಭೂತ ಸೌಕರ್ಯಗಳನ್ನು ಒದಗಿಸಲು ಸಂಸದರ ನಿಧಿಯಲ್ಲಿ ಪಟ್ಟಣದ ಅಭಿವೃದ್ಧಿಗಾಗಿ 50ಲಕ್ಷ ರೂ.ಅನುದಾನ ನೀಡುವಂತೆ ಮನವಿ ಸಲ್ಲಿಸಿದರು.

ಉದಯವಾಹಿನಿ ಚಿತ್ರ

ಪುರಸಭೆ ವ್ಯಾಪ್ತಿಯಲ್ಲಿ ಅಭಿವೃದ್ಧಿಗಾಗಿ 30ಕೋಟಿ ರೂ.ವಿಶೇಷ ಅನುದಾನ ನೀಡುವಂತೆ ಕಲ್ಬುರ್ಗಿ ಉಸ್ತುವಾರಿ ಸಚಿವ ಖರ್ಗೆಯವರಿಗೆ ಪುರಸಭೆ ಅಧ್ಯಕ್ಷ ಟೈಗರ್ ಮನವಿ

ಜೆ ಎನ್ ಕೋಟೆ ಪ್ರೌಢಶಾಲಾ ಮಕ್ಕಳಿಗೆ ಮತದಾರರ ಪ್ರತಿಜ್ಞಾವಿಧಿ ಬೋಧನೆ

• ಉದಯವಾಹಿನಿ, ಚಿತ್ರದುರ್ಗ

ರಾಷ್ಟ್ರೀಯ ಮತದಾರರ ದಿನದ ಅಂಗವಾಗಿ ಶನಿವಾರ ಚಿತ್ರದುರ್ಗ ತಾಲ್ಲೂಕಿನ ಜೆ ಎನ್ ಕೋಟೆ ಗ್ರಾಮದ ಸರ್ಕಾರಿ ಪ್ರೌಢಶಾಲಾ ಮಕ್ಕಳಿಗೆ ಮತದಾನ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಪ್ರತಿಜ್ಞಾವಿಧಿ ಬೋಧಿಸಿ ಮಾತನಾಡಿದ ಜೆ ಎನ್ ಕೋಟೆ ಸರ್ಕಾರಿ ಆಯುಷ್ಮಾನ್ ಆರೋಗ್ಯ ಮಂದಿರದ ಯೋಗ ತರಬೇತುದಾರ ರವಿ ಕೆ. ಅಂಬೇಕರ್ ಯುವ ಮತದಾರರು ಅಂದರೆ 18 ವರ್ಷ ತುಂಬಿದ ಹೊಸ ಮತದಾರರು.

ರಾಷ್ಟ್ರದ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಅವರ ಆಲೋಚನೆಗಳು, ಆಕಾಂಕ್ಷೆಗಳು ಮತ್ತು ಮೌಲ್ಯಗಳು ದೇಶದ ರಾಜಕೀಯ ದೃಶ್ಯಾವಳಿಯನ್ನು ಬದಲಾಯಿಸುವ ಶಕ್ತಿ ಹೊಂದಿವೆ.

ಮುಂದಿನ ಚುನಾವಣೆಗಳಲ್ಲಿ ಯುವ ಮತದಾರರಾಗಿ ಹೊರಹೊಮ್ಮುವ ಪ್ರೌಢಶಾಲಾ ಮಕ್ಕಳು ಈಗಿನಿಂದಲೇ ಚುನಾವಣೆ ಮತ್ತು ಮತದಾನದ ಮಹತ್ವದ ಬಗ್ಗೆ ಅರಿತುಕೊಳ್ಳುವುದು ಅವಶ್ಯ ಎಂದು ಅಭಿಪ್ರಾಯ ಪಟ್ಟರು.

ಕಾರ್ಯಕ್ರಮದಲ್ಲಿ ಸಮುದಾಯ ಆರೋಗ್ಯಾಧಿಕಾರಿ ರಮೇಶ್, ಶಾಲೆಯ ಎಸ್ ಡಿ ಎಂ ಸಿ ಸದಸ್ಯ ಕರಿಬಸವಣ್ಣ ಶಾಲೆಯ ಸಹ ಶಿಕ್ಷಕರು, ಆಶಾ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು.

ಉದಯವಾಹಿನಿ ಚಿತ್ರ

ರಾಷ್ಟ್ರೀಯ ಮತದಾರರ ದಿನ

ಮತದಾನದಿನದ ಬಗ್ಗೆ ಮಾಹಿತಿ ನೀಡಿ ಮಾತನಾಡಿದ ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಮುಮ್ತಾಜ್ ಮಾತನಾಡಿ ಮತದಾನ ಸಂವಿಧಾನ ನಮಗೆಲ್ಲರಿಗೂ ನೀಡಿರುವ ಅತ್ಯಮೂಲ್ಯ ಹಕ್ಕಾಗಿದೆ. ಜೊತೆಗೆ ಮತ ಚಲಾಯಿಸುವ ಮೂಲಕ ದೇಶದ ಅಭಿವೃದ್ಧಿಗಾಗಿ ಅರ್ಹ ಪ್ರತಿನಿಧಿಯನ್ನು ಆರಿಸುವುದು ಕೂಡಾ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಈ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಜನರಿಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರತಿ ವರ್ಷ ಜನವರಿ 25 ರಂದು ಭಾರತದಲ್ಲಿ ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಗುತ್ತದೆ. ಎಂದು ತಿಳಿಸಿದರು

ಚಾಕೊಲೇಟ್ ಆಮಿಷವೊಡ್ಡಿ ಐದು ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ

•

ಅಮೆರಿಕ ಅಕ್ರಮ ವಲಸಿಗರ ಹೊರದಬ್ಬಿದ ಡೊನಾಲ್ಡ್ ಟ್ರಂಪ್

ಅಮೆರಿಕದಲ್ಲಿ ಅಕ್ರಮ ವಲಸಿಗರ ಗಡೀಪಾರು ಪ್ರಕ್ರಿಯೆ ಆರಂಭ; ಶ್ವೇತಭವನ ಸಿಬ್ಬಂದಿ ಫೋಟೋ ಬಿಡುಗಡೆ

ವಾಷಿಂಗ್ಟನ್: ಅಮೆರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದೇಶದಲ್ಲಿ ನೆಲೆಸಿರುವ ಅಕ್ರಮ ವಲಸಿಗರ ಗಡೀಪಾರು ಪ್ರಕ್ರಿಯೆ ಆರಂಭಿಸಿದ್ದಾರೆ. ಈ ಬಗ್ಗೆ ಶ್ವೇತ ಭವನ ಸಿಬ್ಬಂದಿ ಫೋಟೋ ಬಿಡುಗಡೆ ಮಾಡಿದ್ದಾರೆ. ಅಧ್ಯಕ್ಷರಾದ ಮರುಕ್ಷಣವೇ ಟ್ರಂಪ್ ಅವರು ಸಹಿ ಹಾಕಿದ್ದ ಮೊದಲ ಕಾರ್ಯಾದೇಶ ಜಾರಿಗೊಳಿಸಲಾಗಿದೆ. ದೇಶದಲ್ಲಿ ಅಕ್ರಮವಾಗಿ ನೆಲೆಸಿದ್ದ 1300 ವಲಸಿಗರನ್ನು ಬಂಧಿಸಿ, ಗಡೀಪಾರು ಮಾಡಲಾಗಿದೆ. ಬಂಧಿತ ವಲಸಿಗರನ್ನು ಮಿಲಿಟರಿ ವಿಮಾನಗಳ ಮೂಲಕ ದೇಶದಿಂದ ಹೊರಗೆ ಕಳುಹಿಸಲಾಗಿದೆ, ಎಂದು ಶ್ವೇತ ಭವನ ಪ್ರಕಟಣೆಯಲ್ಲಿ ತಿಳಿಸಿದೆ. ಕಾಡ್ಗಿಚ್ಚು ಹಬ್ಬಿರುವ ಕ್ಯಾಲಿಫೋರ್ನಿಯಾಗೆ ಡೊನಾಲ್ಡ್ ಟ್ರಂಪ್ ಅವರು ಪ್ರವಾಸ ಕೈಗೊಳ್ಳುವ ಮೊದಲು ಗಡೀಪಾರು ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಅಮೆರಿಕದ 47ನೇ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಡೊನಾಲ್ಡ್ ಟ್ರಂಪ್ ಅವರು ಮೆಕ್ಸಿಕೊ ಗಡಿಯಲ್ಲಿ ತುರ್ತು ಪರಿಸ್ಥಿತಿ ಘೋಷಣೆ ಮಾಡಿದ್ದರು. ಅಕ್ರಮ ವಲಸೆ ತಡೆಯುವ ಜತೆಗೆ ದೇಶದೊಳಗೆ ಇರುವ ಅಕ್ರಮ ವಲಸಿಗರನ್ನು ಹೊರ ಹಾಕಲು ಆದೇಶ ನೀಡಿದ್ದರು.



ಟ್ವೀಟ್ ಮೂಲಕ ಮಾಹಿತಿ ಹಂಚಿಕೊಂಡ ಕಾರ್ಯದರ್ಶಿ: ಟ್ರಂಪ್ ಅವರು ಚುನಾವಣೆ ಪ್ರಚಾರದ ವೇಳೆ ಕೊಟ್ಟ ಭರವಸೆಯಂತೆ ಅಮೆರಿಕ ಇತಿಹಾಸ ದಲ್ಲಿಯೇ ಅತಿದೊಡ್ಡ ಗಡೀಪಾರು ಕಾರ್ಯಾಚರಣೆ ಹಮ್ಮಿಕೊಳ್ಳಲಾಗಿದೆ. ಮಿಲಿಟರಿ ವಿಮಾನಗಳ ಮೂಲಕ ಅಕ್ರಮ ವಲಸಿಗರನ್ನು ಗಡೀಪಾರು ಮಾಡಲಾಗುತ್ತಿದೆ, ಎಂದು ಶ್ವೇತ ಭವನದ ಪತ್ರಿಕಾ ಕಾರ್ಯದರ್ಶಿ ಕ್ಯಾರೋಲಿನ್ ಲೀವಿಟ್ ಹೇಳಿದ್ದಾರೆ.

ಗಡೀಪಾರು ವಿಮಾನಗಳು ಪ್ರಾರಂಭವಾಗಿವೆ, ಅವರು ಫೋಟೋಗಳೊಂದಿಗೆ ಲೀವಿಟ್ ಎಕ್ಸ್ ಪೋಸ್ಟ್ ಮಾಡಿದ್ದಾರೆ.

ಗಡಿಪಾರು ನೀತಿಗೆ ಪೋಪ್ ವಿರೋಧ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಲಸಿಗರ ಸಾಮೂಹಿಕ ಗಡಿಪಾರು ನೀತಿಗೆ ಪೋಪ್ ಫ್ರಾನ್ಸಿಸ್ ಆಕ್ಷೇಪ ವ್ಯಕ್ತ ಪಡಿಸಿದ್ದಾರೆ. ವಲಸಿಗರನ್ನು ಸಾಮೂಹಿಕವಾಗಿ ಗಡೀಪಾರು ಮಾಡುವುದು ನಾಚಿಕೆಗೇಡಿನ ಕ್ರಮವಾಗಿದೆ. ಇದರಿಂದ ಜನರಲ್ಲಿಗೊಂದಲ ಉಂಟಾಗುತ್ತದೆ. ಜನರ ಮನದಲ್ಲಿ ಆಂತರಿಕವಾಗಿ ಗಾಯ ಉಂಟುಮಾಡುತ್ತದೆ, ಎಂದು ಪೋಪ್ ಫ್ರಾನ್ಸಿಸ್ ಹೇಳಿದ್ದಾರೆ.

ಪೌರತ್ವ ಹಕ್ಕು ರದ್ದತಿ ಆದೇಶಕ್ಕೆ ತಡೆ: ಅಮೆರಿಕದಲ್ಲಿ ಜನ್ಮಸಿದ್ಧ ಪೌರತ್ವ ಹಕ್ಕು ಮರು ವ್ಯಾಖ್ಯಾನಿಸುವ ಡೊನಾಲ್ಡ್ ಟ್ರಂಪ್ ಆಡಳಿತದ ಕಾರ್ಯ ನಿರ್ವಾಹಕ ಆದೇಶವನ್ನು ಸಿಯಾಟಲ್ ಫೆಡರಲ್ ನ್ಯಾಯಾಧೀಶರು ತಾತ್ಕಾಲಿಕವಾಗಿ ತಡೆಹಿಡಿದಿದ್ದಾರೆ. ಟ್ರಂಪ್ ಸಹಿ ಹಾಕಿದ ಕಾರ್ಯಾದೇಶವನ್ನು ಪ್ರಶ್ನಿಸಿದ ಬಹು-ರಾಜ್ಯಗಳ ವಿಚಾರಣೆ ವೇಳೆ ಜನ್ಮಸಿದ್ಧ ಪೌರತ್ವ ಹಕ್ಕು ರದ್ದುಗೊಳಿಸುವ ಕ್ರಮ ಅಸಂವಿಧಾನಿಕ ಎಂದು ನ್ಯಾಯಾಲಯ ವ್ಯಾಖ್ಯಾನಿಸಿದೆ. ಪೌರತ್ವ ಹಕ್ಕು ಸಂಬಂಧ 22 ರಾಜ್ಯಗಳು ಮತ್ತು ವಲಸಿಗರ ಹಕ್ಕು ರಕ್ಷಣಾ ಗುಂಪುಗಳು ನ್ಯಾಯಾಲಯಗಳಲ್ಲಿ ಐದು ಮೊಕದ್ದಮೆ ಹೂಡಿವೆ. ಟ್ರಂಪ್ ಅವರ ಕಾರ್ಯಾದೇಶ ಸಂವಿಧಾನದ ಉಲ್ಲಂಘನೆ ಎಂದು 22 ರಾಜ್ಯಗಳ ಅಟಾರ್ನಿ ಜನರಲ್‌ಗಳು ಹೇಳಿದ್ದಾರೆ.

ಜನ್ಮಸಿದ್ಧ ಪೌರತ್ವ ಹಕ್ಕು ರದ್ದುಗೊಂಡರೆ ಸಿಯಾಟಲ್‌ನಲ್ಲಿ 1.50 ಲಕ್ಷ ಮಕ್ಕಳು ನಾಗರಿಕ ಹಕ್ಕು ಕಳೆದುಕೊಳ್ಳುತ್ತಾರೆ. ಟ್ರಂಪ್ ಆದೇಶ ಸಂವಿಧಾನದ 14ನೇ ತಿದ್ದುಪಡಿಯಲ್ಲಿ ನೀಡಲಾದ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಲಿದೆ. 127 ವರ್ಷಗಳ ಹಿಂದೆ ಪೌರತ್ವ ಕುರಿತು ಅಮೆರಿಕ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿಗೆ ವಿರುದ್ಧವಾಗಲಿದೆ, ಎಂದು ದೂರಿನಲ್ಲಿ ವಿವರಿಸಲಾಗಿದೆ.

ಗಡೀಪಾರು ಪ್ರಕ್ರಿಯೆ ಆರಂಭ

ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕನಸಿನ ಯೋಜನೆಯಂತೆ ಅಮೆರಿಕದಲ್ಲಿ ನೆಲೆಸಿದ್ದ ಅಕ್ರಮ ವಲಸಿಗರ ಗಡೀಪಾರು ಮಾಡುವ ಪ್ರಕ್ರಿಯೆ ಆರಂಭವಾಗಿದೆ. ಅಧ್ಯಕ್ಷರಾದ ಮರುಕ್ಷಣವೇ ಟ್ರಂಪ್ ಅವರು ಸಹಿ ಹಾಕಿದ್ದ ಮೊದಲ ಕಾರ್ಯಾದೇಶ ಜಾರಿಗೊಳಿಸಲಾಗಿದೆ. ದೇಶದಲ್ಲಿ ಅಕ್ರಮವಾಗಿ ನೆಲೆಸಿದ್ದ 1300 ವಲಸಿಗರನ್ನು ಬಂಧಿಸಿ, ಗಡೀಪಾರು ಮಾಡಲಾಗಿದೆ. ಈ ಬಗ್ಗೆ ಶ್ವೇತಭವನದ ಅಧಿಕಾರಿ ಫೋಟೋ ಬಿಡುಡೆ ಮಾಡಿದ್ದಾರೆ.

- **ಅಧ್ಯಕ್ಷರಾದ ಮರುಕ್ಷಣವೇ ಟ್ರಂಪ್ ಅವರು ಸಹಿ ಹಾಕಿದ್ದ ಮೊದಲ ಕಾರ್ಯಾದೇಶ ಜಾರಿಗೊಳಿಸಲಾಗಿದೆ.**
- **ಮಿಲಿಟರಿ ವಿಮಾನಗಳ ಮೂಲಕ ಅಕ್ರಮ ವಲಸಿಗರನ್ನು ಗಡೀಪಾರು.**

1300 ವಲಸಿಗರನ್ನು ಬಂಧಿಸಿ ಗಡೀಪಾರು

ಕುಡುಕ ಗಂಡಂದಿರನ್ನು ಬಿಟ್ಟು ಪರಸ್ಪರ ಮದುವೆಯಾದ ಮಹಿಳೆಯರು

ಗೋರಖ್ಪುರ: ದಿನವೂ ಕುಡಿದು ಬಂದು ಗಲಾಟೆ ಮಾಡುತ್ತಿದ್ದ ಮದವ್ಯಸನಿ ಗಂಡನನ್ನು ತೊರೆದು ಇಬ್ಬರು ಮಹಿಳೆಯರು ಪರಸ್ಪರ ವಿವಾಹವಾಗಿರುವ ಅಪರೂಪದ ಪ್ರಕರಣ ಉತ್ತರಪ್ರದೇಶದಲ್ಲಿ ನಡದಿದೆ. ಕವಿತಾ ಮತ್ತು ಗುಂಜಾ ಎಂಬ ದಿಟ್ಟ ಮಹಿಳೆಯರು ಪರಸ್ಪರ ವಿವಾಹವಾಗುವ ಮೂಲಕ ನಾಗರಿಕ ಸಮಾಜಕ್ಕೆ ಸಂದೇಶ ರವಾನಿಸಿದ್ದಾರೆ.

ದೇವಸ್ಥಾನದ ಅರ್ಚಕ ಉಮಾ ಶಂಕರ್ ಪಾಂಡೆ ಮಾತನಾಡಿ, ಮಹಿಳೆಯರು ಹೂಮಾಲೆ ಮತ್ತು ಸಿಂಧೂರವನ್ನು ಖರೀದಿಸಿ ಧಾರ್ಮಿಕ ವಿಧಿಗಳನ್ನು ಮುಗಿಸಿ ಸದ್ದಿಲ್ಲದೆ ತೆರಳಿದರು ಎಂದು ತಿಳಿಸಿದ್ದಾರೆ. ಗೋರಖ್ಪುರದ ಡಿಯೋರಿಯಾದ ಚೋಟಿಕಾಶಿ ಎಂದು ಕರೆಯುವ ಶಿವ ದೇವಾಲಯದಲ್ಲಿ ಕವಿತಾ ಮತ್ತು ಗುಂಜಾ ವಿವಾಹವಾಗಿದ್ದಾರೆ. ಹಿಂಸೆ ಮತ್ತು ನೋವಿನಿಂದ ಮುಕ್ತರಾಗಿ ತಾವು ಇನ್ನು ಮುಂದೆ ಹೊಸ ಜೀವನವನ್ನು ಪ್ರಾರಂಭ ಮಾಡುತ್ತೇವೆ ಎಂದು ಶಿವನ ಮುಂದೆ ಪ್ರತಿಜ್ಞೆ ಮಾಡಿದ್ದಾರೆ.

ದೇವಸ್ಥಾನದಲ್ಲಿ, ಗುಂಜಾ ಎಂಬ ಮಹಿಳೆ ವರನಾಗಿ ಕಾಣಿಸಿಕೊಂಡರೆ, ಕವಿತಾ ಹಣೆಯ ಮೇಲೆ ಸಿಂಧೂರವನ್ನು ಇಟ್ಟು, ಆಕೆಯೊಂದಿಗೆ ಹಾರವನ್ನು ಬದಲಾಯಿಸಿಕೊಂಡು ಸಪ್ತಪದಿ ತುಳಿದಿದ್ದಾರೆ. ಹಲವಾರು ವರ್ಷಗಳ ನಿಂದನೆಯನ್ನು ಸಹಿಸಿಕೊಂಡ ನಂತರ, ಸಾಮಾಜಿಕ ಮಾಧ್ಯಮ ಪ್ಲಾಟ್ಫಾರ್ಮ್ ಇನ್ಸ್ಟಾಗ್ರಾಮ್‌ನಲ್ಲಿ ಸಂಪರ್ಕ ಸಾಧಿಸಿದ ನಂತರ ಪರಸ್ಪರರ ಕಂಪನಿಯಲ್ಲಿ ಆರಾಮವನ್ನು ಕಂಡುಕೊಂಡಿದ್ದೇವೆ ಎಂದು ಅವರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಮದ್ಯವ್ಯಸನಿಯಾಗಿದ್ದ ಪತಿ ತನ್ನ ಮೇಲೆ ಪ್ರತಿನಿತ್ಯ ಹಲ್ಲೆ ನಡೆಸುತ್ತಿದ್ದ ಎಂದು ಮಹಿಳೆಯೊಬ್ಬರು ಹೇಳಿದ್ದಾರೆ. ಆಕೆಗೆ ನಾಲ್ಕು ಮಕ್ಕಳಿದ್ದಾರೆ ಮತ್ತು ಪದೇ ಪದೇ ಹಿಂಸೆಯನ್ನು ಅನುಭವಿಸಿದ ನಂತರ ತನ್ನ ಪೋಷಕರ ಮನೆಗೆ ಮರಳಲು ನಿರ್ಧರಿಸಿದಳು.

ಮತ್ತೊಬ್ಬ ಮಹಿಳೆ ತನ್ನ ಪತಿ ಕೂಡ ಅತಿಯಾಗಿ ಮದ್ಯಪಾನ ಮಾಡುತ್ತಿದ್ದಾನೆ ಮತ್ತು ತನ್ನ ಮೇಲೆ ದಾಂಪತ್ಯ ದ್ರೋಹದ ಸುಳ್ಳು ಆರೋಪ ಹೊರಿಸಿ ಅವನನ್ನು ಬಿಟ್ಟು ಹೋಗುವಂತೆ ಮಾಡಿದ ಎಂದು ಹೇಳಿಕೊಂಡಿದ್ದಾರೆ. ನಮ ಗಂಡಂದಿರ ಕುಡಿತ ಮತ್ತು ನಿಂದನೀಯ ವರ್ತನೆಯಿಂದ ನಾವು ಪೀಡಿತರಾಗಿದ್ದೇವೆ. ಈ ಘಟನೆ ಶಾಂತಿ ಮತ್ತು ಪ್ರೀತಿಯ ಜೀವನವನ್ನು ಆಯ್ಕೆ ಮಾಡಲು ನಮನ್ನು ಪ್ರೇರೇಪಿಸಿತು. ನಾವು ದಂಪತಿಗಳಾಗಿ ಗೋರಖ್ಪುರದಲ್ಲಿ ವಾಸಿಸಲು ನಿರ್ಧರಿಸಿದ್ದೇವೆ ಮತ್ತು ನಮನ್ನು ರಕ್ಷಿಸಿಕೊಳ್ಳಲು ಕೆಲಸ ಮಾಡುತ್ತಿದ್ದೇವೆ ಎಂದು ಗುಂಜಾ ತಿಳಿಸಿದ್ದಾರೆ. ಮಹಿಳೆಯರು ಮಾಲೆ ಸಿಂಧೂರ ಖರೀದಿಸಿ, ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಿ ಸದ್ದಿಲ್ಲದೆ ತೆರಳಿದರು ಎಂದು ಸಮಾರಂಭಕ್ಕೆ ಸಾಕ್ಷಿಯಾದ ದೇವಾಲಯದ ಅರ್ಚಕ ಉಮಾಶಂಕರ್ ಪಾಂಡೆ ತಿಳಿಸಿದ್ದಾರೆ.

ಬಾಡಿಗೆ ಮನೆ ಹುಡುಕಾಟ

ಒಟ್ಟಿಗೆ ಇರಲು ನಿರ್ಧರಿಸಲಾಗಿದೆ ಮತ್ತು ತಮನ್ನು ಬೇರ್ಪಡಿಸಲು ಯಾರಿಗೂ ಬಿಡುವುದಿಲ್ಲ ಎಂದು ಮಹಿಳೆಯರು ಹೇಳಿದ್ದಾರೆ. ಪ್ರಸ್ತುತ ಅವರಿಗೆ ಶಾಶ್ವತ ಮನೆ ಇಲ್ಲದಿದ್ದರೂ, ಅವರು ವಾಸಿಸಲು ಸ್ಥಳವನ್ನು ಬಾಡಿಗೆಗೆ ತೆಗೆದುಕೊಳ್ಳಲು ಯೋಜಿಸಿದ್ದಾರೆ.

ಹಮಾಸ್ ವಶದಲ್ಲಿರುವ ಯೋಧನ ಬಿಡುಗಡೆವರೆಗೂ ಉತ್ತರ ಗಾಜಾಗೆ ಪ್ರವೇಶವಿಲ್ಲ: ಇಸ್ರೇಲ್

ಟೆಲ್ ಅವಿವ್: ಹಮಾಸ್ ಬಂಡುಕೋರರು ಒತ್ತೆಯಾಳಾಗಿರಿಸಿರುವ 12 ಜನರಲ್ಲಿ ಬಿಡುಗಡೆಗೆ ಉಳಿದಿರುವ ಅರ್ಬೆಲ್ ಯಹೂದ್ ಅವರು ಮರಳದ ಹೊರತೂ ಪ್ಯಾಲಿಸ್ಟೀನಿಯರಿಗೆ ಉತ್ತರ ಗಾಜಾ ಪ್ರವೇಶವಿಲ್ಲ ಎಂದು ಇಸ್ರೇಲ್ ಹೇಳಿದೆ. ಕದನ ವಿರಾಮದ ಒಪ್ಪಂದದಂತೆ ಯಹೂದ್ ಅವರನ್ನು ಶನಿವಾರ ಬಿಡುಗಡೆ ಮಾಡುವ ನಿರೀಕ್ಷೆ ಇತ್ತು. ಆದರೆ ಈವರೆಗೂ ಅವರ ಬಿಡುಗಡೆ ಆಗಿಲ್ಲ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಕಚೇರಿ ಆತಂಕ ವ್ಯಕ್ತಪಡಿಸಿದೆ.

ಇದಕ್ಕೂ ಮೊದಲು ನಾಲ್ವರು ಮಹಿಳಾ ಯೋಧರನ್ನು ಹಮಾಸ್ ಬಿಡುಗಡೆ ಮಾಡಿತ್ತು. ಇದಕ್ಕೆ ಪ್ರತಿಯಾಗಿ ಇಸ್ರೇಲ್‌ನ ವಶದಲ್ಲಿದ್ದರುವ 200 ಪ್ಯಾಲೆಸ್ಟೀನ್ ಕೈದಿಗಳನ್ನು ಬಿಡುಗಡೆ ಮಾಡಲಾಗುತ್ತಿದೆ ಎಂದು ವರದಿಯಾಗಿದೆ. ತಾನು ಬಿಡುಗಡೆ ಮಾಡಲಿರುವ ಒತ್ತೆಯಾಳುಗಳ ಪಟ್ಟಿಯನ್ನು ಹಮಾಸ್ ಬಿಡುಗಡೆ ಮಾಡಿದೆ. ಈಚೆಗೆ ಹಮಾಸ್ ವಶದಲ್ಲಿದ್ದ ಇಸ್ರೇಲ್‌ನ ಮೂರು ಮಂದಿ ಒತ್ತೆಯಾಳುಗಳು ಬಿಡುಗಡೆಯಾದ ಬೆನ್ನಲ್ಲೇ, ಇಸ್ರೇಲ್‌ನ ವಶದಲ್ಲಿದ್ದ 90ಕ್ಕೂ ಅಧಿಕ ಪ್ಯಾಲೆಸ್ಟೀನ್ ಕೈದಿಗಳನ್ನು ಬಿಡುಗಡೆಗೊಳಿಸಲಾಗಿತ್ತು. ಕದನ ವಿರಾಮ ಏರ್ಪಟ್ಟ ಬೆನ್ನಲ್ಲೇ, ಉಭಯ ರಾಷ್ಟ್ರಗಳಲ್ಲಿ ಸಂಭ್ರಮಾಚರಣೆಗಳು ನಡೆಯುತ್ತಿವೆ. ಒಡಂಬಡಿಕೆ ಪ್ರಕಾರ, ಹಮಾಸ್ ಬಂಡುಕೋರರು ಮೊದಲ ದಿನ ಮೂವರು ಮಹಿಳಾ ಒತ್ತೆಯಾಳುಗಳು, 7ನೇ ದಿನ ನಾಲ್ವರು, ಮುಂದಿನ ಐದು ವಾರಗಳಲ್ಲಿ 26 ಮಂದಿಯನ್ನು ಬಿಡುಗಡೆ ಮಾಡಲಿದ್ದಾರೆ. ಇದೇ ಅವಧಿಯಲ್ಲಿ ಪ್ಯಾಲೆಸ್ಟೀನ್ ಕೈದಿಗಳ ಬಿಡುಗಡೆ ಆಗಲಿದ್ದು, ಮೊದಲಿಗೆ ಬಿಡುಗಡೆ ಆಗುವವರಲ್ಲಿ ಯುವಜನರು, ಮಹಿಳೆಯರು ಸೇರಿದ್ದಾರೆ. ಇದಕ್ಕೆ ಪ್ರತಿಯಾಗಿ ಇಸ್ರೇಲ್ ಸೇನೆಯು ಹಮಾಸ್ ಬಂಡುಕೋರರ ನೆಲೆ ಗುರಿಯಾಗಿಸಿ ಗಾಜಾಪಟ್ಟಿಯ ಮೇಲೆ ನಿರಂತರ ದಾಳಿ ನಡೆಸುತ್ತಿದೆ. ಇದುವರೆಗೂ, ಈ ದಾಳಿಗೆ ಅಧಿಕೃತ ಮಾಹಿತಿ ಪ್ರಕಾರ 46,000 ಪ್ಯಾಲೆಸ್ಟೀನಿಯರು ಸಾವಿಗೀಡಾಗಿದ್ದಾರೆ.

ಒಡಂಬಡಿಕೆ ಪ್ರಕಾರ, ಹಮಾಸ್ ಬಂಡುಕೋರರು ಮೊದಲ ದಿನ ಮೂವರು ಮಹಿಳಾ ಒತ್ತೆಯಾಳುಗಳು, 7ನೇ ದಿನ ನಾಲ್ವರು, ಮುಂದಿನ ಐದು ವಾರಗಳಲ್ಲಿ 26 ಮಂದಿಯನ್ನು ಬಿಡುಗಡೆ ಮಾಡಲಿದ್ದಾರೆ. ಇದೇ ಅವಧಿಯಲ್ಲಿ ಪ್ಯಾಲೆಸ್ಟೀನ್ ಕೈದಿಗಳ ಬಿಡುಗಡೆ ಆಗಲಿದ್ದು, ಮೊದಲಿಗೆ ಬಿಡುಗಡೆ ಆಗುವವರಲ್ಲಿ ಯುವಜನರು, ಮಹಿಳೆಯರು ಸೇರಿದ್ದಾರೆ.

2023ರ ಅ. 7ರಿಂದ ಹಮಾಸ್ ಬಂಡುಕೋರರು ಇಸ್ರೇಲ್ ಗುರಿಯಾಗಿಸಿ ಅಪ್ರಚೋದಿತ ದಾಳಿ ನಡೆಸಿದ್ದರು. ಇದು ಯುದ್ಧದ ಕಿಡಿ ಹೊತ್ತಿಸಿತ್ತು. ಇದಕ್ಕೆ ಪ್ರತಿಯಾಗಿ ಇಸ್ರೇಲ್ ನಡೆಸಿದ ದಾಳಿಯಲ್ಲಿ ಈವರೆಗೂ 1,200 ಮಂದಿ ಮೃತಪಟ್ಟಿದ್ದರು. 250 ಜನರನ್ನು ಒತ್ತೆಯಾಳಾಗಿ ಕರೆದೊಯ್ಯಲಾಗಿತ್ತು. ಇದಕ್ಕೆ ಪ್ರತಿಯಾಗಿ ಹಮಾಸ್ ಬಂಡುಕೋರರ ನೆಲೆಯನ್ನು ಗುರಿಯಾಗಿಸಿ ಇಸ್ರೇಲ್ ಸೇನೆ ನಿರಂತರ ದಾಳಿ ನಡೆಸಿತ್ತು.

ಈ ದಾಳಿಗೆ ಅಧಿಕೃತ ಮಾಹಿತಿ ಪ್ರಕಾರ ಈವರೆಗೂ ಸುಮಾರು 46,000 ಪ್ಯಾಲೆಸ್ಟೀನಿಯರು ಸಾವಿಗೀಡಾಗಿದ್ದಾರೆ. ಭಾರಿ ಆಸ್ತಿ ಹಾನಿ ಸಂಭವಿಸಿದೆ ಎಂದು ವರದಿಯಾಗಿದೆ.

200 ಹಮಾಸ್ ಕೈದಿಗಳ ಬಿಡುಗಡೆ

ಕೈರೊ: 15 ತಿಂಗಳ ಯುದ್ಧದ ಬಳಿಕ ಇಸ್ರೇಲ್ ಹಾಗೂ ಹಮಾಸ್ ನಡುವೆ ಕದನ ವಿರಾಮ ಏರ್ಪಟ್ಟಿದೆ. ಇದರ ಭಾಗವಾಗಿ ಹಮಾಸ್ ವಶದಲ್ಲಿದ್ದ ಇಸ್ರೇಲ್‌ನ ನಾಲ್ವರು ಮಹಿಳಾ ಸೇನಾ ಸಿಬ್ಬಂದಿಯನ್ನು ಬಿಡುಗಡೆ ಮಾಡಲಾಗಿದೆ. ಇದಕ್ಕೆ ಪ್ರತಿಯಾಗಿ ಇಸ್ರೇಲ್‌ನ ವಶದಲ್ಲಿದ್ದರುವ 200 ಪ್ಯಾಲೆಸ್ಟೀನ್ ಕೈದಿಗಳನ್ನು ಬಿಡುಗಡೆಗೊಳಿಸಲಾಗಿದೆ. ಇಸ್ರೇಲ್ ಬಿಡುಗಡೆ ಮಾಡಿರುವ 200 ಪ್ಯಾಲೆಸ್ಟೀನ್ ಕೈದಿಗಳ ಪಟ್ಟಿಯನ್ನು ಹಮಾಸ್ ಬಿಡುಗಡೆ ಮಾಡಿದೆ. ಈ ಪಟ್ಟಿಯಲ್ಲಿ ದೀರ್ಘಾವಧಿಯ ಶಿಕ್ಷೆಗೆ ಗುರಿಯಾದವರು ಸೇರಿದಂತೆ ಇತರರು ಇದ್ದಾರೆ ಎಂದು ತಿಳಿದುಬಂದಿದೆ.

ಈಚೆಗೆ ಹಮಾಸ್ ವಶದಲ್ಲಿದ್ದ ಇಸ್ರೇಲ್‌ನ ಮೂರು ಮಂದಿ ಒತ್ತೆಯಾಳುಗಳು ಬಿಡುಗಡೆಯಾದ ಬೆನ್ನಲ್ಲೇ, ಇಸ್ರೇಲ್‌ನ ವಶದಲ್ಲಿದ್ದ 90ಕ್ಕೂ ಅಧಿಕ ಪ್ಯಾಲೆಸ್ಟೀನ್ ಕೈದಿಗಳನ್ನು ಬಿಡುಗಡೆಗೊಳಿಸಲಾಗಿತ್ತು. ಕದನ ವಿರಾಮ ಏರ್ಪಟ್ಟ ಬೆನ್ನಲ್ಲೇ, ಉಭಯ ರಾಷ್ಟ್ರಗಳಲ್ಲಿ ಸಂಭ್ರಮಾಚರಣೆಗಳು ನಡೆಯುತ್ತಿವೆ. ಒಡಂಬಡಿಕೆ ಪ್ರಕಾರ, ಹಮಾಸ್ ಬಂಡುಕೋರರು ಮೊದಲ ದಿನ ಮೂವರು ಮಹಿಳಾ ಒತ್ತೆಯಾಳುಗಳು, 7ನೇ ದಿನ ನಾಲ್ವರು, ಮುಂದಿನ ಐದು ವಾರಗಳಲ್ಲಿ 26 ಮಂದಿಯನ್ನು ಬಿಡುಗಡೆ ಮಾಡಲಿದ್ದಾರೆ. ಇದೇ ಅವಧಿಯಲ್ಲಿ ಪ್ಯಾಲೆಸ್ಟೀನ್ ಕೈದಿಗಳ ಬಿಡುಗಡೆ ಆಗಲಿದ್ದು, ಮೊದಲಿಗೆ ಬಿಡುಗಡೆ ಆಗುವವರಲ್ಲಿ ಯುವಜನರು, ಮಹಿಳೆಯರು ಸೇರಿದ್ದಾರೆ. ಇದಕ್ಕೆ ಪ್ರತಿಯಾಗಿ ಇಸ್ರೇಲ್ ಸೇನೆಯು ಹಮಾಸ್ ಬಂಡುಕೋರರ ನೆಲೆ ಗುರಿಯಾಗಿಸಿ ಗಾಜಾಪಟ್ಟಿಯ ಮೇಲೆ ನಿರಂತರ ದಾಳಿ ನಡೆಸುತ್ತಿದೆ. ಇದುವರೆಗೂ, ಈ ದಾಳಿಗೆ ಅಧಿಕೃತ ಮಾಹಿತಿ ಪ್ರಕಾರ 46,000 ಪ್ಯಾಲೆಸ್ಟೀನಿಯರು ಸಾವಿಗೀಡಾಗಿದ್ದಾರೆ.

ಅತಿ ಎತ್ತರದ ಸೇತುವೆ ಮೇಲೆ ವಂದೇಭಾರತ್ ರೈಲು ಪ್ರಾಯೋಗಿಕ ಸಂಚಾರ ಯಶಸ್ವಿ

ಶ್ರೀನಗರ: ಶ್ರೀ ಮಾತಾ ವೈಷ್ಣೋದೇವಿ ಕತ್ರಾ ನಿಲ್ದಾಣದಿಂದ ಶ್ರೀನಗರ ನಿಲ್ದಾಣದವರೆಗೆ ವಿಶ್ವದ ಅತಿ ಎತ್ತರದ ರೈಲ್ವೆ ಸೇತುವೆಯಾದ ಚೆನಾಬ್ ಸೇತುವೆಯ ಮೇಲೆ ವಂದೇ ಭಾರತ್ ರೈಲಿನ ಮೊದಲ ಪ್ರಾಯೋಗಿಕ ಸಂಚಾರಿಸಿದ್ದು, ಈ ಮೂಲಕ ರೈಲ್ವೇ ತಂತ್ರಜ್ಞಾನದಲ್ಲಿ ಭಾರತದ ಪರಾಕ್ರಮ ಸಂಪೂರ್ಣ ಪ್ರದರ್ಶನ ಗೊಂಡಿತು.

ಈ ರೈಲು ಅಂಜಿ ಖಾಡ್ ಸೇತುವೆಯ ಮೂಲಕ ಹಾದು ಹೋಗಲಿದೆ, ಇದು ಭಾರತದ ಮೊದಲ ಕೇಬಲ್ ತಂಗುವ ರೈಲ್ವೆಸೇತುವೆಯಾಗಿದೆ. ರೈಲನ್ನು ವಿನ್ಯಾಸಗೊಳಿಸುವಾಗ ಹವಾಮಾನದ ಹೊಂದಾಣಿಕೆಯು ಸಹ ಅಂಶವಾಗಿದೆ, ಇದು ಕಣಿವೆಯ ಶೀತ ಹವಾಮಾನ ಪರಿಸ್ಥಿತಿಗಳಲ್ಲಿ ಪ್ರಯಾಣಿಸುವಾಗ ಪ್ರಯಾಣಿಕರ ಸೌಕರ್ಯವನ್ನು ಗಮನದಲ್ಲಿಟ್ಟುಕೊಂಡು. ರೈಲು -30 ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆ ತಾಪಮಾನದಲ್ಲಿ ಕಾರ್ಯನಿರ್ವಹಿಸುತ್ತದೆ. ಚೇರ್-ಕಾರ್ ರೈಲು ನೀರನ್ನು ಘನೀಕರಿಸುವಿಕೆ ಮತ್ತು ಜೈವಿಕ-ಶೌಚಾಲಯ ಟ್ಯಾಂಕ್‌ಗಳಿಂದ ಇರಿಸಿ ಕೊಳ್ಳಲು ಸುಧಾರಿತ ತಾಪನ ವ್ಯವಸ್ಥೆಯನ್ನು ಹೊಂದಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಮೇಕ್ ಇನ್ ಇಂಡಿಯಾ ಉಪಕ್ರಮಕ್ಕೆ ದೊಡ್ಡ ಉತ್ತೇಜನ ನೀಡುವಂತೆ, ಕೇಂದ್ರ ರೈಲ್ವೇ ಸಚಿವ ಅಶ್ವಿನಿ ವೈಷ್ಣವ್ ಅವರು ಭಾರತದಿಂದ ಅರೆ-ಹೈ ವೇಗದ ವಂದೇ ಭಾರತ್ ರೈಲುಗಳನ್ನು ಪಡೆಯಲು ಇತರ ರಾಷ್ಟ್ರಗಳು ಆಸಕ್ತಿ ವ್ಯಕ್ತಪಡಿಸಿವೆ ಎ

ಬಿಗ್ ಬಾಸ್ ಫಿನಾಲೆಗೆ ಗ್ರ್ಯಾಂಡ್ ಎಂಟ್ರಿ ಕೊಟ್ಟ ಕಿಚ್ಚ

ಕನ್ನಡದ 'ಬಿಗ್ ಬಾಸ್ ಸೀಸನ್ 11'ಕ್ಕೆ ಗ್ರ್ಯಾಂಡ್ ಫಿನಾಲೆಗೆ ಅದ್ಧೂರಿಯಾಗಿ ಚಾಲನೆ ನೀಡಲಾಗಿದೆ. ಸುದೀಪ್ ಅವರ ಕೊನೆ ಸೀಸನ್‌ನಲ್ಲಿ ಏನೇನು ಹೇಳಲಿದ್ದಾರೆ ಎನ್ನುವುದನ್ನು ನೋಡಲು ಫ್ಯಾನ್ಸ್ ಕಾತರದಿಂದ ಎದುರು ನೋಡುತ್ತಿದ್ದಾರೆ. ಗ್ರ್ಯಾಂಡ್ ಫಿನಾಲೆಗೆ ಭರ್ಜರಿಯಾಗಿ ರೆಡಿಯಾಗಿರುವ ವೇದಿಕೆ ಮೇಲೆ ಸುದೀಪ್ ಅವರು ಸಖತ್ ಆಗಿ ಹೆಜ್ಜೆ ಹಾಕಿದ್ದಾರೆ. ಕಿಚ್ಚನ ಎಂಟ್ರಿಯ ಪ್ರೋಮೋವನ್ನು ವಾಹಿನಿ ಹಂಚಿಕೊಂಡಿದೆ.

ಸುದೀಪ್ ಅವರ 'ಬಿಗ್ ಬಾಸ್ ಸೀಸನ್ 11'ರ ನಿರೂಪಣೆಯು ಕೊನೆಯ ಸೀಸನ್ ಆಗಿದೆ. ಈ ಹೊತ್ತಿನಲ್ಲಿ ಮನೆಯಲ್ಲಿರುವ 6 ಸ್ಪರ್ಧಿಗಳ ಪೈಕಿ ಒಬ್ಬರಿಗೆ ಅತಿ ಹೆಚ್ಚು ಮತಗಳು ಬಂದಿವೆ. ಆದರೆ ನಿಖರವಾಗಿ ಯಾರಿಗೆ ಎಂದು ತಿಳಿದಿಲ್ಲ. ಸೀಸನ್ 11ರ ವಿನ್ನರ್ ಯಾರೆಂಬುದು ಸಾಕಷ್ಟು ಚರ್ಚೆಗಳು ಪ್ರೇಕ್ಷಕರಲ್ಲಿ ನಡೆಯುತ್ತಿವೆ. ಕಲರ್‌ಫುಲ್ ವೇದಿಕೆಯಲ್ಲಿ ಸುದೀಪ್ ಸಖತ್ ಆಗಿಯೇ ಎಂಟ್ರಿ ಕೊಟ್ಟಿದ್ದಾರೆ. ಇತ್ತೀಚೆಗೆ ರಿಲೀಸ್ ಆಗಿ ಯಶಸ್ಸು ಕಂಡ 'ಮ್ಯಾಕ್ಸ್' ಸಿನಿಮಾದ ಸಾಂಗ್‌ಗೆ ನಟ ಜಬರ್‌ದಸ್ತ್ ಆಗಿ ಹೆಜ್ಜೆ ಹಾಕಿದ್ದಾರೆ. ಅಷ್ಟು ಸುಲಭವಾಗಿ ಎಲ್ಲಿಯೂ ಸುದೀಪ್ ಅವರು ವೇದಿಕೆ ಮೇಲೆ ಡ್ಯಾನ್ಸ್ ಮಾಡಲ್ಲ.

ಆದರೆ ಈ ಬಾರಿ ಸುದೀಪ್ ಒಂದೆರಡು ಹೆಜ್ಜೆಗಳನ್ನು ಹಾಕಿ ಅಭಿಮಾನಿಗಳನ್ನು ರಂಜಿಸಿದ್ದಾರೆ. ಒಟ್ಟು 6 ಜನರಲ್ಲಿ ಒಬ್ಬರು ಮಾತ್ರ ಫೈನಲ್‌ನಲ್ಲಿ ಟ್ರೋಫಿ ಎತ್ತಿ ಹಿಡಿಯಲಿದ್ದಾರೆ. ಸದ್ಯ ಉಗ್ರಂ ಮಂಜು, ಮೋಕ್ಷಿತಾ ಪೈ, ರಜತ್, ಭವ್ಯಾ, ತ್ರಿವಿಕ್ರಮ್, ಹನುಂತ ಫಿನಾಲೆಯಲ್ಲಿದ್ದಾರೆ. ಇವರಲ್ಲಿ ಯಾರು ಬಿಗ್ ಬಾಸ್ ಪಟ್ಟಗೆದ್ದು ಬೀಗಲಿದ್ದಾರೆ ಎಂದು ಕಾಯಬೇಕಿದೆ. ಜ.25 ಮತ್ತು ಜ.26ರಂದು ಗ್ರ್ಯಾಂಡ್ ಫಿನಾಲೆ ನಡೆಯಲಿದ್ದು, ಸಂಜೆ 6ಕ್ಕೆ ಕಾರ್ಯಕ್ರಮ ಪ್ರಸಾರ ಆಗಲಿದೆ.

ತನಿಷಾ ಕುಪ್ಪಂಡ ಸೀರೆ ಫೋಟೋ ವೈರಲ್

ಸೀರೆಯಲ್ಲಿ ಮಿಂಚಿದ ಕುಪ್ಪಂಡ. ನೇರಳೆ ಬಣ್ಣ ಸೂಪರ್ ಎಂದು ಕಾಮೆಂಟ್ ಮಾಡಿದ ನೆಟ್ಟಿಗರು..... ಬಿಗ್ ಬಾಸ್ ಸೀಸನ್ 10ರ ಸ್ಪರ್ಧಿ, ಸ್ಯಾಂಡಲ್‌ವುಡ್ ನಟಿ ತನಿಷಾ ಕುಪ್ಪಂಡ ಇದೀಗ ನೇರಳೆ ಬಣ್ಣದ ಕಾಟನ್ ಸೀರೆಯಲ್ಲಿ ಮಿಂಚುತ್ತಿದ್ದಾರೆ. ಇನ್‌ಸ್ಟಾಗ್ರಾಂನಲ್ಲಿ ಫೋಟೋ ಅಪ್ಲೋಡ್ ಮಾಡಿದ್ದಾರೆ.

ತನಿಷಾ ಬರೆದುಕೊಂಡಿದ್ದಾರೆ. ಇದು ತನಿಷಾ ಅಂಗಡಿಯ ಆಭರಣಗಳು. ಹೌದು! ಬಿಗ್ ಬಾಸ್ ಮನೆಯಿಂದ ಹೊರ ಬರುತ್ತಿದ್ದಂತೆ ಅಪ್ಪಟ ಬೆಳ್ಳೆ ಆಭರಣಗಳ ಅಂಗಡಿ ತೆರೆದರು. ಇದಾದ ಕೆಲವೇ ತಿಂಗಳಿನಲ್ಲಿ ಚಿನ್ನ ವಜ್ರದ ಅಂಗಡಿ ತೆರೆದರು. ಆಭರಣದ ಅಂಗಡಿ ಮಾತ್ರವಲ್ಲದೆ ಅಪ್ಪು ಹೆಸರಿನಲ್ಲಿ ಹೋಟೆಲ್ ಕೂಡ ಹೊಂದಿದ್ದಾರೆ. ಹೀಗಾಗಿ ತನಿಷಾ ಸಿನಿಮಾ ಸೀರಿಯಲ್‌ಗಳಲ್ಲಿ ಮಾತ್ರವಲ್ಲ ಬ್ಯುಸಿನೆಸ್‌ನಲ್ಲೂ ಸಖತ್ ಆಕ್ಟಿವ್. ನೇರಳೆ ಬಣ್ಣದ ಸೀರೆಯಲ್ಲಿ ಕೋರಿಯನ್ ಹಾರ್ಟ್ ಮತ್ತು ನಾರ್ಮಲ್ ಹಾರ್ಟ್ ಫೋಸ್ ಕೊಟ್ಟಿದ್ದಾರೆ. ನಿಮ್ಮ ಹಾರ್ಟ್ ದೊಡ್ಡದು ಮೇಡಂ ಎಂದು ಫ್ಯಾನ್ಸ್ ಕಾಮೆಂಟ್ ಮಾಡಿದ್ದಾರೆ. ಇದೀಗ ಕೋಣ ಸಿನಿಮಾದಲ್ಲಿ ತನಿಷಾ ನಟಿಸುತ್ತಿದ್ದಾರೆ. ವಿಶೇಷ ಏನೆಂದರೆ ಇದು ತನಿಷಾ ನಿರ್ಮಾಣ ಮಾಡುತ್ತಿರುವ ಮೊದಲ ಚಿತ್ರ. ಹೀಗಾಗಿ ಜನರ ನಿರೀಕ್ಷೆ ಚಿತ್ರದ ಮೇಲೆ ಹೆಚ್ಚಿದೆ.

ದೊಡ್ಡ ಪರದೆಯಲ್ಲಿ ಮತ್ತೆ ಪದ್ಮಾವತ್ ದರ್ಶನ

ಕೆಲವು ಸಿನಿಮಾಗಳು ಎವರ್‌ಗ್ರೀನ್ ಆಗಿರುತ್ತವೆ. ಮರು ಬಿಡುಗಡೆ ಆಗಲಿ ಎಂದು ಫ್ಯಾನ್ಸ್ ಕಾಯುವಂತಿರುತ್ತವೆ. ಬಾಲಿವುಡ್‌ನ 'ಪದ್ಮಾವತ್' ಸಿನಿಮಾ ಕೂಡ ಅಂಥ ಚಾರ್ಮ್ ಉಳಿಸಿಕೊಂಡಿದೆ. 2028ರ ಜನವರಿ 25ರಂದು 'ಪದ್ಮಾವತ್' ಸಿನಿಮಾ ತೆರೆಕಂಡಿತ್ತು. ಆಗ ಬಾಕ್ಸ್ ಆಫೀಸ್‌ನಲ್ಲಿ ಭರ್ಜರಿ ಕಮಾಯಿ ಮಾಡಿತ್ತು. ಈಗ 7 ವರ್ಷಗಳ ಬಳಿಕ ಈ ಸಿನಿಮಾ ಮತ್ತೆ ದೊಡ್ಡ ಪರದೆಯಲ್ಲಿ ಪ್ರದರ್ಶನ ಕಾಣಲು ಸಜ್ಜಾಗಿದೆ. ಹೌದು, ಫೆಬ್ರವರಿ 6ರಂದು 'ಪದ್ಮಾವತ್' ಸಿನಿಮಾ ಮರು ಬಿಡುಗಡೆ ಆಗಲಿದೆ. ಇದು ಅಭಿಮಾನಿಗಳಿಗೆ ಖುಷಿ ನೀಡಿದೆ. ಪದ್ಮಾವತ್' ಸಿನಿಮಾಗೆ ಸಂಜಯ್ ಲೀಲಾ ಬನ್ಸಾಲಿ ನಿರ್ದೇಶನ ಮಾಡಿದ್ದಾರೆ. ಈ ಚಿತ್ರದಲ್ಲಿ ರಣವೀರ್ ಸಿಂಗ್, ದೀಪಿಕಾ ಪಡುಕೋಣೆ, ಶಾಹಿದ್ ಕಪೂರ್ ಅವರು ಪ್ರಮುಖ ಪಾತ್ರಗಳನ್ನು ನಿಭಾಯಿಸಿದ್ದಾರೆ. ಐತಿಹಾಸಿಕ ಕಥಾಹಂದರ ಹೊಂದಿರುವ ಈ ಸಿನಿಮಾ ಸಖತ್ ಅದ್ಧೂರಿಯಾಗಿ ಮೂಡಿಬಂದಿದೆ. ವಿಮರ್ಶಕರಿಂದ ಹಾಗೂ ಪ್ರೇಕ್ಷಕರಿಂದ ಭರಪೂರ ಮೆಚ್ಚುಗೆ ಪಡೆದುಕೊಂಡಿದೆ. ರಣವೀರ್ ಸಿಂಗ್ ಅವರು 'ಪದ್ಮಾವತ್' ಸಿನಿಮಾದಲ್ಲಿ ಅಲ್ಲಾವುದ್ದೀನ್ ಖಿಲ್ಜಿ ಪಾತ್ರವನ್ನು ಮಾಡಿದ್ದಾರೆ. ರಾಣಿ ಪದ್ಮಾವತಿ ಪಾತ್ರದಲ್ಲಿ ದೀಪಿಕಾ ಪಡುಕೋಣೆ ನಟಿಸಿದ್ದಾರೆ. ರಾವಲ್ ರತನ್ ಸಿಂಗ್ ಪಾತ್ರದಲ್ಲಿ ಶಾಹಿದ್ ಕಪೂರ್ ಕಾಣಿಸಿಕೊಂಡಿದ್ದಾರೆ.

ಸೋಮೇಗೌಡಗೆ ಚಳಿ ಬಿಡಿಸಿದ ಪಾರು, ಅಕ್ಕಂಗೆ ಲವ್ವಾಯ್ತಾ

ಸೋಮೆಗೌಡ ಅಚಾನಕ್ ಆಗಿ ಒಂದು ಅಂಗಡಿ ಬಳಿ ಸಿಗರೇಟ್ ಕೇಳಲು ಬರುತ್ತಾನೆ. ಆದರೆ ಅಂಗಡಿಯಲ್ಲಿ ಸಿಗರೇಟ್ ಹಾಗೆಯೇ ಯಾವುದೇ ಅಂತಹ ವಸ್ತುಗಳನ್ನು ಮಾರಾಟ ಮಾಡುವುದಿಲ್ಲ. ಸೋಮೇಗೌಡಗೆ ಮೊದಲು ಇದು ಶಿವು ಅಂಗಡಿ ಎಂದು ತಿಳಿದಿರುವುದಿಲ್ಲ. ಅದಾದ ಬಳಿಕ ಅಂಗಡಿಗೆ ಶಿವು ಬರುತ್ತಾನೆ. ಆತನನ್ನು ನೋಡಿದ ಸೋಮೇಗೌಡಗೆ ಕೋಪ ಉಕ್ಕಿ ಹರಿಯುತ್ತದೆ. ತನ್ನ ಕುತ್ತಿಗೆ ಸರಿ ಮಾಡುತ್ತೇನೆ ಎಂದು ಹೇಳಿ ಕುತ್ತಿಗೆಯ ಕೀಲನ್ನೇ ಮುರಿದು ಹಾಕಿರುತ್ತಾನೆ. ಇದೆಲ್ಲವನ್ನೂ ಮನದಲ್ಲಿಟ್ಟುಕೊಂಡೇ ಸೋಮೇಗೌಡ ಕೊಂಚ ಜೋರಾಗಿಯೇ ಶಿವು ಬಳಿ ಮಾತನಾಡಿದಾಗ ಮುರಿದ ಕುತ್ತಿಗೆಯನ್ನು ಸರಿಪಡಿಸಲೇ ಎಂದು ಇನ್ನಷ್ಟು ಕೋಪಕ್ಕೆ ತುಪ್ಪ ಸುರಿಯುತ್ತಾನೆ.

ಸೋಮಗೌಡರು ಶಿವುವನ್ನು ಬಹಳ ಕೋಪದಿಂದ ತಳ್ಳುತ್ತಾರೆ. ಆ ಕೂಡಲೇ ಅಲ್ಲಿಗೆ ಬಂದ ಪಾರುವನ್ನು ನೋಡಿ ಇಂತಹ ಹುಡುಗಿಯನ್ನು ನಾನು ಮದುವೆಯಾಗದೆ ಬಿಟ್ಟೆನಲ್ಲ ಎಂದು ಬಹಳ ಬೇಸರ ಪಡುತ್ತಾನೆ ಸೋಮೇಗೌಡ. ಅದಾದ ಬಳಿಕ ಪಾರು ಹಾಗೂ ಶಿವುವನ್ನು ನೋಡಿ ಇದೆಂತಹ ಸಂಬಂಧವಯ್ಯಾ.

ಹುಡುಗಿ ನೋಡಲು ಬಹಳ ಅಂದವಾಗಿದ್ದಾಳೆ. ಆದರೆ ಆಕೆಗೂ ಶಿವುಗೆ ಯಾವುದೇ ರೀತಿಯಲ್ಲಿ ಮ್ಯಾಚ್ ಆಗುತ್ತಿಲ್ಲ ಎಂದು ಮನದಲ್ಲಿ ಅಂದುಕೊಳ್ಳುತ್ತಾನೆ. ಪಾರು ಹತ್ತಿರ ಬಂದು ಸೋಮೇಗೌಡ, ಪಾರು ಜೊತೆ ಏನೇನೋ ಮಾತನಾಡಲು ಶುರು ಮಾಡುತ್ತಾನೆ ಆದರೆ ಪಾರು ಗೆ ಸಿಟ್ಟು ಬಂದು ಪೊರಕೆ ಕೇಳುತ್ತಾಳೆ. ಆ ಕೂಡಲೇ ಅಲ್ಲಿಯೇ ಇದ್ದ ಹುಡುಗರು ಪೊರಕೆಯನ್ನು ಪಾರು ಕೈ ಗೆ ನೀಡುತ್ತಾರೆ.

ಶಿವು ಬಗ್ಗೆ ತುಚ್ಛವಾಗಿ ಮಾತನಾಡಿದ ಸೋಮೇಗೌಡ ಪಾರು ಬಹಳ ಕೋಪದಿಂದ ಸೋಮೇಗೌಡರಿಗೆ ಪೊರಕೆ ಸೇವೆ ಮಾಡುತ್ತಾಳೆ. ಇದೆಲ್ಲವನ್ನೂ ನೋಡಿದ ಊರ ಮಂದಿಗೆ ಬಹಳಷ್ಟು ಖುಷಿ ಆಗುತ್ತದೆ. ಮನೆಗೆ ಬಂದ ಪಾರು ಗೆ ಶಿವು ತಂಗಿಯರು ಆರತಿ ಎತ್ತಿ ಮನೆಯೊಳಗೆ ಕರೆದುಕೊಳ್ಳುತ್ತಾರೆ. ಅದರಲ್ಲೂ ಶಿವು ಚಿಕ್ಕ ತಂಗಿ ಬಹಳಷ್ಟು ಖುಷಿಗೊಂಡು ನಾವು ನೀರು ತೆಗೆದುಕೊಂಡು ಬರಲು ಹೋದಾಗ ನೀವು ಬನ್ನಿ ನಿಮ್ಮನ್ನು ನೋಡಿ ಊರಿನ ಹೆಂಗಸರು ಭಯದಿಂದ ನಮಗೆ ಬೇಗ ನೀರು ಕೊಡುತ್ತಾರೆ ಎಂದು ಹೇಳಿ ಕಿಚಾಯಿಸುತ್ತಾಳೆ .

ಕನ್ನಡದ ವಿಷ್ಣು ವಿಜಯದಲ್ಲಿ ನಟಿಸಿದ್ದ ಮಮತಾ ಕುಲಕರ್ಣಿ ಈಗ ಸನ್ಯಾಸಿನಿ

ಬಾಲಿವುಡ್ ಹಾಗೂ ದಕ್ಷಿಣ ಸಿನಿಮಾದಲ್ಲಿ ನಟಿಸಿ ಖ್ಯಾತಿ ಪಡೆದಿದ್ದ ನಟಿ ಮಮತಾ ಕುಲಕರ್ಣಿ ಇದೀಗ ಲೌಕಿಕ ಜಗತ್ತನ್ನು ತೊರೆದು ಆಧ್ಯಾತ್ಮಿಕ ಜಗತ್ತಿಗೆ ಇಳಿದಿದ್ದಾರೆ. 90ರ ದಶಕದಲ್ಲಿ ಬಾಲಿವುಡ್ ಸೇರಿದಂತೆ ಕನ್ನಡ ಸಿನಿಮಾದಲ್ಲಿ ನಟಿಸಿರುವ ಮಮತಾ, ಇದೀಗ ಕಿನ್ನರ ಅಖಾಡಕ್ಕೆಳಿಯುವ ಮೂಲಕ ಮಹಾಮಂಡಲೇಶ್ವರಿಯಾಗಿದ್ದಾರೆ. ಮಮತಾ ಕುಲಕರ್ಣಿ ಹೆಸರನ್ನು ಬದಲಿಸಿಕೊಂಡು 'ಮಾಯಿ ಮಮತಾ ನಂದಗಿರಿ' ಎಂದು ನಾಮಕರಣ ಮಾಡಿಕೊಂಡಿದ್ದಾರೆ. ಮಹಾಕುಂಭಮೇಳದಲ್ಲಿ ಬಾಗಿಯಾಗಿರುವ ನಟಿ, ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದರು. ಬಳಿಕ ತಮ್ಮ ಸ್ವಂತ ಪಿಂಡ ಪ್ರದಾನಮಾಡುವ ಮೂಲಕ ಜೂನಾ ಅಖಾ ಡದ ಅಡಿ ಕಾರ್ಯನಿರ್ವಹಿಸುವ ಕಿನ್ನರ ಅಖಾಡಕ್ಕೆ ಸೇರಿಕೊಂಡಿದ್ದು, ಮಹಾಮಂಡಲೇಶ್ವರರಾಗಿದ್ದಾರೆ. ಇವರಿಗೆ ಕಿನ್ನರ ಅಖಾಡದ ಆಚಾರ್ಯ ಮಹಾಮಂಡಲೇಶ್ವರ ಲಕ್ಷ್ಮಿ ನಾರಾಯಣ ತ್ರಿಪಾಠಿ ದೀಕ್ಷೆ ನೀಡಿದರು. ಕಳೆದ 2 ವರ್ಷಗಳಿಂದ ಜೂನಾ ಅಖಾಡದೊಂದಿಗೆ ಸಂಪರ್ಕದಲ್ಲಿದ್ದ ಮಮತಾ, 2-3 ತಿಂಗಳಿಂದ ಕಿನ್ನರ ಅಖಾಡದೊಂದಿಗೆ ನಿಕಟ ಸಂಪರ್ಕ ಬೆಳೆ ಸಿಕೊಂಡಿದ್ದರು. ಇದೀಗ ಅದೇ ಅಖಾಡದ ಭಾಗವಾಗಲು ನಿರ್ಧರಿಸಿದ್ದಾರೆ. ಸದ್ಯ ಜ29ರಂದು ಮೌನಿ ಅಮಾವಾಸ್ಯೆಯ ಪವಿತ್ರ ಸ್ನಾನಕ್ಕಾಗಿ ಪ್ರಯಾಗರಾಜ್ ನಲ್ಲಿದ್ದಾರೆ. ನಟಿ ಕನ್ನಡದ ವಿಷ್ಣು ವಿಜಯ ಸಿನಿಮಾದಲ್ಲಿ ನಟಿಸಿದ್ದು, ವಕ್ತ ಹಮಾರಾ ಹೈ, ಕ್ರಾಂತಿವೀರ, ಸಬ್ಸೆ ಬಡಾ ಕಿಲಾಡಿ ಇನ್ನಿತರ ಬಾಲಿವುಡ್ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಒಂದೇ ಎಸೆತದಲ್ಲಿ ಇಬ್ಬರು ಔಟ್

ಒಂದೇ ಎಸೆತದಲ್ಲಿ ಇಬ್ಬರು ಔಟ್... ಇದು ಹೇಗೆ ಸಾಧ್ಯ ಎಂಬ ಪ್ರಶ್ನೆ ಮೂಡುವುದು ಸಹಜ. ಆದರೆ ಇಂತಹದೊಂದು ನಿಯಮವನ್ನು ಪರಿಚಯಿಸಲು ಕ್ರಿಕೆಟ್ ಆಸ್ಟ್ರೇಲಿಯಾ ಮುಂದಾಗಿದೆ. ಅದು ಸಹ ವರ್ಣರಂಜಿತ ಕ್ರಿಕೆಟ್ ಟೂರ್ನಿ ಬಿಗ್ ಬ್ಯಾಷ್ ಲೀಗ್‌ನಲ್ಲಿ ಎಂಬುದು ವಿಶೇಷ.

ಬಿಗ್ ಬ್ಯಾಷ್ ಲೀಗ್‌ನ 15ನೇ ಸೀಸನ್‌ನಲ್ಲಿ ಕ್ರಿಕೆಟ್ ಆಸ್ಟ್ರೇಲಿಯಾ ಒಟ್ಟು 4 ಹೊಸ ನಿಯಮಗಳನ್ನು ಪರಿಚಯಿಸಲು ಚರ್ಚೆ ನಡೆಸಿದೆ. ಈ ನಿಯಮಗಳಲ್ಲಿ ಎಲ್ಲರ ಗಮನ ಸೆಳೆದಿರುವುದು ಒಂದೇ ಎಸೆತದಲ್ಲಿ ಇಬ್ಬರು ಔಟ್. ಬಿಗ್ ಬ್ಯಾಷ್ ಲೀಗ್ 2025-26 ರಲ್ಲಿ ಕಂಡು ಬರಲಿರುವ ಹೊಸ ನಿಯಮಗಳ ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆ...

ಡಿಸೈನೆಟೆಡ್ ಹಿಟ್ಟರ್: ಮುಂಬರುವ ಬಿಗ್ ಬ್ಯಾಷ್ ಲೀಗ್‌ನಲ್ಲಿ ಡಿಸೈನೆಟೆಡ್ ಹಿಟ್ಟರ್ ನಿಯಮ ಜಾರಿಗೆ ಬರುವ ಸಾಧ್ಯತೆಯಿದೆ. ಈ ನಿಯಮದ ಪ್ರಕಾರ, ಓರ್ವ ಆಟಗಾರನನ್ನು ಕೇವಲ ಬ್ಯಾಟರ್ ಆಗಿ ಕಣಕ್ಕಿಳಿಸಬಹುದು. ಆತ ಫೀಲ್ಡಿಂಗ್ ಅಥವಾ ಬೌಲಿಂಗ್ ಮಾಡಬೇಕೆಂದಿಲ್ಲ. ಬೌಲಿಂಗ್ ಬಳಿಕ ಆಡುವ ಬಳಗದಿಂದ ಓರ್ವನನ್ನು ಕೈ ಬಿಟ್ಟು ಬ್ಯಾಟರ್ ಒಬ್ಬರನ್ನು ಕಣಕ್ಕಿಳಿಸಬಹುದು. **ಡಬಲ್ ಪ್ಲೇ ಔಟ್:** ಈ ನಿಯಮದ ಪ್ರಕಾರ, ಒಂದೇ ಎಸೆತದಲ್ಲಿ ಇಬ್ಬರು ಬ್ಯಾಟ್ಸ್‌ಮನ್‌ಗಳನ್ನು ಔಟ್ ಮಾಡಬಹುದು. ಇಲ್ಲಿ ಒಬ್ಬ ಬ್ಯಾಟರ್ ಕ್ಯಾಚ್ ನೀಡಿದರೆ, ಕ್ಯಾಚ್ ಹಿಡಿದ ಬಳಿಕ ಮತ್ತೊಂದು ತುದಿಯಲ್ಲಿ ಓಡುವ ಮತ್ತೋರ್ವ ಬ್ಯಾಟರ್ ಅನ್ನು ರನೌಟ್ ಮಾಡುವ ಅವಕಾಶ ಇರಲಿದೆ. ಅಥವಾ ಬೌಲ್ಡ್ ಬೆನ್ನಲ್ಲೇ ನಾನ್ ಸ್ಟ್ರೈಕರ್‌ನಲ್ಲಿರುವ ಬ್ಯಾಟರ್ ಅನ್ನು ರನೌಟ್ ಮಾಡಬಹುದು. ಈ ಮೂಲಕ ಒಂದೇ ಎಸೆತದಲ್ಲಿ ಸ್ಟ್ರೈಕರ್ ಹಾಗೂ ನಾನ್ ಸ್ಟ್ರೈಕರ್ ಅನ್ನು ಔಟ್ ಮಾಡುವ ನಿಯಮವನ್ನು ಪರಿಚಯಿಸಲು ಕ್ರಿಕೆಟ್ ಆಸ್ಟ್ರೇಲಿಯಾ ಮುಂದಾಗಿದೆ. **ಮೇಡನ್ ಓವರ್:** ಒಬ್ಬ ಬೌಲರ್ ಮೇಡನ್ ಓವರ್ ಎಸೆಯಲು ಸಾಧ್ಯವಾದರೆ, ಆ ಬೌಲರ್‌ಗೆ ಹೆಚ್ಚುವರಿ 1 ಓವರ್ ನೀಡಲಾಗುತ್ತದೆ. ಸಾಮಾನ್ಯವಾಗಿ ಟಿ20 ಕ್ರಿಕೆಟ್‌ನಲ್ಲಿ ಒಬ್ಬ ಬೌಲರ್‌ಗೆ 4 ಓವರ್ ಇರುತ್ತದೆ. ಈ ಹೊಸ ನಿಯಮದ ಪ್ರಕಾರ, ಮೇಡನ್ ಓವರ್ ಎಸೆದ ಬೌಲರ್ ಒಟ್ಟು 5 ಓವರ್‌ಗಳನ್ನು ಬೌಲಿಂಗ್ ಮಾಡಬಹುದು. **ಬ್ಯಾಕ್ ಟು ಬ್ಯಾಕ್ ಓವರ್‌ಗಳು:** ಬಿಬಿಎಲ್-15 ರಲ್ಲಿ ಬ್ಯಾಕ್ ಟು ಬ್ಯಾಕ್ ಓವರ್‌ಗಳನ್ನು ಎಸೆಯಲು ಅವಕಾಶ ನೀಡುವ ಬಗ್ಗೆ ಚಿಂತಿಸಲಾಗಿದೆ. ಅಂದರೆ ಒಬ್ಬ ಬೌಲರ್ ಒಂದು ಓವರ್ ಮುಗಿಸಿದ ಬಳಿಕ 2ನೇ ಓವರ್ ಎಸೆಯಬಹುದು. ಅದರಂತೆ ಸತತ 12 ಎಸೆತಗಳನ್ನು ಎಸೆಯಲು ಅವಕಾಶ ನೀಡಲಾಗುತ್ತದೆ.

ಬಲಿಷ್ಠ ಮುಂಬೈಗೆ ಸೋಲುಣಿಸಿದ ಜಮ್ಮು-ಕಾಶ್ಮೀರ..!

ಟೀಮ್ ಇಂಡಿಯಾದ 7 ಆಟಗಾರರನ್ನು ಒಳಗೊಂಡ ಮುಂಬೈ ತಂಡಕ್ಕೆ ಜಮ್ಮು ಕಾಶ್ಮೀರ ತಂಡ ಸೋಲುಣಿಸಿದೆ. ಅದು ಕೂಡ 5 ವಿಕೆಟ್‌ಗಳ ಭರ್ಜರಿ ಜಯದೊಂದಿಗೆ ಎಂಬುದು ವಿಶೇಷ. ಮುಂಬೈನ ಶರದ್ ಪವಾರ್ ಕ್ರಿಕೆಟ್ ಅಕಾಡೆಮಿ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ಮುಂಬೈ ತಂಡದ ನಾಯಕ ಅಜಿಂಕ್ಯ ರಹಾನೆ ಬ್ಯಾಟಿಂಗ್ ಆಯ್ದುಕೊಂಡಿದ್ದರು. ಆದರೆ ಮುಂಬೈ ತಂಡದ ತೀರ್ಮಾನಕ್ಕೆ ಮೊದಲ ದಿನವೇ ಜಮ್ಮು-ಕಾಶ್ಮೀರ ಬೌಲರ್‌ಗಳು ತಿರುಗೇಟು ನೀಡಿದ್ದರು. 12 ರನ್‌ಗಳಿಸುವಷ್ಟರಲ್ಲಿ ಅನುಭವಿ ಆಟಗಾರ ರೋಹಿತ್ ಶರ್ಮಾ (3) ಹಾಗೂ ಯಶಸ್ವಿ ಜೈಸ್ವಾಲ್ (4) ವಿಕೆಟ್ ಕಬಳಿಸಿ ಆರಂಭಿಕ ಆಘಾತ ನೀಡಿದರು. ಆ ಬಳಿಕ ಬಂದ ಶಿವಂ ದುಬೆ ಸೊನ್ನೆ ಸುತ್ತಿದರೆ, ಅಜಿಂಕ್ಯ ರಹಾನೆ 12 ರನ್‌ಗಳಿಸಿದರು. ಇನ್ನು ಶ್ರೇಯಸ್ ಅಯ್ಯರ್ 11 ರನ್‌ಗಳಿಸಲಷ್ಟೇ ಶಕ್ತರಾಗಿದ್ದರು. ಇನ್ನು ಕೆಳ ಕ್ರಮಾಂಕದಲ್ಲಿ ಕಣಕ್ಕಿಳಿದ ಶಾರ್ದೂಲ್ ಠಾಕೂರ್ 51 ರನ್‌ಗಳ ಕೊಡುಗೆ ನೀಡಿ ತಂಡದ ಮೊತ್ತವನ್ನು 100ರ ಗಡಿದಾಟಿಸಿದರು. ಇದಾಗ್ಯೂ ಮುಂಬೈ ಮೊದಲ ಇನಿಂಗ್ಸ್‌ನಲ್ಲಿ ಕೇವಲ 120 ರನ್‌ಗಳಿಗೆ ಆಲೌಟ್ ಆಯಿತು. ಇದಕ್ಕುತ್ತರವಾಗಿ ಪ್ರಥಮ ಇನಿಂಗ್ಸ್ ಆಡಿದ ಜಮ್ಮು ಕಾಶ್ಮೀರ ಪರ ಶುಭಂ ಖಜುರಿಯಾ (53) ಅರ್ಧಶತಕ ಬಾರಿಸಿದರೆ, ಅಬಿದ್ ಮುಷ್ತಾಕ್ 44 ರನ್ ಸಿಡಿಸಿದರು. ಈ ಮೂಲಕ ಜಮ್ಮು ಕಾಶ್ಮೀರ ಮೊದಲ ಇನಿಂಗ್ಸ್‌ನಲ್ಲಿ 206 ರನ್ ಕಲೆಹಾಕಿತು.

ದ್ವಿತೀಯ ಇನಿಂಗ್ಸ್: 86 ರನ್‌ಗಳ ಹಿನ್ನಡೆಯೊಂದಿಗೆ ದ್ವಿತೀಯ ಇನಿಂಗ್ಸ್ ಆರಂಭಿಸಿದ ಮುಂಬೈ ತಂಡಕ್ಕೆ ರೋಹಿತ್ ಶರ್ಮಾ (28) ಹಾಗೂ ಯಶಸ್ವಿ ಜೈಸ್ವಾಲ್ (26) ಉತ್ತಮ ಆರಂಭ ಒದಗಿಸುವ ಸೂಚನೆ ನೀಡಿದ್ದರು. ಆದರೆ ಈ ಹಂತದಲ್ಲಿ ದಾಳಿಗಿಳಿದ ಯುದ್ವೀರ್ ಸಿಂಗ್ ಆರಂಭಿಕರಿಬ್ಬರು ಪೆವಿಲಿಯನ್‌ಗೆ ಕಳುಹಿಸುವಲ್ಲಿ ಸಫಲರಾದರು. ಆ ಬಳಿಕ ಬಂದ ಅಜಿಂಕ್ಯ ರಹಾನೆ (16), ಶ್ರೇಯಸ್ ಅಯ್ಯರ್ (17) ಬಂದ ವೇಗದಲ್ಲೇ ಹಿಂತಿರುಗಿದರು. ಇನ್ನು ಶಿವಂ ದುಬೆ ಸೊನ್ನೆ ಸುತ್ತುವ ಮೂಲಕ ನಿರಾಸೆ ಮೂಡಿಸಿದರು. ಈ ಹಂತದಲ್ಲಿ ಕಣಕ್ಕಿಳಿದ ಶಾರ್ದೂಲ್ ಠಾಕೂರ್ ಮುಂಬೈ ತಂಡಕ್ಕೆ ಆಸರೆಯಾಗಿ ನಿಂತರು. ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶಿಸಿದ ಶಾರ್ದೂಲ್ ಠಾಕೂರ್, ತನುಷ್ ಕೋಟ್ಯಾನ್ (62) ಜೊತೆಗೂಡಿ ಶತಕದ ಜೊತೆಯಾಟವಾಡಿದರು. ಇದರ ನಡುವೆ 135 ಎಸೆತಗಳನ್ನು ಎದುರಿಸಿದ ಶಾರ